ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ

ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

# ಮುಂಡರಗಿ

ಪ್ರಧಾನ ಸಂಪಾದಕರು

**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು

**ಡಾ. ಪ್ರಕಾಶ ಗ. ಖಾಡೆ**

ಲೇಖಕರು

**ಡಾ. ಉಮೇಶ ತಿಮ್ಮಾಪುರ**

**ಕರ್ನಾಟಕ ಸಾಹಿತ್ಯ ಅಕಾಡೆಮಿ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-೫೬೦ ೦೦೨

ದೂರವಾಣಿ: ೦೮೦-೨೨೨೧೧೭೩೦ / ೨೨೧೦೬೪೬೦

www.karnatakasahithyaacademy.org

ಇ-ಮೇಲ್: sahithya.academy@gmail.com

**MUNDARAGI:** An Introducing Book on the Places in Karnataka that Played a Major Role in the Freedom Struggle, Written by Dr. Umesh Timmapura, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ಡಾ. ಉಮೇಶ ತಿಮ್ಮಾಪುರ

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/-
ಪುಟ: ೮೦


ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್

ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೫೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು–560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**


ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.



**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

## ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**

ಅಧ್ಯಕ್ಷರು

## ಲೇಖಕರ ಮಾತು

**ಸುಭಟರ್ಕಳ್ ಕವಿಗಳ್**
**ಸುಪ್ರಭುಗಳ್ ಅಭಿಜನರ್ಕಳ್**
**ಗುಣಿಗಳ್ ಅಭಿಮಾನಿಗಳ್**
**ಅತ್ಯುಗ್ರರ್ ಗಂಭೀರ್ ಚಿತ್ತರ್**
**ವಿವೇಕಿಗಳ್ ಈ ನಾಡವರ್ಗಳ್.**

**– ಕವಿರಾಜಮಾರ್ಗ**

**ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ 'ಮುಂಡರಗಿ'** ಕೃತಿ, ಮಾಸವಾಡಿ–೧೪೦ನ್ನು ಒಳಗೊಂಡ ನಾಡುಗಳ ಪ್ರಾಚೀನ ಇತಿಹಾಸ, ಚಾರಿತ್ರಿಕ ಪರಂಪರೆ, ಬ್ರಿಟಿಷರೊಂದಿಗೆ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಹುತಾತ್ಮರಾದ ವೀರ ಸ್ವಾತಂತ್ರ್ಯ ಹೋರಾಟಗಾರರ ಬಲಿದಾನವನ್ನು ಬಿಚ್ಚಿಡುತ್ತದೆ.

ನಾನಾ ಹಂತಗಳ, ವರ್ಗಗಳ, ಮತಗಳ, ಜಾತಿಗಳ ಜನರು ಹೊಸ ಮಾರ್ಪಾಡುಗಳಿಗೆ ತೋರಿದ ಪ್ರತಿಕ್ರಿಯೆ ಹೊಸ ಸಂದರ್ಭಗಳಿಗೆ ಹೊಂದಿಕೊಂಡ ರೀತಿಯನ್ನು ಕೃತಿಯಲ್ಲಿ ಚರ್ಚಿಸಲಾಗಿದೆ. ವಸಾಹತುಶಾಹಿ ಆಕ್ರಮಣದ ಪರಿಣಾಮವಾಗಿ ಭಾರತದ ಆರ್ಥಿಕ ಬೆನ್ನೆಲುಬು ಹೇಗೆ ಜರ್ಜರಿತಗೊಂಡಿತೆಂದು ತಿಳಿಯದೇ ಇಲ್ಲಿ ನಡೆದ ಸ್ವಾತಂತ್ರ್ಯ ಹೋರಾಟವನ್ನು ವ್ಯಾಖ್ಯಾನಿಸುವುದು ಅಸಮರ್ಪಕವಾದ ವಿಧಾನವೆನಿಸಬಹುದು. ಆದ್ದರಿಂದ ಯಾವುದು ಅಸಮರ್ಪಕ ವಿಧಾನವೋ ಅದನ್ನು ಮುರಿದು ಖಚಿತ ನೆಲೆಯ ತಾತ್ವಿಕ ವಿಧಾನವನ್ನು ಕೈ ಹಿಡಿದಿದ್ದರಿಂದ ಕಳೆದ ಐನೂರು ವರ್ಷಗಳ ಭಾರತದ ಇತಿಹಾಸವನ್ನು ಮುಕ್ತವಾಗಿ ಚರ್ಚಿಸಲು ಸಾಧ್ಯವೆನಿಸಿದೆ. ಸ್ವಾತಂತ್ರ್ಯ ಪಡೆದೇ ತೀರಬೇಕೆಂಬ ಛಲ, ಉತ್ಕಟ ಬಯಕೆಗಳ ಫಲಗಳ ನೆಲೆಗಳು ಮೈದಳೆಯಲು ಸಹಾಯಕವಾಗಿದೆ.



ನಮ್ಮ ಸ್ವಾತಂತ್ರ್ಯ ಚಳುವಳಿ ಇಂಗ್ಲೀಷ್ ವಿದ್ಯಾಭ್ಯಾಸದಿಂದ ಪ್ರಾರಂಭವಾಯಿತೆಂಬ ತಪ್ಪು ಕಲ್ಪನೆಯನ್ನು ಹುಸಿಮಾಡುತ್ತದೆ. ಸಣ್ಣ ಜನರ ನಡುವೆಯೂ ಸ್ವಾಭಿಮಾನದ ಜನ ಇದ್ದಾರೆ ಎಂಬ ಸಾರ್ವತ್ರಿಕ ಸತ್ಯವನ್ನು ಎತ್ತಿ ತೋರಿಸಬೇಕು. ಇಷ್ಟೆಲ್ಲ ವಿರೋಧದ ಮಧ್ಯವು ಬ್ರಿಟಿಷರು ಒಬ್ಬೊಬ್ಬರಾಗಿ ಹೇಗೆ ಬುಟ್ಟಿಗೆ ಹಾಕಿಕೊಂಡರು ಎಂಬುದು ಸೋಜಿಗದ ಸಂಗತಿ. ಗಾಂಧೀಜಿಯವರ ಅಹಿಂಸಾತ್ಮಕ ಚಳುವಳಿಯು ಹೆಚ್ಚು ಸಮಗ್ರತೆಯನ್ನು ಪಡೆದು ಭಾರತಕ್ಕೆ ೧೯೪೭ ರಲ್ಲಿ ಸ್ವಾತಂತ್ರ್ಯ ಸಾಧಿಸುವಂತಾದುದು ಇತಿಹಾಸ ಸತ್ಯ. ಆದರೆ ಅಷ್ಟೇ ಅಲ್ಲ ಅದರ ನಡುವೆ ಹಲವು ಗಣ್ಯರ ನೇತೃತ್ವದಲ್ಲಿ ಕ್ರಾಂತಿಕಾರಿ ಪಡೆ ನಿರ್ಮಾಣವಾಗಿ ಇಂಗ್ಲೀಷರಿಗೆ ತಲೆನೋವು ಹಿಡಿಸಿದಂತ ಕ್ರಾಂತಿಕಾರಿಗಳು ಕೆಂಪು ಹೊಳೆಯನ್ನು ಹರಿಸಿ ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳ ಸಾಲಿನಲ್ಲಿ ಮಹತ್ವಗಳಿಸಿದ್ದಾರೆ. ನಾನಾ ರೀತಿಯಲ್ಲಿ ಸ್ವಾತಂತ್ರ್ಯ ಹೋರಾಟದ ನಾನಾ ತೊರೆಗಳಾಗಿ ಭಾರತವನ್ನು ಪರಕೀಯರಿಂದ ಮುಕ್ತಿಗೊಳಿಸಲು ಮುಖ್ಯ ವಾಹಿನಿಯಾಗಿ ನಿಂತವು ಎಂಬುದು ವಾಸ್ತವ ಸತ್ಯ. ತಮ್ಮ ಜೀವನ ವಿಧಾನದಲ್ಲಿ ಆದ ತೀವ್ರ ಮಾರ್ಪಾಟುಗಳಿಂದ ದಿಕ್ಕೆಟ್ಟು ಅದರ ವಿರುದ್ಧ ಹಿಂಸಾತ್ಮಕವಾಗಿ ದಂಗೆಯೆದ್ದ ದೇಶ ಪ್ರೇಮಿಗಳ ಹೋರಾಟದ ವೀರಗಾಥೆ ಒಂದು ಅಧ್ಯಾಯಕ್ಕೆ ಮುಗಿಯುವಂತಹದ್ದಲ್ಲ. ಬ್ರಿಟಿಷರ ವಿರುದ್ಧ ಗೆಲ್ಲುಲು ಯಾವುದೇ ವೀರಾವೇಷದಿಂದ ಹೋರಾಡಿದ ಆಳವಾದ ವಿಷಾದದ ಅನಿವಾರ್ಯ ದುರಂತದ ಪ್ರಭಾವಳಿ ಇರುವ ಸ್ವಾತಂತ್ರ್ಯ ಹೋರಾಟಗಾರರ ಬಂಡಾಯ ಮೆಚ್ಚುವಂತದ್ದು.

ಭಾರತ ತನ್ನ ದೀರ್ಘ ಇತಿಹಾಸದಲ್ಲಿ ಹಲವಾರು ಏಳು ಬೀಳುಗಳನ್ನು ಕಂಡಿದೆ. ಹಲವು ಬಾರಿ ಪರರ ದಾಳಿಗೆ, ಆಕ್ರಮಣಕ್ಕೆ ತುತ್ತಾಗಿದೆ. ಅಂತಹ ವಿಷಮ ಸಂದರ್ಭಗಳನ್ನೆಲ್ಲ ತಾಳ್ಮೆಯಿಂದ ಆತ್ಮವಿಶ್ವಾಸದಿಂದ ಎದುರಿಸಿದೆ. ಭಾರತ ಆಕ್ರೋಶದಿಂದ ಬಿರಿಯುತ್ತಾ ಮೇಲೆದ್ದು ನಿಂತು ಹೋರಾಡುವುದಿಲ್ಲ. ತನ್ನ ಸಮಯಕ್ಕಾಗಿ ತಾಳ್ಮೆಯಿಂದ ಕಾದು ನಿಲ್ಲುತ್ತದೆ. ಈ ದೇಶ ತಗ್ಗಬಲ್ಲದು. ಆದರೆ ಮುರಿದು ಬೀಳುವುದಿಲ್ಲ. ಸಮಾಧಾನದಿಂದ ತನ್ನ ಅದಮ್ಯ ಚೈತನ್ಯವನ್ನು ಕೂಡಿಸಿಕೊಂಡು ಎದ್ದು ನಿಲ್ಲುತ್ತದೆ. ಬ್ರಿಟಿಷ್ ಆಕ್ರಮಣ–ಅತಿಕ್ರಮಗಳನ್ನು ಹತ್ತಿಕ್ಕಲು ನಡೆದ ಮುಂಡರಗಿ ಬಂಡಾಯ ಇದಕ್ಕೊಂದು ನಿದರ್ಶನ.

ಸ್ವರಾಜ್ಯ–೭೫ ರ ಅಂಗವಾಗಿ ೭೫ ಪುಸ್ತಕಗಳನ್ನು ಹೊರತರುವ ಯೋಜನೆಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಅತೀ ಕಡಿಮೆ ಅವಧಿಯನ್ನು ನಿಗದಿಪಡಿಸಿ ಲೇಖಕರನ್ನು ಆಯ್ಕೆ ಮಾಡಿಕೊಂಡು ಸ್ವಾತಂತ್ರ್ಯ ಸಂಗ್ರಾಮದಲ್ಲಿ ತೊಡಗಿಕೊಂಡಿದ್ದ ತಾಲೂಕು ಮತ್ತು ಸ್ಥಳಗಳನ್ನು ಆಯ್ಕೆ ಮಾಡಿಕೊಂಡು ಬರವಣಿಗೆಗೆ ಚಾಲನೆ ನೀಡಿದ ಅಕಾಡೆಮಿಯ ಅಧ್ಯಕ್ಷರಾದ ಡಾ. ಬಿ.ವಿ. ವಸಂತಕುಮಾರ ಸರ್ ಹಾಗೂ ರಿಜಿಷ್ಟ್ರಾರ ಕರಿಯಪ್ಪ ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಸ್ವರಾಜ್ಯ–೭೫ ರ ನೆನಪು ಚಿರಸ್ಥಾಯಿಯಾಗಿ ಉಳಿದುಕೊಳ್ಳಲು ಅವರು ಆಯ್ಕೆ ಮಾಡಿಕೊಂಡ ವಿಷಯವಸ್ತು ಮತ್ತೊಮ್ಮೆ ಸ್ವಾತಂತ್ರ್ಯ ಸಂಗ್ರಾಮದ ಘಟನೆಗಳನ್ನು ಮರುಕಳಿಸುವಂತೆ ಮಾಡಿದೆ. ಅಕ್ಷರಾಭಿಮಾನದ ಜೊತೆಗೆ ದೇಶಾಭಿಮಾನವನ್ನು ಪೋಷಿಸಿಕೊಂಡು ಹೊರಟಿರುವ ಅವರ ಕಾರ್ಯ ಶ್ಲಾಘನೀಯ. ಇಂತಹದೊಂದು ಕಾರ್ಯಕ್ಕೆ ನನಗೂ ಒಂದು ವಿಷಯಕೊಟ್ಟು ಬರವಣಿಗೆಗೆ ಹಚ್ಚಿದ ಸಂಪಾದಕತ್ವದ ಹೊಣೆಯನ್ನು ಹೊತ್ತುಕೊಂಡಿರುವ ಸಾಹಿತಿ, ಸಂಶೋಧಕ, ಸಂಸ್ಕೃತಿ ಚಿಂತಕರಾದ ಡಾ. ಪ್ರಕಾಶ ಗ. ಖಾಡೆ ಸರ್ ಅವರಿಗೆ ನಾನು ಋಣಿಯಾಗಿರುವೆ. ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ 'ಮುಂಡರಗಿ' ನನ್ನ ಕೃತಿ ರೂಪಗೊಳ್ಳಲು ಡಾ. ಚಂದ್ರಶೇಖರ ವಸ್ತ್ರದ, ಡಾ. ಅರ್ಜುನ. ಗೊಳಸಂಗಿ, ಹು.ಬಾ. ವಡ್ಡಟ್ಟಿ ಅವರ ಸಹಕಾರಕ್ಕೆ ಕೃತಜ್ಞನಾಗಿದ್ದೇನೆ. ಹಾಗೂ ಸಂಪಾದಕ ಮಂಡಳಿಯವರಿಗೆ, ಸಹೋದರ ಶಾಂತಕುಮಾರ ಪೂಜಾರ ಅವರಿಗೆ ನಾನು ಕೃತಜ್ಞ.

**– ಡಾ. ಉಮೇಶ ತಿಮ್ಮಾಪುರ**

## ಪರಿವಿಡಿ


| | | |
|---|---|---|
| ಶುಭ ಸಂದೇಶ | | ೩ |
| ಶುಭ ಸಂದೇಶ | | ೫ |
| ಪ್ರಧಾನ ಸಂಪಾದಕರ ಮಾತು | | ೭ |
| ಲೇಖಕರ ಮಾತು | | ೧೦ |
| ೧. | ಪ್ರಸ್ತಾವನೆ | ೧೫ |
| ೨. | ಮುಂಡರಗಿ ವೈಶಿಷ್ಟ್ಯ | ೨೮ |
| ೩. | ಮುಂಡರಗಿ ಪ್ರಾಚೀನತೆ | ೧೮ |
| ೪. | ಶಾಸನಗಳಲ್ಲಿ ಮುಂಡರಗಿ | ೨೧ |
| ೫. | ಮುಂಡರಗಿ ತಾಲೂಕಿನ ಗ್ರಾಮ ಪರಂಪರೆ | ೨೬ |
| ೬. | ಸ್ವಾತಂತ್ರ್ಯ ಹೋರಾಟದಲ್ಲಿ ಮುಂಡರಗಿ | ೩೩ |
| ೭. | ಮಾಸವಾಡಿ–೧೪೦ | ೩೫ |
| ೮. | ಧೋಂಡಿಯಾ ವಾಘ | ೩೮ |
| ೯. | ಸ್ವಾತಂತ್ರ್ಯ ಹೋರಾಟಕ್ಕೆ ಎದೆಕೊಟ್ಟು ನಿಂತವರು | ೪೨ |
| ೧೦. | ಮುಂಡರಗಿ ಭೀಮರಾಯ | ೪೭ |
| ೧೧. | ಮೊದಲ ಸ್ವಾತಂತ್ರ್ಯ ಸಂಗ್ರಾಮ : ಮುಂಡರಗಿಯ ಕೆಚ್ಚೆದೆಯ ಕಲಿಗಳು | ೫೧ |
| ೧೨. | ಕೊಪ್ಪಳ ಕೋಟೆ ಐತಿಹಾಸಿಕ ಹಿನ್ನೆಲೆ: ಕಲಕೇರಿ–ತಿಪ್ಪಾಪುರ ದೇಸಾಯಿಯವರು | ೬೮ |
| | ಗ್ರಂಥ ಋಣ | ೭೬ |
| | ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ | ೭೭ |


———————

# ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ 'ಮುಂಡರಗಿ'

## ೧. ಪ್ರಸ್ತಾವನೆ

ಸಂಸ್ಕೃತಿ ಎಂದರೆ ಅದು ಆಯಾ ಕಾಲದ ಜನತೆಯ ಅಂತರಂಗದ ವಿಕಾಸಕ್ಕೆ ಸಂಬಂಧಪಟ್ಟಿದ್ದು ಎನ್ನಬಹುದು. ಒಂದು ದೇಶದ ಇತಿಹಾಸವೆಂದರೆ ಅಲ್ಲಲ್ಲಿ ಹುಟ್ಟಿ ಬೆಳೆದು ಪ್ರಸಿದ್ದಿ ಹೊಂದಿ ಮಡಿದ ರಾಜರುಗಳ ಚರಿತ್ರೆ ಮಾತ್ರ ಅಲ್ಲ, ಅದು ಅಂದಂದು ಬದುಕಿ ಬಾಳಿದ ಜನತೆಯ ಇತಿಹಾಸ. ಅವರ ಬದುಕಿನ ಆಗುಹೋಗುಗಳ, ಆಚಾರ, ವಿಚಾರ, ವ್ಯವಹಾರಗಳ ನಡವಳಿಕೆ ಪದ್ದತಿಗಳ ಹಾಗೂ ಅಂದು ಪ್ರಚಲಿತ ಆಗಿದ್ದ ಮೌಲ್ಯಗಳ ಪರಿಚಯ ಮಾಡಿಕೊಡುವ ಅಮೂಲ್ಯ ಸಾಧನ ಇತಿಹಾಸ. ಇದೇ ಇತಿಹಾಸದ ಧ್ಯೇಯ ಸಂಸ್ಕೃತಿ ಎಂದರೆ ಅದು ಆಯಾ ಕಾಲದ ಜನತೆಯ ಅಂತರಂಗದ ವಿಕಾಸಕ್ಕೆ ಸಂಬಂಧಪಟ್ಟಿದ್ದು ಎನ್ನಬಹುದು. ಮನುಷ್ಯನಲ್ಲಿರುವ ಮೃಗತ್ವ ಅಳಿಸಿ ಮಾನವೀಯತೆಯ ದೊಡ್ಡತನ ಕಲಿಸಿಕೊಡುವುದು ಸಂಸ್ಕೃತಿಯ ಗುರಿ. ನಾಗರಿಕತೆ ನಾವು ಪಡೆದಿರುವಂಥದ್ದು. ಸಂಸ್ಕೃತಿ ಎಂದರೆ ನಾವೆಯೇ, ಅಂದರೆ ನಾವು ಹೇಗಿದ್ದೇವೆಯೋ ಅದೇ ಸಂಸ್ಕೃತಿ. ಇದು ನಮ್ಮ ನಡುವಳಿಕೆ, ಸಂಪ್ರದಾಯ, ಸಾಮಾಜಿಕ ಮೌಲ್ಯ ಎಲ್ಲವನ್ನೂ ಒಳಗೊಂಡಿರುತ್ತದೆ. ಇತಿಹಾಸದಿಂದ ಸಂಸ್ಕೃತಿ ಅಧ್ಯಯನ ಸಾಧ್ಯ. ಹಾಗೆಯೇ ಆಯಾ ಕಾಲದಲ್ಲಿ ಬಾಳಿಬದುಕಿದ ಸಮಾಜದ ಸಂಸ್ಕೃತಿ. ಇತಿಹಾಸ, ಹೋರಾಟದ ಎಳೆಗಳನ್ನೂ ಒದಗಿಸಿದೆ.

ನಮ್ಮ ರಾಷ್ಟ್ರೀಯ ಚಳುವಳಿಯ ಕಾಲವ್ಯಾಪ್ತಿ ದೀರ್ಘ, ಪ್ರಾದೇಶಿಕ ವ್ಯಾಪ್ತಿ ವಿಶಾಲ. ಹತ್ತು ಹನ್ನೆರಡು ದಶಕಗಳ ಕಾಲ ಇಂದಿನ ಭಾರತ, ಪಾಕಿಸ್ತಾನ, ಬಾಂಗ್ಲಾದೇಶಗಳನ್ನೆಲ್ಲ ಒಗ್ಗೂಡಿದಷ್ಟು ವಿಶಾಲ ಭೂಖಂಡದಲ್ಲಿ ನಾಲ್ಕಾರು ತಲೆಮಾರಿನ ಜನ ರೂಪಿಸಿದ ಚಳುವಳಿ ಅದು ಮತ, ಜಾತಿ, ಭಾಷೆ, ಪ್ರಾದೇಶಿಕ

ಇವೆಲ್ಲ ಹುಟ್ಟಿಸಿದ್ದು ವೈವಿಧ್ಯತೆ ವಿಪರ್ಯಾಸಗಳನ್ನೆಲ್ಲ ಮೀರಿ ಅವುಗಳನ್ನೆಲ್ಲ ತನ್ನಲ್ಲಿ ಲೀನಗೊಳಿಸಿಕೊಳ್ಳುವುದರಲ್ಲಿ ಗಮನಾರ್ಹ ಯಶಸ್ಸನ್ನು ಗಳಿಸಿ ಎದ್ದು ನಿಂತ ವಿಶಿಷ್ಟ ಚಳುವಳಿ. ಅದು ಫ್ರಾನ್ಸ್, ರಷ್ಯಾ, ಚೀನಾಗಳ ಕ್ರಾಂತಿಗಳಂತೆ ಕಣ್ಣು ಕೋರೈಸುವಂತಹ ಚೈತನ್ಯದ ಮಹಾಪುರವಲ್ಲ. ನಮ್ಮ ರಾಷ್ಟ್ರೀಯ ಚಳುವಳಿ. ಆದರೆ ಅದರ ಅಂತಶ್ಚೈತನ್ಯ ಬಲ, ದೀರ್ಘ ಕಾಲಾವಧಿಯಲ್ಲಿ ಮತ್ತು ಮತ್ತೆ ಅದು ಎದ್ದು ನಿಂತು ತೋರಿದ ಕಸುವು ಅಪೂರ್ವ. ಅಖಿಲ ಭಾರತದಲ್ಲಿ ಅಧಿಕಾರ ಗಳಿಸಿದಾಗ ಅರವತ್ತೆರಡು ವರ್ಷದ ಇತಿಹಾಸವಿತ್ತು. ಅಷ್ಟು ದೀರ್ಘಕಾಲ ಬಲವತ್ತರ ಸಾಮ್ರಾಜ್ಯವೊಂದನ್ನು ಎದುರಿಸಿ ಹೋರಾಡಿ ಅಧಿಕಾರ ಗಳಿಸಿದ ರಾಜಕೀಯ ಸಂಸ್ಥೆಗಳು ಜಗತ್ತಿನಲ್ಲಿ ಬೇರೆ ಎಲ್ಲಿದ್ದಾವೋ.

ನಾನಾ ಒತ್ತಡ, ಪ್ರಭಾವಗಳಿಗೆ ಗುರಿಯಾಗಿ ಮಾರ್ಪಾಡುಗೊಂಡಿದ್ದ ಒಂದು ಪುರಾತನ ಸಂಸ್ಕೃತಿಯ ಆಧುನಿಕ ಪಾಶ್ಚಿಮಾತ್ಯ ಔದ್ಯಮಿಕ ಸಂಸ್ಕೃತಿಯ ಸಂಪರ್ಕ ಪಡೆದು ರಾಜಕೀಯವಾಗಿ ಕೆಳಗೈಯಾಗುವ ಸನ್ನಿವೇಶ ಒದಗಿ ಬಂದಾಗ ಆ ಪುರಾತನ ಸಂಸ್ಕೃತಿ ಹೇಗೆ ಪ್ರತಿಕ್ರಿಯಿಸಿತು. ಆ ಸಂಸ್ಕೃತಿಯ ನೆರಳಿನಲ್ಲಿದ್ದ ನಾನಾ ಹಂತಗಳ, ವರ್ಗಗಳ, ಮತಗಳ, ಜಾತಿಗಳ ಜನರು ಹೊಸ ಮಾರ್ಪಾಡುಗಳಿಗೆ ಯಾವ ಯಾವ ರೀತಿ ಪ್ರತಿಕ್ರಿಯೆ ತೋರಿದರು? ಯಾವ ಯಾವ ರೀತಿ ಹೊಸ ಸಂದರ್ಭಗಳಿಗೆ ಹೊಂದಿಕೊಂಡರು? ನಾನಾ ಸ್ಥರಗಳಿಗೆ ಸೇರಿದ ಈ ವೈವಿಧ್ಯತಾಪೂರ್ಣ ಪ್ರತಿಕ್ರಿಯೆಗಳ ಸಮ್ಮಿಳನವಾಗಿ ಹಲವು ಧ್ವನಿಗಳ ಸ್ವರ ಮೇಳವಾಗಿ ನಮ್ಮ ರಾಷ್ಟ್ರೀಯ ಚಳುವಳಿಯನ್ನು ಪರಿಗಣಿಸಬಹುದು.

ನಮ್ಮ ರಾಷ್ಟ್ರೀಯ ಚಳುವಳಿಯೆಂದರೆ ತಿಲಕ್–ಗಾಂಧಿ ಪರಂಪರೆಯ ನಾಯಕತ್ವದಲ್ಲಿ ನಡೆದ ಕಾಂಗ್ರೆಸ್ ಚಳುವಳಿ ಮಾತ್ರವಲ್ಲ ಅದರಲ್ಲಿ ಸಂವಿಧಾನ ಮಾರ್ಗಗಳಿಗೆ ಬದ್ಧರಾದ ಮಂದವಾದಿಗಳು ರಕ್ತದ ಹೊರೆ ಹರಿಸಿ ನಮ್ಮ ಹೃದಯಗಳನ್ನು ಸೂರೆಗೊಂಡಿರುವ ಕ್ರಾಂತಿಕಾರಿಗಳು, ಸಮಾಜವಾದದ ಸಂದೇಶ ಸಾರಿ ಹೊಸ ಆಯಾಮಗಳನ್ನಿತ್ತ ನಾನಾ ಪಂಥಗಳ ಸಮಾಜವಾದಿಗಳು, ಇವರೆಲ್ಲ ಸೇರುತ್ತಾರೆ. ಮೇಲು ನೋಟಕ್ಕೆ ರಾಜಕೀಯದ ಲೇಪವೇ ಕಂಡು ಬಾರದ ರೈತರು ಕಾರ್ಮಿಕ ವರ್ಗಗಳ ಹೋರಾಟಗಳು ಸೇರುತ್ತವೆ. ಹೊರಗಿನವರ



ದೃಷ್ಟಿಗೆ ಹೇಗೇ ಕಂಡುಬರಲಿ ಆಯಾ ಸನ್ನಿವೇಶಗಳಲ್ಲಿ ಸಿಕ್ಕಿಬಿದ್ದು ತೊಳಲುತ್ತಿದ್ದ ಜನರಿಗೆ ಮಾತ್ರ ಅರ್ಥವಾಗುವ ಮತೀಯ ಜಾತೀಯ ಬಣ್ಣದ ಆಂದೋಲನಗಳೂ ಸೇರುತ್ತವೆ. ನಿಶ್ಚಿತವಾಗಿ ಸೋಲಿಸಿದರೂ ಧೃತಿಗೆಡದೇ ಹೋರಾಡಿ ಸೋತು ಮುರಿದು ಬಿದ್ದ ಆದಿವಾಸಿ ದಂಗೆಗಳು ಸೇರುತ್ತವೆ.

ನಮ್ಮ ನಾಡಿನ ಸಾಂಸ್ಕೃತಿಕ ಇತಿಹಾಸ ಒಂದು ಭಿನ್ನವಾದ ಸನಾತನ ಮಹಾವೃಕ್ಷ. ಕಾಲದಿಂದ ಸತ್ವದಿಂದ ಅದು ಸನಾತನವಾದರೂ ಹೊಸ ಹೊಸ ವರ್ತಮಾನಗಳನ್ನು ತನ್ನ ಬೇರುಗಳಿಂದ ಹೀರಿಕೊಂಡ ಚೇತನ, ನಿತ್ಯನೂತನ. ಇದು ಮುಂಬರುವ ಜನಾಂಗಕ್ಕೆ ಮಾರ್ಗದರ್ಶನ, ಕಾಲದ ನೆಲೆಗಟ್ಟಿನ ಮೇಲೆ ಬೆಳೆದು ಬಂದ ಈ ಸಾಂಸ್ಕೃತಿಕ ಇತಿಹಾಸದ ಮಹಾವೃಕ್ಷಕ್ಕೆ ಸಾವಿರಾರು ಟಿಸಿಲುಗಳು ಕೊಂಬೆ, ರೆಂಬೆಗಳು ಅದರ ತುಂಬ ಎಲೆಗಳು. ಕಾಲದ ಚಂಡಮಾರುತಕ್ಕೆ ಟೊಂಗೆಗಳು ಕಡಿದುಕೊಂಡು ಬಿದ್ದರೂ ಎಲೆಗಳು ಉದುರಿ ಗಾಳಿಯ ಹೊಡೆತಕ್ಕೆ ಚದುರಿಹೋದರೂ ಇದಕ್ಕೆ ನಾಶವೆಂಬುದೇ ಇಲ್ಲ. ಇದು ಅಜರಾಮರ. "ಹೊಸ ಚಿಗುರು ಹಳೆ ಬೇರು ಕೂಡಿರಲು ಮರಸೊಬಗು" ಎಂಬಂತೆ ಇಂದು ಕೂಡಾ ಹಳೆಯದರ ಸ್ಥಳದಲ್ಲಿ ಹೊಸ ಹೊಸ ಟಿಸಿಲುಗಳು ಬೆಳೆಯುತ್ತವೆ, ಚಿಗುರುತ್ತವೆ. ಅವು ಕುಡಿಯೊಡೆದು ಸಾವಿರಾರು ಹೂಗಳು ಅರಳುತ್ತವೆ. ಫಲಗಳನ್ನು ನೀಡುತ್ತವೆ. ಹೀಗೆ ನಿರಂತರವಾಗಿ ಬೆಳೆದು ಬಂದ ಈ ಬೃಹತ್ ನಾಡಿನ ಮಹಾವೃಕ್ಷಕ್ಕೆ ಟಿಸಿಲೊಂದನ್ನು ಪರಿಚಯಿಸುವ ಒಂದು ಪುಟ್ಟ ಪ್ರಯತ್ನವೇ ಈ ಮುಂಡರಗಿ ಬಂಡಾಯ."

ಪೌರಾಣಿಕ, ಐತಿಹಾಸಿಕ, ಧಾರ್ಮಿಕ, ಸಾಂಸ್ಕೃತಿಕ, ರಾಜಕೀಯ ಹಾಗೂ ಸಾಹಿತ್ಯಿಕವಾಗಿ ಪ್ರಸಿದ್ಧಿ ಪಡೆದ ಗದಗ ಜಿಲ್ಲೆ ಮುದ್ರಣ ಕಾಶಿ ಎಂದೇ ಪ್ರಖ್ಯಾತಿ ಪಡೆದಿದೆ. ಮೊದಲು ಧಾರವಾಡ ಜಿಲ್ಲೆಯ ಪ್ರಮುಖ ತಾಲೂಕಾ ಕೇಂದ್ರ ಸ್ಥಳವಾಗಿದ್ದ ಗದಗ ೧೯೯೭ ಅಗಷ್ಟ ೨೪ ರಂದು ನೂತನ ಜಿಲ್ಲೆಯಾಗಿ ರಚನೆಗೊಂಡಿದ್ದು ಒಂದು ಐತಿಹಾಸಿಕ ಮೈಲುಗಲ್ಲು. ಶಿರಹಟ್ಟಿ, ನರಗುಂದ, ರೋಣ ಮುಂಡರಗಿ, ಗದಗ, ಗಜೇಂದ್ರಗಡ, ಲಕ್ಷ್ಮೇಶ್ವರ ತಾಲೂಕುಗಳನ್ನು ಗದಗ ಜಿಲ್ಲೆ ಒಳಗೊಂಡಿದೆ. ಈ ಜಿಲ್ಲೆಯ ಮುಂಡರಗಿ ತಾಲೂಕು ಪ್ರಾಚೀನ ಕಾಲದಿಂದಲೂ ತನ್ನ ಹಿರಿಮೆ, ಗರಿಮೆಗಳಿಂದ ಕಂಗೊಳಿಸುತ್ತಾ ಬಂದಿದೆ.

ಪ್ರಾಚೀನ ಕಾಲದಿಂದಲೂ ಪೌರಾಣಿಕ ಪ್ರಸಿದ್ಧಿಯನ್ನು ಪಡೆದ ಕಪೋತಗಿರಿ (ಕಪ್ಪತ್ತಗುಡ್ಡ) ಯರಮಲೆ ಬೆಟ್ಟ, ದ್ರೋಣಗಿರಿ, ಕಪ್ಪತ್ತಗಿರಿಗಳಿಂದ ಕೂಡಿದೆ. ಯರಮಲೆ ಬೆಟ್ಟವು ಮುಂಡರಗಿ ತಾಲೂಕಿನ ಡಂಬಳದಿಂದ ಹಿರೇವಡ್ಡಟ್ಟಿವರೆಗೆ ಹಬ್ಬಿದ್ದು ಪೂರ್ವಕ್ಕಿದೆ. ಪಶ್ಚಿಮ ದಿಕ್ಕಿನಲ್ಲಿರುವ ದ್ರೋಣಗಿರಿ ಮಹಾಲಿಂಗಪ್ಪನ ಗುಡಿಯಿಂದ ಗಂಗಿಬಾವಿಯವರೆಗಿದೆ. ಕಪ್ಪತ್ತಗಿರಿಯು ಈ ಎರಡೂ ಗುಡ್ಡಗಳ ಮದ್ಯದಲ್ಲಿದ್ದು ಗಂಗಿಬಾವಿಯಿಂದ ತುಂಗಭದ್ರೆಯ ತೀರದಲ್ಲಿರುವ ಸಿಂಗಟಾಲೂರವರೆಗೆ ಹಬ್ಬಿದೆ.

## ೨. ಮುಂಡಗಿರಿ ವೈಶಿಷ್ಟ್ಯ :

ಇಂದು ೫೨ ಗ್ರಾಮಗಳನ್ನು ಒಳಗೊಂಡ ಮುಂಡರಗಿ ತಾಲೂಕು ಪುರಾತನ ಕಾಲದಿಂದಲೂ ನೆಗಳ್ತೆ ಪಡೆದಿತ್ತು. ಈ ತಾಲೂಕಿನ ಅನೇಕ ಗ್ರಾಮಗಳಿಗೆ ಪ್ರಾಚೀನ ಹಿನ್ನಲೆ ಸಾಂಸ್ಕೃತಿಕ ಇತಿಹಾಸ, ಧಾರ್ಮಿಕ ಪರಂಪರೆ, ರಾಜಕೀಯ ಸಂಬಂಧಗಳಿದ್ದುದರ ಬಗೆಗೆ ಚರಿತ್ರೆ ಸಾಕ್ಷಿಯಾಗಿದೆ. ಇಂದು ಅತ್ಯಂತ ಕುಗ್ರಾಮಗಳಾಗಿರುವ ಡಂಬಳ, ಬರದೂರು, ಕೊರ್ಲಹಳ್ಳಿ, ಮೆವುಂಡಿ, ಚಿಕ್ಕವಡ್ಡಟ್ಟಿ, ಡೋಣಿ ಬಿದರಹಳ್ಳಿ ಗುಮ್ಮಗೋಳ, ಪೇಠಾಲೂರು ಕಲಕೇರಿ, ನಾಗರಹಳ್ಳಿ, ಶಿರೂರು, ತಾಮ್ರಗುಂಡಿ, ಬೂದಿಹಾಳ, ಬಾಗೇವಾಡಿ, ಹೈತಾಪೂರ, ಶಿಂಗಟಾಲೂರ ಮೊದಲಾದವುಗಳು ಪ್ರಾಚೀನಕಾಲದಲ್ಲಿ ರಾಜಧಾನಿಗಳಾಗಿ, ಅಗ್ರಹಾರಗಳಾಗಿ, ಧಾರ್ಮಿಕ ಕೇಂದ್ರಗಳಾಗಿ, ಶಿಲ್ಪಕಲೆಯ ಕಣಜಗಳಾಗಿ ಪುಣ್ಯಕ್ಷೇತ್ರಗಳಾಗಿ ಮೆರೆದಿರುವುದಕ್ಕೆ ಶಾಸನಗಳು, ಪುರಾಣಗಳು, ದೇವಾಲಯಗಳು, ಚರಿತ್ರೆಗಳು ಸಾಕ್ಷ್ಯಾಧಾರಗಳಾಗಿವೆ.

## ೩. ಮುಂಡರಗಿ ಪ್ರಾಚೀನತೆ :

ಮುಂಡರಗಿ ತಾಲೂಕಿನ ಅನೇಕ ಗ್ರಾಮಗಳಲ್ಲಿ ಅವಶೇಷಗಳು ಲಭ್ಯವಾಗಿವೆ. ಧಾರವಾಡ ಜಿಲ್ಲೆಯನ್ನೊಳಗೊಂಡ ದಕ್ಷಿಣ ಭಾರತದ ಪ್ರಸ್ತಭೂಮಿಯಲ್ಲಿ ಅತ್ಯಂತ ಪ್ರಾಚೀನವೆಂದೂ ಆದಿಕಲ್ಪ ಯುಗಕ್ಕೆ ಸೇರಿದ್ದೆಂದೂ



ಸುಮಾರು ಮೂರುನೂರು ಸಾವಿರ ವರ್ಷಗಳ ಹಿಂದೆ ನಡೆದಿರಬಹುದೆಂದೂ ಭೂವಿಜ್ಞಾನಿಗಳ ಅಭಿಪ್ರಾಯವಾಗಿದೆ. ಮೊದಲು ಸಾಗರದ ಭಾಗವಾಗಿದ್ದ ಈ ಪ್ರದೇಶ ಸಮುದ್ರ ನೀರಿನ ಹಿಂಜರಿಕೆಯಿಂದ ಮೇಲೆದ್ದು ಕಾಲಾನಂತರದಲ್ಲಿ ಹಲವಾರು ಸ್ಥಿತ್ಯಂತರಗಳನ್ನು ಹೊಂದುತ್ತಾ ಇಂದಿನ ಈ ಸ್ಥಿತಿಗೆ ಬಂದಿರುವುದಕ್ಕೆ ಭೂವಿಜ್ಞಾನದಲ್ಲಿ ಸಾಕಷ್ಟು ಪ್ರಮಾಣಗಳು ದೊರೆಯುತ್ತವೆ. ಪುರಾತನ ಶಿಲಾಯುಗದ ಕಾಲದಿಂದಲೂ ಈ ಭಾಗದಲ್ಲಿ ಮತ್ಸ್ಯ, ನಾಗ, ಅಭೀಶರ, ಮಹೀಷ, ಕೋಲ, ಮುಂಡ, ಆಜ, ವಾನರ ಮೊದಲಾದ ಆದಿವಾಸಿಗಳು ಈ ಭಾಗದಲ್ಲಿ ವಾಸಿಸುತ್ತಿದ್ದುದಾಗಿ ತಿಳಿದು ಬಂದಿದೆ. ಮುಂಡರಗಿ ಎಂಬ ಗ್ರಾಮ ನಾಮವು ಮುಂಡರೆಂಬ ಆದಿವಾಸಿ ಜನಾಂಗದ ಮೂಲಕ ಬಂದಿರಬೇಕೆಂದು ಗ್ರಾಮನಾಮ ಶಾಸ್ತ್ರಜ್ಞರು ಅಭಿಪ್ರಾಯಪಟ್ಟಿದ್ದಾರೆ. ಈ ದಿಶೆಯಲ್ಲಿ ಗ್ರಾಮನಾಮಗಳು ಉಂಟಾದ ಬಗ್ಗೆ ಅರಿತುಕೊಳ್ಳುವುದು ಅತ್ಯಂತ ಅಗತ್ಯವಾಗಿದೆ.

### ಗ್ರಾಮನಾಮಗಳು :

ನಿಸರ್ಗವಾಚಿ, ಜನಾಂಗವಾಚಿ, ವ್ಯಕ್ತಿ ವಾಚಿ, ಆದರ್ಶವಾಚಿಯೆಂದು ನಾಲ್ವರನಾಗಿದ್ದು ಅವುಗಳನ್ನು ೧. ಪಂಡಿತ ನಿಷ್ಪತ್ತಿ, ೨. ಜನಪದರ ನಿಷ್ಪತ್ತಿ, ೩. ನಿಜ ನಿಷ್ಪತ್ತಿಗಳ ಮೂಲಕ ಖಚಿತ ಪಡಿಸಿಕೊಳ್ಳುತ್ತಾರೆ. ಪಂಡಿತ ನಿಷ್ಪತ್ತಿ ಸಂಸ್ಕೃತಿ ಮೂಲವನ್ನು ಹೊಂದಿದ್ದು ಪೌರಾಣಿಕ ಕಥಾನಕಗಳಿಗೆ ಸಂಬಂಧಿಸಿರುತ್ತದೆ. ಒಮ್ಮೊಮ್ಮೆ ಪೌರಾಣಿಕ ಹಿನ್ನೆಲೆಯಿಲ್ಲದಿದ್ದರೂ ಸಂಸ್ಕೃತ ಪ್ರೇಮಿಗಳು ಅದನ್ನು ಸಂಸ್ಕೃತ ಭಾಷೆಯಲ್ಲಿ ಹೇಳಿ ಪ್ರಚುರಪಡಿಸಿಯೂ ಇದ್ದಾರೆ. ಮುಂಡರಗಿ ಮೂಲತಃ ಮೃಡಗಿರಿಯಾಗಿರಬೇಕೆಂದೂ ಅದಕ್ಕೆ ಸಾಕ್ಷಿಯಾಗಿ ಮುಂಡರಗಿಯ ಗುಡ್ಡದಲ್ಲಿರುವ ಪುರಾತನ ಮೃಡ ಸಿದ್ದೇಶ್ವರ ಮಲ್ಲಿಕಾರ್ಜುನನ ದೇವಾಲಯವನ್ನು ತೋರಿಸುತ್ತಾನೆ. ಸಂಸ್ಕೃತ ನಿಷ್ಠರು ಮೃಡಗಿರಿ> ಮುಡಗಿರಿ>ಮಂಡರಗಿ> ಮುಂಡರಗಿ ಆಗಿರಬೇಕೆಂದು ಊಹಿಸುತ್ತಾರೆ. ಇದು ಪಂಡಿತ ನಿಷ್ಪತ್ತಿಯಾಗಿದೆ. ಆದರೆ ಜನಪದರ ನಿಷ್ಪತ್ತಿಯ ದೃಷ್ಟಿಯೇ ಬೇರೆ. ಈ ಜನಪದರು ಮುಂಡರಗಿಯ ಬೋಳಾದ ಗುಡ್ಡದಿಂದ ಮೊದಲು ಮುಂಡಗಿರಿಯಾಗಿದ್ದು ಮುಂದೆ ಮಂಡಗಿರಿ ಹೋಗಿ ಮುಂಡರಗಿಯಾಗಿರಬಹುದೆಂದೂ ಮತ್ತೊಂದು ಅಭಿಪ್ರಾಯ ಗ್ರಾಮನಾಮ ಶಾಸ್ತ್ರಜ್ಞರ ಮತದಂತೆ ಮುಂಡರಗಿ ಇದು ಜನಾಂಗವಾಚಿಯಾಗಿದ್ದು

ಮುಂಡರೆಂಬ ಮೂಲವಾಸಿಗಳಿಂದ ಈ ಹೆಸರು ಬಂದಿರಬೇಕೆಂದು ಹೇಳುತ್ತಾರೆ. ಮುಂಡ+ರ+ಕ್ಕೆ> ಮುಂಡ+ರ+ಗ್ಯೆ> ಮುಂಡರಗ್ಯೆ> ಮುಂಡರಗಿ ಆಗಿರಲು ಸಾಕು. ಈ ನಿಷ್ಪತ್ತಿಯು ನಿಜ ನಿಷ್ಪತ್ತಿಯೆಂಬುದು ಬಹುಜನ ಪಂಡಿತರ ಅಭಿಪ್ರಾಯ.

ಈ ಮುಂಡರಗಿಯ ಬಗೆಗೆ ಆಳವಾದ ಸಂಶೋಧನೆ ಇನ್ನೂ ಆಗಬೇಕಾಗಿದೆ. ಏಕೆಂದರೆ ಶಿಲಾಶಾಸನಗಳಲ್ಲಿ ಮುಂಡರಗಿಯ ಹೆಸರು ದೊರೆತಿಲ್ಲ. ಆದರೆ ಮುಂಡರಗಿ ತಾಲೂಕಿನ ಅನೇಕ ಗ್ರಾಮಗಳು ಒಂದಾನೊಂದು ಕಾಲಕ್ಕೆ ಭವ್ಯ ಪರಂಪರೆ ದಿವ್ಯ ಚರಿತ್ರೆ ಪ್ರಾಚೀನ ಐತಿಹಾಸಿಕತೆಯನ್ನು ಹೊಂದಿರುವುದಕ್ಕೆ ಅನೇಕ ಶಿಲಾಶಾಸನಗಳು ಸಾಕ್ಷಿಯಾಗಿವೆ. ಮುಂಡರಗಿ ತಾಲೂಕಿನ ತುಂಗಭದ್ರೆಯ ದಂಡೆಗುಂಟ ಹಾಗೂ ಹಲವು ಗ್ರಾಮಗಳಲ್ಲಿ ಉತ್ಖನನದ ಕಾರ್ಯ ಕೈಗೊಂಡರೆ ಈ ತಹಶೀಲಿನ ಈ ನಾಡಿನ ಪ್ರಾಚೀನತೆಯ ಮೇಲೆ ಬೆಳಕು ಚೆಲ್ಲಬಹುದಾಗಿದೆ. ಈ ಸದ್ಯಕ್ಕೆ ನಮಗೆ ದೊರೆಯುವ ಪ್ರಾಚೀನ ಅವಶೇಷಗಳೆಂದರೆ ದೇವಾಲಯಗಳು, ಶಿಲಾಶಾಸನಗಳು ಹಾಗೂ ಕಲಕೇರಿ, ಜಾಲವಾಡಗಿ ಭಾಗಗಳಲ್ಲಿ ಕಂಡುಬರುವ ಕುಪ್ಪರಿಗಳು. ಈ ಕುಪ್ಪರಿ ಅಥವಾ ಮಣ್ಣುಗುಡ್ಡೆಗಳು ಗುಡ್ಡಗಳ ನೆರೆಯಲ್ಲಿದ್ದು ಇವುಗಳ ಕಾಲ ಕ್ರಿ.ಶ. ಪೂ ೮ನೆಯ ಶತಮಾನದಿಂದ ಹಿಡಿದು ಕ್ರಿ.ಶ. ಆರಂಭದವರೆಗೆ ಎಂದು ಇತಿಹಾಸ ತಜ್ಞರು ಊಹಿಸಿದ್ದಾರೆ. ಈ ಕುಪ್ಪರಿಗಳ ಪರೀಘವು ೩೦ ರಿಂದ ೪೦ ಘೂಟುಗಳವರೆಗೆ ಇದ್ದು ಬಹುಶಃ ಇವು ಸತ್ತವರ ಸ್ಮಾರಕಗಳಾಗಿರಬಹುದೆಂದು ತರ್ಕಿಸಲಾಗಿದೆ. ಈ ಕುಪ್ಪರಿಗಳನ್ನು ಉತ್ಖನನ ಮಾಡಿದಾಗ ಅದರಲ್ಲಿ ಮಣ್ಣಿನ ಕುಡಿಕೆಗಳು ಕಬ್ಬಿಣದ ಆಯುಧಗಳು ದೊರೆತಿವೆ. ಕಲಕೇರಿಯಲ್ಲಿ ಕಂಡುಬರುವ ಇಂಥ ಕುಪ್ಪರಿಗಳ ಮೇಲೆ ಎರಡು ಘೂಟು ಎತ್ತರವಾದ ಕಲ್ಲುಗಳನ್ನು ನೆಡಲಾಗಿದೆ. ಇವುಗಳ ವರ್ತುಗಳ ವ್ಯಾಸ ಹತ್ತು ಪೂಟು ಇದ್ದು ಇವುಗಳನ್ನು ಅಗೆದಾಗ ಬಗೆ ಬಗೆಯ ಮಣ್ಣಿನ ಕುಡುಕೆಗಳಲ್ಲಿ ಬೇರೆ ಬೇರೆ ಪುಡಿಗಳು ಕಂಡುಬಂದಿದ್ದು ಅವು ರಾಸಾಯನಿಕ ಔಷಧಿಗಳಿರಬೇಕೆಂದು ಜನರ ನಂಬಿಕೆ ಇದೆ. ಈ ಕುಪ್ಪರಿಗಳನ್ನು ಸ್ಥಳೀಯರು ಸಿದ್ದರ ಕಟ್ಟೆಗಳೆಂದು ಕರೆಯುತ್ತಾರೆ. ಇವುಗಳ ಮೇಲಿರುವ ಕಲ್ಲುಗಳ ಮೇಲೆ ಭೂಮಿತಿಯ ರೇಖಾವಿನ್ಯಾಸಗಳನ್ನು ಹಳಗನ್ನಡದ ಅಕ್ಷರಗಳನ್ನು ಕೊರೆಯಲಾಗಿದ್ದು ಅವು ಅಸ್ಪಷ್ಟವಾಗಿವೆ. ಕೆಲವು ಕಲ್ಲುಗಳ ಮೇಲೆ ಸೂರ್ಯ–ಚಂದ್ರರ ರೇಖಾ ಚಿತ್ರಗಳಿವೆ.



ಮುಂಡರಗಿ ತಾಲೂಕಿನ ಪ್ರಾಚೀನ ಇತಿಹಾಸವನ್ನು ಸಾರುವಲ್ಲಿ ಈ ತಾಲೂಕಿನ ದೇವಾಲಯಗಳು ಪ್ರಮುಖ ಪಾತ್ರ ವಹಿಸುತ್ತವೆ. ಡಂಬಳದ ದೊಡ್ಡಬಸಪ್ಪನ ಗುಡಿ. ಸೋಮೇಶ್ವರ ದೇವಾಲಯ (ಡಬ್ಬಗಲ್ಲು ಗುಡಿ) ಮೇವುಂಡಿಯ ದಿಡಿಗೇಶ್ವರ, ಬಿದರಹಳ್ಳಿಯ ಸೋಮೇಶ್ವರ, ಮಲ್ಲಿಕಾರ್ಜುನ, ಸಿಂಗಟಾಲೂರಿನ ವೀರಭದ್ರ ದೇವಾಲಯ, ನಾಗರಹಳ್ಳಿಯ ಪಂಚಲಿಂಗ, ಗುಮ್ಮಗೋಳದ ಗೋಣಿ ಬಸವೇಶ್ವರ, ಬರದೂರಿನ ಭರತೇಶ್ವರ, ಚಿಕ್ಕವಡ್ಡಟ್ಟಿಯ ಕಲ್ಮೇಶ್ವರ, ಶಿರೂರಿನ ಮಳಗೇಶ್ವರ, ಜಂತ್ಲಿ ಆಲೂರಿನ ನಾಗೇಶ್ವರ, ಡೋಣಿಯ ಸಿದ್ದಲಿಂಗೇಶ್ವರ ಡೋಣಿಕವ್ವ, ಮುಂಡರಗಿಯ ಗುಡ್ಡದ ಮೇಲಿರುವ ಕೋಟೆಯ ಸಿದ್ದೇಶ್ವರ (ಮಲ್ಲಿಕಾರ್ಜುನ) ಮೊದಲಾದವುಗಳನ್ನು ಪ್ರಮುಖವಾಗಿ ಹೆಸರಿಸಬಹುದು. ವ್ಯಕ್ತಿಯ ಬದುಕಿನಲ್ಲಿ ಏರಿಳಿತಗಳಿರುವಂತೆ ಗ್ರಾಮಗಳ ಚರಿತ್ರೆಯಲ್ಲಿಯೂ ಏಳು ಬೀಳುಗಳಿವೆ. ಒಂದು ಕಾಲದಲ್ಲಿ ವೈಭವದ ಶಿಖರವನ್ನೇರಿ ಮೆರೆದ ರಾಜ್ಯ ಸಾಮ್ರಾಜ್ಯಗಳು, ನಗರಗಳು ಕಾಲನ ಕಾಲ್ತುಳಿತಕ್ಕೆ ಸಿಕ್ಕು ಇಂದು ಕುಗ್ರಾಮಗಳಾಗಿವೆ. ಅಗ್ರಹಾರಗಳಾಗಿ ಪ್ರಸಿದ್ಧಿಯನ್ನು ಪಡೆದ ಗ್ರಾಮಗಳು ನಿರ್ನಾಮವಾಗಿವೆ. ಆದರೂ ಆಯಾ ಪ್ರದೇಶಗಳಲ್ಲಿ ಉಳಿದಿರುವ ಅವಶೇಷಗಳು ಭಗ್ನ ಮಂದಿರಗಳು ತ್ರುಟಿತ ಶಿಲಾಶಾಸನಗಳು ವಿನಾಶದ ಅಂಚಿನಲ್ಲಿದ್ದರೂ ಇತಿಹಾಸಕಾರರಿಗೆ ಚರಿತ್ರೆ ನಿರ್ಮಾಪಕರಿಗೆ, ಸಂಶೋಧಕರಿಗೆ ತಮ್ಮ ಮೂಕ ವೇದನೆಯ ಮೂಲಕ ಗತವೈಭವ ವ್ಯಕ್ತಪಡಿಸಲು ಹವಣಿಸುತ್ತದೆ.

## ೪. ಶಾಸನಗಳಲ್ಲಿ ಮುಂಡರಗಿ :

ಒಂದು ನಾಡಿನ ಇತಿಹಾಸ ಚರಿತ್ರೆ, ಪರಂಪರೆಗಳನ್ನು ತಿಳಿಸುವಲ್ಲಿ ಶಾಸನಗಳು ಅತ್ಯಂತ ಮಹತ್ವದ ಪಾತ್ರ ವಹಿಸುತ್ತವೆ. ಸಾಮಾನ್ಯವಾಗಿ ಇತಿಹಾಸವೆಂದರೆ ಕಾಲ ಕಾಲಕ್ಕೆ ಆಳಿದ ರಾಜರು, ಅವರ ವಂಶ ಮಾಡಿದ ಕಾರ್ಯಗಳೆಂಬ ಭಾವನೆ ನಮ್ಮ ಜನತೆಯಲ್ಲಿ ಮೂಡಿದೆ. ಇತಿಹಾಸವನ್ನು ಚಿತ್ರಿಸುವ ಗ್ರಂಥಗಳಲ್ಲಿ ರಾಜ ರಾಣಿಯರ ರಾಜಕೀಯ ಇತಿಹಾಸ, ಅವರು ಕೈಕೊಂಡ ಯುದ್ಧ ಅವುಗಳ ಪರಿಣಾಮ ಇವೇ ಮುಖ್ಯವಾಗಿ ಕಂಡು ಬರುತ್ತದೆ. The Proper study of mankind is man ಎಂಬ ಪೋಪ ಕವಿಯ ನುಡಿ

ಇಲ್ಲಿ ಗಮನಾರ್ಹ. Votaire ಒಂದು ಗ್ರಂಥದಲ್ಲಿ ಇತಿಹಾಸವೆಂದರೇನೆಂಬುದನ್ನು ಹೇಳಿರುವದನ್ನು ಮನನ ಮಾಡಿಕೊಳ್ಳುವುದು ಸೂಕ್ತ. "I wish to write a history not of wars, but of society; and to ascertain how men lived in the interior of their families, and what were the acts which they commonly cultivated. My object is the history of human mind and not a mere details of petty facts; nor am I concerned with the history of great Lords…. but I want to know what were the steps by which men passed from barbarism to civilization" ಒಂದು ನಾಡಿನ ಇತಿಹಾಸವೆಂದರೆ ಅದನ್ನು ಆಳಿದ ರಾಜರ ಕತೆಯಲ್ಲ. ಆ ನಾಡಿನಲ್ಲಿ ಬದುಕಿದ ಜನ. ಆ ಜನ ಬದುಕಿದ ರೀತಿ. ಅನುಸರಿಸಿಕೊಂಡು ಬಂದ ಧರ್ಮ. ಅವರು ಅರಳಿಸಿದ ಕಲೆ, ಅವರು ಬರೆದಿರಬಹುದಾದ ಸಾಹಿತ್ಯ. ಅವರ ಬದುಕಿನಲ್ಲಿ ಬಂದ ಸಮಸ್ಯೆಗಳು ಅವುಗಳನ್ನು ಪರಿಹರಿಸಿಕೊಳ್ಳುವಲ್ಲಿ ಪಟ್ಟ ಪ್ರಯತ್ನ. ಜನಸಾಮಾನ್ಯರ ಹಿತಕ್ಕಾಗಿ, ನಾಡಿನ ಅಭಿವೃದ್ಧಿಗಾಗಿ, ದೇಶದ ಸ್ವಾತಂತ್ರ್ಯಕ್ಕಾಗಿ ಸ್ಪಂದಿಸಿದ ರೀತಿ, ದಾನ–ದತ್ತಿ–ಧರ್ಮ ಜೀವನಮೌಲ್ಯಗಳ ವಿವರಣೆ, ಇಂಥ ಇತಿಹಾಸ ಆ ನಾಡಿನ ಚರಿತ್ರೆಯೂ ಹೌದು, ಅವರ ಸಂಸ್ಕೃತಿಯೂ ಹೌದು.

ಒಂದು ಪ್ರಾಚೀನ ನಾಡಿನ ಸಾಂಸ್ಕೃತಿಕ ಇತಿಹಾಸವನ್ನು ಅರಿತುಕೊಳ್ಳುವಲ್ಲಿ ಶಿಲಾಶಾಸನಗಳ ಪಾತ್ರ ಮುಖ್ಯ. ಈ ಶಾಸನಗಳು ಇತಿಹಾಸದ ಪ್ರಮಾಣಭೂತವಾದ ಪುನರ್ ನಿರ್ಮಾಣಕ್ಕೆ ಅತಿ ಪ್ರಮುಖವಾದ ಆಧಾರಗಳಾಗಿವೆ. 'ಶಾಸನ' ಎಂಬ ಶಬ್ದವು ಸಂಸ್ಕೃತದ 'ಶಾಸ್' ಎಂಬ ಧಾತುವಿನಿಂದ ಬಂದಿದೆ. ಇದರ ಅರ್ಥ ಅಪ್ಪಣೆ ಮಾಡು ಎಂಬ ಘೋಷಣೆಯನ್ನು ಹೊರಡಿಸು ಎಂದಾಗುತ್ತದೆ. ಜನಸಾಮಾನ್ಯರ ಬದುಕು ಪ್ರವರ್ಧಮಾನಗೊಳ್ಳಲು, ರಾಜನ ಅಪ್ಪಣೆಯಂತೆ ಅಗ್ರಹಾರ, ದೇವಾಲಯ ಮೊದಲಾದವುಳಿಗೆ ಕೊಟ್ಟ ದಾನ, ಧರ್ಮ, ದತ್ತಿಗಳ ಘೋಷಣೆಗಳಿವು. ಶಿಲೆಗಳ ಮೇಲೆ, ತಾಮ್ರಪಟಗಳ ಮೇಲೆ ಈ ಘೋಷಣೆಗಳನ್ನು ಬರೆಯಿಸಲಾಗುತ್ತಿತ್ತು. ತಮಿಳು ನಾಡಿನಲ್ಲಿ ಅತೀ ಹೆಚ್ಚು ಶಾಸನಗಳು ದೊರೆಯುತ್ತವೆ. ಆನಂತರ ದ್ವಿತಿಯ ಸ್ಥಾನ ಕರ್ನಾಟಕಕ್ಕೆ ಇಡೀ ಭಾರತದಲ್ಲಿಯೇ ಹೆಚ್ಚಿನ ಶಾಸನಗಳ



ಸಂಖ್ಯೆ ತಮಿಳು ನಾಡಿನ ನಂತರ ನಮ್ಮ ಕನ್ನಡ ನಾಡಿನಲ್ಲಿ ದೊರೆಯುತ್ತವೆ. ವೀರಗಲ್ಲು, ಮಹಾಸತಿ ಕಲ್ಲು, ನಿಷಿದಿಗೆ ಕಲ್ಲು ಇವುಗಳಲ್ಲಿ ಸಮಾವೇಶವಾಗುತ್ತದೆ.

ಧರ್ಮ, ಶೌರ್ಯ, ಸಾಹಸ, ತ್ಯಾಗ, ದಾನ ಇವೇ ಹೆಚ್ಚಾಗಿ ಶಾಸನಗಳಲ್ಲಿ ಕಂಡುಬರುವ ಅಂಶಗಳು. "ಶಾಸನಗಳ ಉಗಮ ದಾನಧರ್ಮಗಳಲ್ಲಿ" ಎಂಬ ಆರ್. ಎಸ್. ಪಂಚಮುಖಿಯವರ ಮಾತನ್ನು ಕನ್ನಡ ನಾಡಿನ ಹೆಚ್ಚಿನ ಸಂಖ್ಯೆಯ ಶಾಸನಗಳು ಸಮರ್ಥಿಸುತ್ತವೆ. ದಾನ ಕೊಟ್ಟವರಾಗಲಿ, ದಾನ ಪಡೆದ ವ್ಯಕ್ತಿಗಳಾಗಲಿ, ಸಂಘ ಸಂಸ್ಥೆಗಳು ಕಾಲಗರ್ಭದಲ್ಲಿ ಅಡಗಿಹೋಗಿ ಸಾವಿರಾರು ವರುಷಗಳು ಸಂದರೂ, ಅವರ ಆಶಯ ಆಶೋತ್ತರಗಳು ಇಂದಿಗೂ ಶಾಸನಗಳ ಮುಖಾಂತರ ಸಾರುತ್ತವೆ. ಶೈವ, ವೈಷ್ಣವ, ಜೈನರ ಶಾಸನಗಳು ನಮ್ಮ ಕರ್ನಾಟಕದಲ್ಲಿ ಸಾಕಷ್ಟಿವೆ.

ಶೈವರು ಶಿವನನ್ನು ಬಣ್ಣಿಸುತ್ತ ಪ್ರಾರಂಭಿಸಿದ ಶಾಸನಗಳು ಪ್ರಾರಂಭದಲ್ಲಿ ಕಾಣುವ ಶ್ಲೋಕವಿದೆ.

**"ನಮಸ್ತುಂಗ ಶಿರಸ್ತುಂಬಿ ಚಂದ್ರಚಾಮರ ಚಾರವೇ ।**
**ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೇ ॥"**

(ಚಾಮರದಂತಹ ಬಾಲಚಂದ್ರದಿಂದ ಚುಂಬಿತವಾದ ಉತ್ತುಂಗ ಜಾಟಾಜೂಟಿಯನ್ನುಳ್ಳವನೂ, ಮೂರು ಲೋಕಗಳ ರಚನೆಗೆ ಮೂಲಸ್ತಂಭ ಸ್ವರೂಪನೂ ಆದ ಶಂಭುವಿಗೆ ನಮಸ್ಕಾರ.)

ವೈಷ್ಣವರು ವಿಷ್ಣುವಿನ ಮಹಿಮೆಯಿಂದ ಶಾಸನಗಳನ್ನೂ ಪ್ರಾರಂಭಿಸಿದ್ದಾರೆ.

**"ಜಯತಿ ಆವಿಷ್ಕೃತಂ ವಿಷ್ಣೋರ್ ವರಾಹಂ ಕ್ಷೋಬಿತಾರ್ಣವಂ ।**
**ದಕ್ಷಿಣೋನ್ನತೆ ದಂಷ್ಟಾಗ್ರ ವಿಶ್ರಾಂತ ಭುವನಂ ವಪುಃ॥**

(ಸಮುದ್ರವನ್ನು ಹೊಕ್ಕು ಕ್ಷೋಭೆಗೊಳಿಸಿ ಅಲ್ಲಿಂದ ಪ್ರಶಾಂತವಾದ ಭೂಮಿಯನ್ನು ತನ್ನ ಬಲದಂಡೆಯ ಮೇಲೆ ಹೊತ್ತು ತಂದ ವರಾಹರೂಪದ ವಿಷ್ಣುವಿಗೆ ಜಯವಾಗಲಿ.)

**ಜೈನ ಶಾಸನಗಳು ಜಿನಸ್ತುತಿಯಿಂದ ಪ್ರಾರಂಭವಾಗುತ್ತವೆ.**
**ಶ್ರೀಮತ್ ಪರಮಗಂಭೀರ ಸ್ಯಾದ್ವಾದಾಮೋಘ ಲಚ್ಛಣಮ್ ।**
**ಜಿಯಾತ್ ತ್ರೈಲೋಕ್ಯನಾಥಸ್ಯ ಶಾಸನಂ ಜಿನಶಾಸನಂ ॥**

(ತ್ರೈಲೋಕ್ಯನಾಥನ ಅತ್ಯಂತ ಉದಾತ್ತವಾದ ಸ್ಯಾದ್ವಾದದ ಜಿನಶಾಸನವು ಅಮೋಘವಾದ ಜಯವನ್ನು ಪಡೆಯಲಿ)

ಹೀಗೆ ಈ ಮತಗಳು ತಮ್ಮ ತಮ್ಮ ಇಷ್ಟದೇವತೆಗಳನ್ನೂ ಸ್ತುತಿಸುವ ಮಂಗಳ ಶ್ಲೋಕಗಳೊಡನೆ ಪ್ರಾರಂಭವಾಗುತ್ತವೆ. ಇದಾದ ಮೇಲೆ ದಾನಿಯ ಜಿರುಹಾವಳಿ, ವಂಶಪರಂಪರೆ, ಶಾಸನ ಬರೆಯಿಸಿದ ಕಾಲ, ಬರೆಯಿಸಿದ ಕಾರಣ ಮುಂತಾದ ಐತಿಹಾಸಿಕ ಸಂಗತಿಗಳು ಸೂಚಿಸಲ್ಪಡುತ್ತವೆ.

ಈ ರೀತಿಯಾಗಿ ಕೊಡಲ್ಪಟ್ಟ ದಾನ, ದತ್ತಿ ಅವುಗಳನ್ನು ಕಾಪಾಡಿಕೊಂಡು ಬರುವಿಕೆ, ಮುಂದುವರಿಸುವಿಕೆಯನ್ನು ಸೂಚಿಸುತ್ತ

**"ಸ್ವದತ್ತಂ ವಾ ಪರದತ್ತಂ ವಾ ಯೋ ಹರೇತ್ ವಸುಂಧರಾಮ್ ।**
**ಷಷ್ಟಿರ್ ವರ್ಷ ಸಹಸ್ರಾಣಿ ವಿಷ್ಠಾಯಾಮ್ ಜ್ಯಾಯತೇ ಕ್ರಿಮಿಃ ॥**

(ತಾವು ಕೊಟ್ಟದ್ದನ್ನಾಗಲಿ, ಪರರು ಕೊಟ್ಟದ್ದನ್ನಾಗಲಿ ಕೊಟ್ಟ ದಾನವನ್ನು ಯಾರೂ ಅಪಹರಿಸುತ್ತಾರೋ ಅವರು ಅರವತ್ತು ಸಾವಿರ ವರ್ಷಗಳವರೆಗೆ ಕ್ರಿಮಿಗಳಾಗಿ ಜನಿಸುತ್ತಾರೆ.)

ಹಲವು ಶಾಸನಗಳಲ್ಲಿ ಮೇಲಿನ ಶ್ಲೋಕಕ್ಕೆ ಬದಲಾಗಿ ಬೇರೊಂದು ಶ್ಲೋಕವನ್ನು ಕಾಣಬಹುದು.

**"ದಾನಪಾಲನ್ ಯೋರ್ ಮಧ್ಯೆ ದಾನಾಚ್ಛೆಯೋನುಪಾಲನಂ ।**
**ದಾನಾತ್ ಸ್ವರ್ಗಂ ಆವಾಪ್ನೋತಿ ಪಾಲನಾತ್ ಅಚ್ಯುತಂ ಪದಂ ॥**

(ದಾನವನ್ನು ಕೊಡುವುದು ಮತ್ತು ಕೊಟ್ಟ ದಾನವನ್ನು ಪಾಲಿಸುವುದು ಹೆಚ್ಚು. ಶ್ರೇಯಸ್ಕರವಾದುದು, ದಾನವನ್ನಿತ್ತವರು ಸ್ವರ್ಗವನ್ನು ಪಡೆದರೆ ಅದನ್ನು ಪರಿಪಾಲಿಸಿಕೊಂಡು ಬಂದವರು ಅಚ್ಯುತ್ ಪದವಿಯನ್ನು ಪಡೆಯುತ್ತಾರೆ.)

ಮುಂಡರಗಿ ನಾಡಿನ ಪ್ರಾಚೀನ ಇತಿಹಾಸವನ್ನು ಹೇಳುವ ಶಾಸನಗಳು ಬಹಳ ಸಂಖ್ಯೆಯಲ್ಲಿವೆ. ಹಿಂದಿನವರ ಮತ–ಧರ್ಮ, ಜನಸಾಮಾನ್ಯರ ಆಚಾರ–ವಿಚಾರ, ಶ್ರದ್ಧೆ–ನಂಬುಗೆ, ಸಾಮಾಜಿಕ ರೀತಿ–ನೀತಿಗಳು, ತ್ಯಾಗ–ಬಲಿದಾನ, ದಾನ–ದತ್ತಿ ಮುಂತಾದ ಧಾರ್ಮಿಕ–ಸಾಂಸ್ಕೃತಿಕ ಮೌಲ್ಯಗಳನ್ನು ಶಿಲೆಗಳಲ್ಲಿ



ಕೊರೆದಿಟ್ಟ ಈ ಶಬ್ದಶಾಸನ ಸಂಪದ ನಾಡವರ ಚರಿತ್ರೆಗೆ ಹಿಡಿದ ರನ್ನಗನ್ನಡಿ. ಮುಂಡರಗಿ ನಾಡು ಇಂದು ಸಂಕುಚಿತಗೊಂಡು ತಾಲೂಕಿನ ಮುಖ್ಯಸ್ಥಳವೇನೋ ಆಗಿದೆ. ಮೊದಲು ಈ ಮುಂಡರಗಿ ತಾಲೂಕಿಗೆ ಸಂಬಂಧಿಸಿದ ಶಾಸನಗಳ ಅಧ್ಯಯನ ಮಾಡಿದ ನಂತರ ಪ್ರಾಚೀನ ಕಾಲದಲ್ಲಿದ್ದ ಮುಂಡರಗಿ ನಾಡು ಅದಕ್ಕೆ ಸಂಬಂಧಿಸಿದ ಇತರ ನಾಡು ಗ್ರಾಮಗಳ ಬಗ್ಗೆ ಅರಿತುಕೊಳ್ಳುವುದು ಒಳಿತು.

ಮೊದಲು ಧಾರವಾಡ ಜಿಲ್ಲೆಯಲ್ಲಿದ್ದ ಮುಂಡರಗಿ ಇಂದು ಗದಗ ಜಿಲ್ಲೆಗೆ ಸೇರ್ಪಡೆಯಾಗಿದೆ. ಈ ತಾಲೂಕಿನಲ್ಲಿ ೫೩ ಗ್ರಾಮಗಳಿದ್ದು, ೨೧ ಗ್ರಾಮಗಳಲ್ಲಿ ಸದ್ಯಕ್ಕೆ ೫೯ ಶಾಸನಗಳು ಲಭ್ಯವಾಗಿವೆ. ಅವುಗಳಲ್ಲಿ ೫೨ ಶಾಸನಗಳು ಮಾತ್ರ ಪ್ರಕಟಗೊಂಡಿದೆ. ೧) ಮೇವುಂಡಿ–೮, ೨) ಡಂಬಳ–೧೦, ೩) ಕಲಕೇರಿ–೨, ೪) ಆಲೂರ–೬, ೫) ಡೋಣಿ–೯, ೬) ಶಿರೂರ–೬ ೭) ಬಿದರಹಳ್ಳಿ–೩, ೮) ಕಲಕೇರಿ–೨, ೯) ಚಿಕ್ಕವಡ್ಡಟ್ಟಿ–೨, ೧೦) ನಾಗರಹಳ್ಳಿ–೨, ೧೧) ಮುಂಡರಗಿ–೧, ೧೨) ಕಕ್ಕೂರ–೨, ೧೩) ಕೊರ್ಲಹಳ್ಳಿ–೧, ೧೪) ಜ್ಯಾಗಿನಕೆರೆ–೧, ೧೫) ತಾಮ್ರಗುಂಡಿ–೧, ೧೬) ಬರದೂರ–೧, ೧೭) ಬಾಗೇವಾಡಿ–೧, ೧೮) ಬೂದಿಹಾಳ–೧, ೧೯) ಬ್ಯಾಲವಾಡಿಗಿ–೧, ೨೦) ಮುಪ್ಪಿಕೊಪ್ಪ–೧, ೨೧) ಹೈತಾಪುರ–೧, ಕೊರ್ಲಹಳ್ಳಿ, ಹಮ್ಮಿಗಿ, ಹೆಸರೂರ ಈ ಭಾಗದಲ್ಲಿ ಉತ್ಖನನ ಕಾರ್ಯ ಕೈಗೊಂಡಲ್ಲಿ ಇನ್ನೂ ಅನೇಕ ಶಾಸನಗಳು ದೊರೆಯಬಹುದಾಗಿದೆ. ತುಂಗಭದ್ರಾ ಆಣೆಕಟ್ಟಿನಿಂದಾಗಿ ನಿಂತ ನೀರಲ್ಲಿ ಹಲವಾರು ಶಾಸನಗಳು ಜಲಸಮಾಧಿ ಹೊಂದಿರಬಹುದು.

ಈಗ ದೊರೆತಿರುವ ಶಾಸನಗಳಲ್ಲಿ ಕೆಲವು ೩–೪ ಪುಟಗಳಷ್ಟು ದೊಡ್ಡವು ಆಗಿದ್ದು ಪ್ರದೇಶ, ಅರಸರು, ಸಾಮಂತರು, ಬಿಟ್ಟ ದಾನ ದತ್ತಿ ನಿಖರ ದಿನಗಳನ್ನು ಒಳಗೊಂಡಿವೆ. ಇನ್ನೂ ಕೆಲವು ಶಾಸನಗಳು ಕೇವಲ ೨–೩ ಸಾಲುಗಳನ್ನು ಒಳಗೊಂಡಿದ್ದು ತ್ರುಟಿತಗೊಂಡಿವೆ. ಮುಂಡರಗಿ ತಾಲೂಕಿನಲ್ಲಿ ಲಭ್ಯವಿರುವ ಶಾಸನಗಳ ಅಧ್ಯಯನ ಕೈಗೊಂಡಾಗ ಹೆಚ್ಚಾಗಿ ರಾಷ್ಟ್ರಕೂಟ ಹಾಗೂ ಅನಂತರ ಈ ನಾಡನ್ನು ಆಳಿದ ಕಲ್ಯಾಣದ ಚಾಲುಕ್ಯರ ಆಳ್ವಿಕೆಗೆ ಸಂಬಂಧಪಟ್ಟವುಗಳೇ ಆಗಿವೆ. ಇದಕ್ಕಿಂತ ಮೊದಲು ಮುಂಡರಗಿ ಅಸ್ತಿತ್ವದ ಬಗೆಗೆ ನಿಖರ ದಾಖಲೆಗಳಿಲ್ಲ.

ಒಂದು ಮೂಲದ ಪ್ರಕಾರ ಮುಂಡರಗಿ ಸಮೀಪದ ಕನಕಗಿರಿಯೆ ಸಾಮ್ರಾಟ ಅಶೋಕನ ಕಾಲದಲ್ಲಿ 'ಸುವರ್ಣಗಿರಿ' ಎಂಬ ಹೆಸರಿನೊಂದಿಗೆ ಪ್ರಸಿದ್ಧ ಹೊಂದಿದ್ದು ಮೌರ್ಯರ ದಕ್ಷಿಣದ ಗಡಿ ಪ್ರಾಂತವಾಗಿತ್ತೆಂದೂ ತಿಳಿದುಬರುತ್ತದೆ. ಮುಂಡರಗಿ ನೆರೆಯಲ್ಲಿರುವ ಕೊಪ್ಪಳದಲ್ಲಿ ಅಶೋಕನ ಶಾಸನಗಳು ಲಭ್ಯವಾಗಿವೆ. ಈ ಎಲ್ಲ ಸಂಗತಿಗಳನ್ನು ಲಕ್ಷಿಸಿದಾಗ ಮುಂಡರಗಿಯು ಮೌರ್ಯರ ಆಳ್ವಿಕೆಯಲ್ಲಿ ಅಸ್ತಿತ್ವದಲ್ಲಿತ್ತೆಂದು ಊಹಿಸಬಹುದು. ಆದರೆ ಅಂದು ಮುಂಡರಗಿ ಎಂಬ ಹೆಸರು ಇಲ್ಲದೆ ಇರಬಹುದು.

ಈ ವಿವರಗಳನ್ನು ಅವಲೋಕಿಸಿದಾಗ ಇಂದಿನ ಮುಂಡರಗಿ ತಾಲೂಕು ಮಾಸವಾಡಿ–೧೪೦ರ ಪ್ರಮುಖ ಭಾಗವಾಗಿತ್ತೆಂದೂ ಈ ಮಾಸವಾಡಿ ಅಥವಾ ಮಾಸೇವಾಡಿ ಅಂದರೆ ಮೇಲ್ವಿಡಿ (ಮೇವುಂಡಿ) ನಾಡಾಗಿರಬೇಕೆಂದು ಹಲವು ಸಂಶೋಧಕರ ಅಭಿಪ್ರಾಯವಾಗಿದೆ. ಕಲ್ಯಾಣ ಚಾಲುಕ್ಯರ ಆಳ್ವಿಕೆಯಲ್ಲಿ ಈ ಮಾಸವಾಡಿ–೧೪೦, ಮುಂಡರಗಿ ತಾಲೂಕ, ಹಾವೇರಿ ತಾಲೂಕಿನ ವರದಾ ನದಿಯು ಉತ್ತರ ಪೂರ್ವಭಾಗ, ಗದಗ ತಾಲೂಕಿನ ಪೂರ್ವ ಭಾಗಗಳನ್ನೊಳಗೊಂಡ ಆಡಳಿತ ವಿಭಾಗವಾಗಿತ್ತು. ಲೊಕ್ಕಿಗುಂಡಿ ಅರ್ಥಾತ್ ಲಕ್ಕುಂಡಿ ಸಹ ಈ ನಾಡಿನಲ್ಲಿ ಸಮಾವೇಶವಾಗಿತ್ತೆಂಬುದು ತಿಳಿದುಬರುತ್ತದೆ.

## ೫. ಮುಂಡರಗಿ ತಾಲೂಕಿನ ಗ್ರಾಮ ಪರಂಪರೆ:

**ಡಂಬಳ:** ಮುಂಡರಗಿ ತಾಲೂಕಿನ ಎರಡನೆಯ ದೊಡ್ಡ ಗ್ರಾಮವೇ ಡಂಬಳ. ಮುಂಡರಗಿಯಿಂದ ಗದುಗಿಗೆ ಹೋಗುವ ಮಾರ್ಗದಲ್ಲಿ ೨೦ ಕಿ.ಮೀ. ಅಂತರದಲ್ಲಿದೆ. ಕ್ರಿ.ಶ. ದ ಪ್ರಾರಂಭದಲ್ಲಿಯೇ ಈ ಡಂಬಳ ಗ್ರಾಮವು ಪ್ರಸಿದ್ಧಿ ಪಡೆದಿತ್ತೆಂಬುದಕ್ಕೆ ಅನೇಕ ಆಧಾರಗಳಿವೆ. ಕನ್ನಡಿಗರನ್ನೆಲ್ಲ ಒಂದುಗೂಡಿಸಿ ಆಳಿದ ಬಾದಾಮಿಯ ಚಾಲುಕ್ಯ ಅರಸರನ್ನು, ಸಮಕಾಲೀನರೆಲ್ಲ 'ಕರ್ನಾಟಕ'ರೆಂದು ಕರೆದಿದ್ದಾರೆ. ಅವರ ಸೈನ್ಯವು 'ಕರ್ನಾಟಕ ಬಲ'ವೆಂದು ಹೆಸರಾಗಿತ್ತು. ಡಂಬಳವು ಅವರ ಆಳ್ವಿಕೆಗೆ ಒಳಪಟ್ಟಿತ್ತು. ಬಾದಾಮಿಯ ಚಾಲುಕ್ಯರು ಕ್ರಿ.ಶ. ೫೪೦ ರಿಂದ ೭೫೩ ರವರೆಗೆ ಆಳಿದರು. ಈ ಚಾಲುಕ್ಯರಲ್ಲಿ ಅತ್ಯಂತ



ಪ್ರಸಿದ್ಧನಾಗಿದ್ದ ಎರಡನೆಯ ಪುಲಕೇಶಿಯ ಕಾಲದಲ್ಲಿ ಡಂಬಳವು ನೆಗಳ್ತೆವಡೆದಿತ್ತೆಂಬುದನ್ನು ಜನಪದ ಗೀತೆಗಳಲ್ಲಿ ಕಾಣುತ್ತೇವೆ.

**"ಪುಲಕೇಶಿ ದೊರೆಯಾಳ ಕಲಕೆಲ್ಲ ತಿಳಿಯಾಗಿ**
**ಬಲಕಾಣ ಕೇಳೊಡೆ ಬಸವ । ಡಂಬಳದ**
**ಕಳಸದ ತೇರ ಎಳದಾಂವ"**

**"ಕೆರೆ ಬತ್ತಿ ಡಂಬಳದ ದೊರೆ ಕೇಳಿ ಬಾದಾಮಿ**
**ಮರಗ್ಯಾನ ಕರುಣ ಪುಲಕೇಶಿ ಸಾರ್ಯಾನ**
**ತೆರಿಗಿ ಜನದಾಗ ಕಡತಾವೋ ॥"**

ಚಾಲುಕ್ಯರ ಸಾಮಂತರಾಗಿದ್ದ ರಾಷ್ಟ್ರಕೂಟರು ಮುಂದೆ ಸ್ವತಂತ್ರರಾಗಿ ಕ್ರಿ.ಶ. ೭೫೩ ರಿಂದ ೯೭೩ ರವರೆಗೆ ಆಳಿದರು. ಎರಡನೆಯ ಕೃಷ್ಣ ಬೆಳ್ವಲ ೩೦೦ ನ್ನು ಆಳಿದ್ದಾಗಿ ಗದುಗಿನ ಸುತ್ತಮುತ್ತಲಿನ ಶಾಸನಗಳು ಸಾರುತ್ತವೆ. ಕಲ್ಯಾಣದ ಚಾಲುಕ್ಯರು ಕ್ರಿ.ಶ. ೯೭೩ ರಿಂದ ೧೧೯೮ ರವರೆಗೆ ಆಳಿದರು. ಈ ಕಾಲದಲ್ಲಿ ಮಾಸೆಯವಾಡಿ–೧೪೦ ಉಚ್ಛ್ರಾಯ ಸ್ಥಿತಿಗೆ ಬಂದುದನ್ನು, ಆ ನಾಡಿನ ವರ್ಣನೆ ಬೆಳೆಗಳು, ಜನತೆಯ ಮನೋಧರ್ಮ ದಾನಿಗಳು ಮೊದಲಾದ ವಿಷಯಗಳನ್ನು ಕಲ್ಲೇಶ್ವರ ಗುಡಿಗೆ ಹೋಗುವ ಬಾಗಿಲ ಬದಿಯ ಎಡಕಂಬದ ಮೇಲಿನ ಶಾಸನವೊಂದು ಬಣ್ಣಿಸಿದೆ. ಈ ಶಾಸನದ ಕಾಲ ೧೨ನೆಯ ಶತಮಾನದ್ದಿದ್ದು ತ್ರುಟಿತಗೊಂಡಿದೆ.

ಈ ಡಂಬಳವನ್ನು ಶಾಸನಗಳಲ್ಲಿ ಧರ್ಮವೊಳಲು ಅಥವಾ ಧರ್ಮಪುರಿ ಎಂದು ಕರೆಯಲ್ಪಟ್ಟಿದ್ದು ಇಲ್ಲಿ ಜೈನ, ಬೌದ್ಧ ಧರ್ಮಗಳ ವಿಹಾರ, ಸಂಘಾರಾಮಗಳ ಅವಶೇಷಗಳನ್ನು ಇಂದಿಗೂ ಕಾಣಬಹುದು. ಬಾಚಿಶೆಟ್ಟಿಯ ಅಳಿಯನಾದ ಬೀರಯ್ಯ ಶೆಟ್ಟಿ ನಗರದ ಜಿನಾಲಯಕ್ಕೆ ೩೫ ಗದ್ಯಾಣಗಳನ್ನು ದಾನವಿತ್ತ ಸಂಗತಿ ೧ನೇ ಸೋಮೇಶ್ವರನ ಕಾಲದ ಶಾಸನ ತಿಳಿಸುತ್ತದೆ. ಚಾಲುಕ್ಯ ತ್ರಿಭುವನಮಲ್ಲ (೬ನೆಯ ವಿಕ್ರಮಾದಿತ್ಯ)ನ ಕಾಲದಲ್ಲಿ ಪೆರ್ಮಭೂಪನು ಮಾಸವಾಡಿ–೧೪೦ನ್ನು ಆಳುತ್ತಿದ್ದನು. ಆಗ ರಬ್ಬೆರಸ ಬಾಚಿಕಬ್ಬೆಯರ ಪುತ್ರ ಅಜ್ಜಯ ನಾಯಕ ಧರ್ಮವೊಳಲಿನ ಅಜ್ಜೇಶ್ವರ ದೇವಾಲಯ (ಇಂದು ದೊಡ್ಡ

ಬಸಪ್ಪನ ಗುಡಿಯೆಂದು ಕರೆಯುವ) ವನ್ನು ಕಟ್ಟಿಸಿ ಹೆಮ್ಮಾಡಿಯರಸನಿಗೆ ೧೬ ಶೆಟ್ಟಿಗಳಿಂದ ಭೂಮಿಯನ್ನು ಕೊಂಡುಕೊಂಡನು.

ಈ ಧರ್ಮವೊಳಲು ಪಟ್ಟಣವು ಕರ್ನಾಟಕದ ಭೂಮಿಯೆಂದು ಸ್ತ್ರೀಯ ನಡುವಿನ ಭಾಗಕ್ಕೆ ಶ್ರೇಷ್ಠ ಮುತ್ತಿನಹಾರವಿತ್ತೆಂದೂ, ಇದು ಮಾಸವಾಡಿ ನಾಡಿಗೆ ಕಟ್ಟಿದ ಪಟ್ಟವಾಗಿ ಕಳಸಪ್ರಾಯವಾಗಿ ಕಂಗೊಳಿಸುತ್ತಿದ್ದುದನ್ನು ಈ ಪಟ್ಟಣದ ಹೊರವಲಯದಲ್ಲಿ ಸುಗಂಧವುಳ್ಳ ಭತ್ತ, ಕಾಲುವೆಗಳಲ್ಲಿ ಆಡುವ ಹಂಸೆಗಳು, ಕೇಕೆ ಹಾಕುವ ನವಿಲುಗಳಿಂದ, ಗಳಪುವ ಅರಗಿಣಿಗಳಿಂದ ಶೋಭಾಯಮಾನ ದಾಗಿತ್ತೆಂಬುದನ್ನು ಶಾಸನದಲ್ಲಿ ಬಣ್ಣಿಸಲಾಗಿದೆ.

**"ಆತನಿಂ ಪೆರ್ಮನೃಪನಿಂ ಪರೀಕ್ಷ್ಯ ಮಾಡಿರ್ದ ಮಾಸೇವಾಡಿ ನಾಡಿಗೆ**
**ಕಟ್ಟಿದ ಪಟ್ಟಮುಮಿಟ್ಟ ಬೊಟ್ಟಮಳವಟ್ಟ ಕಳಸಮುಮಿ ।**
**ರ್ಪಂತೆ ಧರ್ಮವೊಳಲೆಂಬ ಮಹಾಪಟ್ಟಣಂ ವಿರಾಜಿ ।**
**ಸುತಿರ್ಪುದದರ ಮಹಿಮೆಯಂ ಪೇಳ್ವಡೆ ॥"**

ಶಕೆ ೧೧೧೬ ಕ್ರೋಧಿನಾಮ ಸಂವತ್ಸರದಲ್ಲಿ ಪಶ್ಚಿಮ ಚಾಲುಕ್ಯ ಚಕ್ರವರ್ತಿ ಸೋಮೇಶ್ವರ ದೇವನ ಮಹಾಪ್ರಧಾನಿ ತೇಗಿಮಯ್ಯ ದಂಡನಾಯಕನಾಗಿದ್ದು ದೇವರಸ ಸ್ವಯಂಭೂ ದೇವರ ಎದುರಿಗೆ ಧರ್ಮಪುರ (ಡಂಬಳ) ದಲ್ಲಿ ಗೋಣಸಮುದ್ರವೆಂದು ಕರೆಯಲ್ಪಡುವ ಕೆರೆಗೆ ಕೋಡಿ ನಿರ್ಮಿಸಿದ ವಿಷಯವನ್ನು ದೊಡ್ಡ ಬಸಪ್ಪನ ಗುಡಿ (ಅಜ್ಜೇಶ್ವರ) ಯಲ್ಲಿರುವ ಶಾಸನದಿಂದ ತಿಳಿದು ಬರುತ್ತದೆ. ಕ್ರಿ.ಶ. ೧೦೯೫ ರಲ್ಲಿ ಈ ನಾಡಿನಲ್ಲಿ ತಾಂತ್ರಿಕ ವಜ್ರಯಾನ ಬೌದ್ಧ ಧರ್ಮವು ಹೆಚ್ಚು ಪ್ರಚುರತೆಯನ್ನು ಪಡೆದಿತ್ತೆಂದು ಶ್ರೀ ಹಯವದನರಾವ ತಮ್ಮ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. ಇಲ್ಲಿಯ ಶಾಸನವೊಂದು "ನಮೋ ಬುದ್ಧಾಯ" ಎಂದು ಪ್ರಾರಂಭಗೊಂಡಿದ್ದು ಇದರಲ್ಲಿ ತಾರಾ ಭಗವತಿಯನ್ನು ಸ್ತುತಿಸಲಾಗಿದೆ. ಇಲ್ಲಿಯ ಬೌದ್ಧ ವಿಹಾರಕ್ಕೆ "ಶ್ರೀ ಭಗವತಿ ಆರ್ಯ ತಾರಾ ವಿಹಾರ" ಎಂಬ ಹೆಸರಿತ್ತು. ಇದರಲ್ಲಿ ತಾರಾದೇವಿಯ ವಿಗ್ರಹವಿದ್ದು ಅವಳ ನಾಮಸ್ಮರಣೆಯಿಂದ ಅಷ್ಟಸಿದ್ಧಿಗಳು ಲಭಿಸುತ್ತವೆಂದು ವಿವರಿಸಲಾಗಿದೆ. ಕ್ರಿ.ಶ. ೧೦೯೮ರ ಶಾಸನವೊಂದು ಬೌದ್ಧರ ಕೊನೆಯ ವಿಹಾರವನ್ನು ಕಟ್ಟಿಸಿದವೆಂದೂ ಅಲ್ಲಿ ನಿತ್ಯ ದೀಪಕ್ಕಾಗಿ ಸುಮಾರು ೫೦ ಜನ ಗಾಣಿಗೇರರು ಎಣ್ಣೆದಾನ ಮಾಡಿದ ವಿಷಯ ಒಳಗೊಂಡಿದೆ.



ಚಾಲುಕ್ಯ ವಿಕ್ರಮಾದಿತ್ಯನ ಪಿರಿಯರಸಿ ಲಕ್ಷ್ಮೀದೇವಿ "ಪದಿನೆಂಟು ಅಗ್ರಹಾರಮುಮಂ ಧರ್ಮಪುರಮುಮಂ" ಆಳುತ್ತಿದ್ದಳೆಂದು ಕ್ರಿ.ಶ. ೧೦೯೬–೯೭೮ ಡೋಣಿ ಗ್ರಾಮದ ಶಾಸನದಿಂದ ತಿಳಿದುಬರುತ್ತದೆ. ಡಬ್ಬುಗಲ್ಲ (ಸೋಮೇಶ್ವರ) ದೇವಾಲಯದ ಮಂಟಪವೇದಿಕೆಯಲ್ಲಿ ಶಾಸನವೊಂದು ೧೨ನೆಯ ಶತಮಾನಕ್ಕೆ ಸೇರಿದ್ದು ಇದರಲ್ಲಿ ಮಾಧವೇಶ್ವರ ದೇವಾಲಯಕ್ಕೆ ಬಿಟ್ಟ ಒಂದು ಗಡಿಂಬ ಭೂಮಿಯ ಉಲ್ಲೇಖವಿದೆ. ಜೈನ ಬಸದಿಯ ಪ್ರವೇಶ ದ್ವಾರದ ಎಡಬದಿಗಿರುವ ಶಾಸನ ಯಾದವ ರಾಮದೇವನ ಆಳಿಕೆಗೆ ಸೇರಿದ್ದು ಇದರ ಕಾಲ ಕ್ರಿ.ಶ. ೧೨೮೩ ಇದರಲ್ಲಿ ಭೋಗದೇವ ದೇವಾಲಯದ ಆಚಾರ್ಯನ ಬಗೆಗೆ ಹಾಗೂ ಭೂದಾನ ಮಾಡಿದ ಉಲ್ಲೇಖವಿದೆ. ದಕ್ಷಿಣೋತ್ತರ ಶಿಲ್ಪಕಲೆಯೆಂದು ಹೊಗಳಿಸಿಕೊಂಡ ಚಾಲುಕ್ಯ ಮಾದರಿಯ ಶಿಲ್ಪಕಲೆಯಲ್ಲಿ ಮಾನ್ಯತೆಯನ್ನು ಪಡೆದ ದೊಡ್ಡ ಬಸಪ್ಪನ ಗುಡಿ (ಅಜ್ಜೇಶ್ವರ) ಯ ವಾಸ್ತುಶಿಲ್ಪ ವಿನ್ಯಾಸ, ರಚನಾಕ್ರಮ ಕಂಬಗಳನ್ನು ಕುರಿತು ಶಿಲ್ಪಕಲಾ ತಜ್ಞ ಇತಿಹಾಸಕಾರ ಹೆನ್ರಿ ಕಝಿನ್ಸ್‌ರವರು "These pillars are the most beautiful specimens of Chalukyan work. These are perhaps no other pillars throughout the whole extent of chalukyan handicraft abundance of minute work which covers their surfaces" ಎಂದು ಮುಕ್ತಕಂಠದಿಂದ ಹೊಗಳಿದ್ದಾರೆ.

ಇಂದು ಅವಸಾನದ ಅಂಚಿನಲ್ಲಿರುವ ಡಂಬಳದ ಈಶಾನ್ಯ ದಿಕ್ಕಿಗಿರುವ ಗುಡಿಗಳಲ್ಲಿ ಕಲಾತ್ಮಕ ದೃಷ್ಟಿಯಿಂದ ಅತ್ಯಂತ ಪ್ರಸಿದ್ಧವಾದದ್ದು ದೊಡ್ಡ ಬಸಪ್ಪನ ಗುಡಿ. ಪ್ರಾಚೀನ ಕಾಲದಲ್ಲಿ ಅಜ್ಜೇಶ್ವರ ದೇವಾಲಯವೆಂದು ಅಗ್ಗಳಿಕೆಯನ್ನು ಹೊಂದಿತ್ತು. ವಾಸ್ತುಶಿಲ್ಪದ ಅತ್ಯುತ್ತಮ ಮಾದರಿಗಳಲ್ಲಿ ಒಂದಾಗಿದೆ. ಈ ದೇವಾಲಯದ ದಕ್ಷಿಣದಲ್ಲಿ ಅಲಂಕೃತಗೊಂಡ ಮುಖಮಂಟಪ. ಪೂರ್ವಕ್ಕೆ ನಂದಿ ಮಂಟಪವಿದೆ. ಚೆನ್ನಾಗಿ ಪರಿಶೀಲಿಸಿದರೆ ಬಹುಶಃ ನಂದಿಯ ಹಿಂದೆ ಮೊದಲು ಗೋಡೆಯಿದ್ದಿರಬಹುದೆಂದು ಅನಿಸುತ್ತದೆ. ಈಗ ಅದು ಬಿದ್ದಿದೆ. ಇಲ್ಲಿಯ ನಂದಿ ಸುಮಾರು ೫ ಅಡಿ ಎತ್ತರವಿದ್ದು ಅತ್ಯಂತ ಆಕರ್ಷಕವಾಗಿದೆ. ಈ ಎತ್ತರವಾದ ನಂದಿಯಿಂದಾಗಿಯೇ ಇದನ್ನು ದೊಡ್ಡಬಸಪ್ಪನ ಗುಡಿ ಎಂದು

ಕರೆಯಲಾಗುತ್ತದೆ. ಇದರ ಗರ್ಭಗುಡಿ ಮತ್ತು ಮಂಟಪಗಳು ಚಚ್ಚೌಕಾವಾಗಿದ್ದರೂ ಅವುಗಳ ಹೊರಭಾಗಗಳು ನಕ್ಷತ್ರಾಕಾರದಲ್ಲಿವೆ. ಒಂದು ಚೌಕೋನವನ್ನು ಸಮಾನಾಂತರದಲ್ಲಿ ತಿರುಗಿಸುತ್ತ ಹೋದರೆ ಈ ಪ್ರಕಾರದ ನಕ್ಷತ್ರಾಕಾರದ ತಳಪಾಯ ಸಿದ್ಧವಾಗುತ್ತದೆ. ಗರ್ಭಗುಡಿಯಲ್ಲಿ ಲಿಂಗವಿದೆ. ಗುಡಿಯ ಮುಂಭಾಗದಲ್ಲಿ ಚೆನ್ನಾಗಿ ಕೆತ್ತಿದ ಚಂದ್ರಶಿಲೆಯಿದೆ. ಸುಕನಾಶಿಯ ಮುಂದಿನ ಭಾಗದಲ್ಲಿದ್ದ ಎರಡು ತೆಳುವಾದ ಕಂಬಗಳ ಮೇಲೆ ಒಂದು ಸುಂದರವಾದ ತೊಲೆಯಿದ್ದು ಇದು ೮ ಅಡಿ ಉದ್ದ ಮತ್ತು ೩–೩೧/೨ ಅಡಿ ದಪ್ಪವಾಗಿದೆ. ಇದನ್ನು ಮಕರ ತೋರಣವೆಂದು ಕರೆಯುತ್ತಾರೆ. ಇದರ ಎರಡೂ ತುದಿಗಳಲ್ಲಿ ಮಕರಗಳನ್ನು ಆಕರ್ಷಕವಾಗಿ ಕೆತ್ತಿದ ತಮ್ಮ ಬಾಲಗಳನ್ನು ಎತ್ತಿ ಹಿಡಿದಿದೆ. ಈ ಮಕರತೋರಣದ ಕೆಳಗೆ ಬ್ರಹ್ಮ ಶಿವ ವಿಷ್ಣುಗಳಿದ್ದಾರೆ. ಗುಡಿಯ ಮಧ್ಯಭಾಗದಲ್ಲಿ ಮಂಟಪವಿದ್ದು ಅದರ ಛತ್ತನ್ನು ನಾಲ್ಕೂ ಕಂಬಗಳು ಎತ್ತಿ ಹಿಡಿದಿವೆ. ಈ ಮಂಟಪದಲ್ಲಿ ಬ್ರಹ್ಮ ಮೊದಲಾದ ಮೂರು ವಿಗ್ರಹಗಳಿವೆ.

ಈ ದೇವಾಲಯದ ಗರ್ಭಗುಡಿಯ ಮತ್ತು ಮಂಟಪದ ನಕ್ಷತ್ರಾಕಾರದಲ್ಲಿದ್ದ ಗೋಡೆಗಳು ಹಾಗೆಯೆ ಮೇಲೆ ಹೋಗಿವೆ. ಅವುಗಳ ಮೇಲ್ಭಾಗದಲ್ಲಿ ಸುಮಾರು ೮೦ ಕ್ಕೂ ಮೇಲ್ಪಟ್ಟು ಉಬ್ಬು ಮೂರ್ತಿಗಳನ್ನು ಕಟೆದಿದ್ದಾರೆ. ಶಿಖರದ ಭಾಗವು ನಕ್ಷತ್ರಾಕಾರದ ಗೋಡೆಯ ಮೇಲೆ ಅಲ್ಲಲ್ಲಿ ಅಷ್ಟಷ್ಟೇ ದುಂಡಗಾಗುತ್ತ ಕಳಸದವರೆಗೆ ಹೋಗಿದೆ. ಅದು ಕೊನೆಗೆ ಕೊರೆದ ಕೋನವನ್ನು ಹೋಲುತ್ತದೆ. ಇಲ್ಲಿ ಅಡ್ಡ ಪಟ್ಟಿಗಳು ಮಾತ್ರ ಕಾಣುತ್ತವೆ. ಈ ಗುಡಿಯ ಕಳಸ ಮಾತ್ರ ಉಳಿದಿಲ್ಲ. ಅಧಿಷ್ಠಾನದ ಪಟ್ಟಿಕೆಗಳನ್ನು ಆಳವಾಗಿ ಕೆತ್ತಿದ್ದು ಅದರಿಂದ ಬೆಳಕು ಮತ್ತು ಕತ್ತಲೆಯ ಪಟ್ಟಿಗಳು ನಯನ ಮನೋಹರವಾಗಿ ತೋರುವವು. ಪ್ರತಿ ಕೋನಿ (angle) ನಲ್ಲಿ ಒಂದೊಂದು ಅಲಂಕಾರವಿದ್ದು ಅದರ ಮುಂದಿನ ಗೋಡೆಯು ದಿಕ್ಕೂ ಬದಲಿಸುತ್ತದೆ. ಈ ಅಧಿಷ್ಠಾನದ ಪಟ್ಟಿಕೆಯ ಮೇಲೆ ಆನೆ–ಸಿಂಹಗಳ ಗುಂಪು ಕಾದಾಡುವಿಕೆ, ಆಹಾರ ಸೇವನೆ ಮಾಡುತ್ತಿರುವಂತೆ ಕೆತ್ತಲಾಗಿದೆ. ಈ ಹೊರಗೋಡೆಗಳ ಮೇಲೆ ತೆಳುವಾದ ಎರಡು ಅರ್ಧ ಕಂಬಗಳಿದ್ದು ಅವುಗಳ ಮೇಲೆ ಸಣ್ಣಸಣ್ಣ ಶಿಖರಗಳಿವೆ. ಈ ಶಿಖರಗಳ ಮೇಲ್ಭಾಗದಲ್ಲಿ ಚಿಕ್ಕ ಚಿಕ್ಕ ಗೊಂಬೆಗಳ ನರ್ತನ, ವಾದ್ಯ ಬಾರಿಸುವಿಕೆಯನ್ನು ಕೆತ್ತಲಾಗಿದೆ. ಈ ಗುಡಿಯ



ದಕ್ಷಿಣದ್ವಾರವು ಉತ್ಕೃಷ್ಟವಾದ ಸುಳುವುಗಳಿಂದ ಅಲಂಕೃತಗೊಂಡಿದೆ. ಇದಕ್ಕೆ ಹೊಂದಿದ್ದ ಮುಖಮಂಟಪದ ಎರಡು ಕಂಬಗಳು ನಕ್ಷತ್ರಾಕಾರದಲ್ಲಿದ್ದು ಅವುಗಳ ಮೇಲೆ ಉದ್ದವಾದ ಪಟ್ಟಿಗಳು ಬುಡದಿಂದ ಮೇಲೆ ಹೋಗಿವೆ.

ಈ ಪ್ರಕಾರ ತಳಪಾಯವನ್ನು ಹೊಂದಿದ ಗುಡಿಗಳು ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿ ಕಂಡುಬರುತ್ತಿದ್ದ, ಇವುಗಳಲ್ಲಿ ಸೂಡಿಯ ಸೋಮೇಶ್ವರನ ಗುಡಿ ಹೆಚ್ಚು ಪ್ರಾಚೀನದ್ದೆಂದು ಕಂಡುಬರುವುದು. ಇದೇ ರೀತಿಯ ಗುಡಿಗಳನ್ನು ಲಕ್ಕುಂಡಿ, ಕೋಣ್ಣೂರ, ನರಗುಂದ, ಶೃಂಗೇರಿಗಳಲ್ಲಿ ಕಾಣಬಹುದಾಗಿದೆ. ಗುಜರಾತ ಮತ್ತು ಮಹಾರಾಷ್ಟ್ರಗಳಲ್ಲಿ ಕೂಡ ಇಂಥ ನಕ್ಷತ್ರಾಕಾರದ ತಳಪಾಯದ ಗುಡಿಗಳು ನೋಡಲು ಸಿಗುತ್ತವೆ.

ಈ ದೊಡ್ಡ ಬಸಪ್ಪನ ಗುಡಿಯ ಆ ಬದಿಗೆ (ನಡುವೆ ಗದುಗಿಗೆ ಹೋಗುವ ರಸ್ತೆ ಇದೆ) ಸೋಮೇಶ್ವರನ ಗುಡಿ ಇದ್ದು ಅದರ ಮೇಲ್ಛಾವಣಿಯ ಆಕಾರದಿಂದಾದ ಇದನ್ನು ಡಬ್ಬುಗಲ್ಲು ಗುಡಿ ಎಂದು ಕರೆಯುವ ರೂಢಿ ಇದೆ. ಈ ಗುಡಿ ತೀರ ಸಾದಾ ಇದ್ದು ಇದರ ಮಂಟಪದ ಮಂಜೂರು ಮೂರು ದಿಕ್ಕುಗಳಲ್ಲಿ ಮುಂಚಾಚಿದೆ. ಈ ಗುಡಿಯನ್ನು ಮಂಟಪ, ಅರ್ಧ ಮಂಟಪ (ಸುಕನಾಶಿ) ಹಾಗೂ ಗರ್ಭಗುಡಿ ಎಂದು ಮೂರು ಭಾಗಗಳನ್ನಾಗಿ ವಿಂಗಡಿಸಬಹುದು. ಅರ್ಧಮಂಟಪ (ಸುಕನಾಶಿ) ಮುಂಭಾಗದಲ್ಲಿ ಜಾಲಂದ್ರದ ಗೋಡೆ ಮತ್ತು ಪ್ರವೇಶ ದ್ವಾರವಿದ್ದು ಅವು ಸುಕನಾಶಿಯನ್ನು ಮಂಟಪದಿಂದ ಬೇರ್ಪಡಿಸುತ್ತವೆ. ಗರ್ಭಗುಡಿಯಲ್ಲಿ ಶಿವಲಿಂಗ ಅರ್ಧಮಂಟಪದಲ್ಲಿ ನಂದಿ ಇರುವದು.

ಈ ಮೇಲೆ ಹೇಳಲಾದ ದೊಡ್ಡ ಬಸಪ್ಪನ ಗುಡಿಯನ್ನು ಅಜ್ಜಮೇಶ್ವರ ಭವನ ಎಂಬ ಹೆಸರಿನಲ್ಲಿ ಪ್ರಖ್ಯಾತಿಯನ್ನು ಹೊಂದಿತ್ತು. ಇದನ್ನು ಕಟ್ಟಿಸಿದ ಅಜ್ಜಿಮಯ್ಯ ಮಹಾಶಿವಭಕ್ತನಾಗಿದ್ದು ಸದಾ 'ನಮಃಶಿವಾಯ' ಎಂಬ ಪಂಚಾಕ್ಷರಿ ಮಂತ್ರವನ್ನೇ ಜಪಿಸುತ್ತಿದ್ದನಂತೆ. ತಾನು ಗಳಿಸಿದ ಹಣ ಸದ್ವಿನಿಯೋಗ ಗೊಳ್ಳಬೇಕೆಂದು ಹಾರೈಸಿ ಈ ಧರ್ಮವೊಳಲಿನಲ್ಲಿ ಕುಲಪರ್ವತವನ್ನೇ ತಂದು ಒಂದು ಮಾಟಕ್ಕೆ ಬರುವಂತೆ ಕಡೆಯಲಾಗಿತ್ತೆಂದೂ, ಅದು ಆ ಧರ್ಮದ ಪಟ್ಟಣಕ್ಕೆ ಕಲಶದಂತೆ ಶೋಭಿಸುತ್ತಿತ್ತೆಂದೂ ಶಾಸನ ಕವಿ ಈ ದೊಡ್ಡಬಸಪ್ಪನ ಗುಡಿಯನ್ನು ಬಣ್ಣಿಸಿದ್ದಾನೆ.

**"ಕುಳ ಪರ್ವತಮಂ ತಂದದ ।**
**ನಳವಿಗೆದರೆ ಕಡೆದು ಪಡೆದರೆನಿಸಿಯುಮಂತಾ ॥**
**ಪೊಳಲಿಂಗೆ ಕಳಶದಂತಿರೆ ।**
**ವಿಳಾಸಮಂ ತಾಳ್ದಿತ್ತಜ್ಜಮೇಶ್ವರ ಭವನಂ ॥"**

ಈ ಡಂಬಳದ ಪಶ್ಚಿಮ ಭಾಗದಲ್ಲಿ ಹಳೆಯ ಕೋಟೆಯೊಂದಿದ್ದು ಅದು ಸಂಪೂರ್ಣವಾಗಿ ಶಿಥಿಲಾವಸ್ಥೆಯಲ್ಲಿದೆ. ಈ ಕೋಟೆಯೊಳಗೆ ಜೈನ ಬಸದಿ ಹಾಗೂ ಗಣಪತಿ ಗುಡಿಗಳಿವೆ. ಗಣಪತಿ ಗುಡಿಯಲ್ಲಿನ ಮೂರ್ತಿ ದೊಡ್ಡದಿದೆ. ಜೈನಬಸದಿಯ ಎಡಗಡೆಗಿದ್ದ ಶಿಲಾಫಲಕದ ಮೇಲೆ ಕ್ರಿ.ಶ. ೧೯೫ ರಲ್ಲಿ ರಚಿತವಾದ ಶಾಸನವೊಂದಿದ್ದು ಅದರ ಮೇಲ್ಭಾಗದಲ್ಲಿ ಕೆಲವು ಚಿಹ್ನೆಗಳಿವೆ. ಅವುಗಳ ಮಧ್ಯದಲ್ಲಿ ತಾರಾದೇವಿಯನ್ನು ಕಟೆದಿದ್ದು ಅವಳು ಬಲಗೈಯಲ್ಲಿ ಯಾವುದೋ ಒಂದು ವಸ್ತುವನ್ನು, ಎಡಗೈಯಲ್ಲಿ ಅರಳುತ್ತಿರುವ ಕಮಲವನ್ನು ಹಿಡಿದು ಕುಳಿತಿದ್ದಾಳೆ. ಅವಳ ಬಲಗಡೆಗೆ ಕರು–ಆಕಳುಗಳಿದ್ದು ಅವುಗಳ ಮೇಲೆ ಸೂರ್ಯನನ್ನು ಕೆತ್ತಲಾಗಿದೆ. ಅವುಗಳ ಎಡಗಡೆಗೆ ನಿಂತವನು ತಾರಾದೇವಿಗೆ ನಮಸ್ಕರಿಸುತ್ತಿದ್ದು ಬಲಗೈಯಲ್ಲಿರುವ ಅಷ್ಟದಳ ಕಮಲ ದೇವಿಗೆ ಸಮರ್ಪಿಸುವನೇನೋ ಎಂಬಂತೆ ತೋರುವುದು. ಹಿಂದೆ ಉರಿಯುತ್ತಿರುವ ಸಮೆಗಳಿದ್ದು ಮೇಲೆ ಚಂದ್ರನನ್ನು ಕೆತ್ತಲಾಗಿದೆ.

ಇದರ ಸಮೀಪದ ತೋಟದಲ್ಲಿ ಜಪದ ಬಾವಿಯಿದ್ದು ಬಹುಶಃ ಬೌದ್ಧ ಸನ್ಯಾಸಿಗಳು ಈ ಬಾವಿಯಲ್ಲಿ ಸ್ನಾನ ಮಾಡಿ ಜಪಕ್ಕೆ ಕೂಡುತ್ತಿದ್ದರೆಂದು ಕಂಡುಬರುತ್ತದೆ. ಇಲ್ಲಿ ನೆಲೆಗೊಂಡಿದ್ದ ಬೌದ್ಧ ಸನ್ಯಾಸಿಗಳ ದರ್ಶನವನ್ನು ಪಡೆಯಲು ಸಾಮ್ರಾಟ ಅಶೋಕನು ಬರುತ್ತಿದ್ದನೆಂದು ಹೇಳಲಾಗುತ್ತದೆ. ಈಗ ಈ ಜಪದ ಬಾವಿ ಮುಳ್ಳು ಕಂಟಿಗಳಿಂದ ಆವರಿಸಿಕೊಂಡಿದ್ದು ಬಾವಿಯ ಸುತ್ತಲಿರುವ ಜಪದ ಕೋಣೆಗಳೆಲ್ಲ ಜೀರ್ಣಾವಸ್ಥೆಯಲ್ಲಿವೆ. ಇದರ ಹಿಂದುಗಡೆ ಅನತಿ ದೂರದಲ್ಲಿ ೧೨ನೆಯ ಶತಮಾನದಲ್ಲಿ ಗೋಣ ಸಮುದ್ರವೆಂದು ಕರೆಯಲ್ಪಟ್ಟ ಡಂಬಳದ ದೊಡ್ಡ ಕೆರೆಯಿದೆ. ವಿಕ್ಟೋರಿಯಾ ರಾಣಿ ಕ್ರಿ.ಶ. ೧೮೭೬–೭೭ ರಲ್ಲಿ ಈ ಕೆರೆಯನ್ನು ದುರಸ್ತಿ ಮಾಡಿಸಿ ಅದಕ್ಕೊಂದು ಹೊಸ ನಿರ್ಮಾಣವನ್ನು ೭೭೪ ಜನರಿಂದ ೧೪ ತಿಂಗಳ ಪರ್ಯಂತ ಕಾಮಗಾರಿ ಮೂಲಕ ಮಾಡಿಸಿದ್ದಾಗಿ ತಿಳಿದು ಬರುತ್ತದೆ. ಒಂದೆಡೆ ಕೋಟೆ ಪಕ್ಕದಲ್ಲಿರುವ ಕೆರೆ ಎರಡನ್ನೂ ಏಕಕಾಲದಲ್ಲಿ ವೀಕ್ಷಿಸಬಹುದಾಗಿದೆ. ಬಹುಶಃ ಕಾಲಾನಂತರದಲ್ಲಿ ಹೂಳಿಹೋದ ಕೆರೆಯ ಪುನಃ ನಿರ್ಮಾಣವನ್ನು ಈ ರಾಣಿ ಕೈಗೊಂಡಿರಬೇಕು. ಜಲಾನಯನ ಪ್ರದೇಶ ೪೪೫ ಎಕರೆ, ಕೆರೆಯ ಉದ್ದ ೫೭೭೫ ಅಡಿ ಕೋಡಿಯ ಉದ್ದ ೩೦೦ ಅಡಿ, ನೀರಾವರಿ ಕ್ಷೇತ್ರ ೨೯೦೦ ಎಕರೆ, ಕಾಲುವೆ ಉದ್ದ ಐದು ಕಿ.ಮೀ. ಗಳಿರುವುದಾಗಿ ವಿವರಗಳಿವೆ.



## ೬. ಸ್ವಾತಂತ್ರ್ಯ ಹೋರಾಟದಲ್ಲಿ ಮುಂಡರಗಿ :

ರಾಜಕೀಯ ಚದುರಂಗದಾಟದಲ್ಲಿ ಈ ಮುಂಡರಗಿ ತಾಲೂಕು ಸಾಕಷ್ಟು ಏಳು–ಬೀಳುಗಳನ್ನು ಕಂಡಿದೆ. ರಾಷ್ಟ್ರಕೂಟ ಅಮೋಘವರ್ಷ (ಕ್ರಿ.ಶ. ೮೬೫) ಅಕಾಲವರ್ಷ (೨ನೆಯ ಕೃಷ್ಣ), ಕಲ್ಯಾಣ ಚಾಲುಕ್ಯ ವಂಶದ ೧ನೆಯ ಜಗದೇಕಮಲ್ಲ (ಕ್ರಿ.ಶ. ೧೦೧೨), ೧ನೆಯ ಸೋಮೇಶ್ವರ (ಕ್ರಿ.ಶ. ೧೦೫೦), ಆರನೆಯ ವಿಕ್ರಮಾದಿತ್ಯ, ೪ನೆಯ ಸೋಮೇಶ್ವರ, ಹೊಯ್ಸಳ ೨ನೆಯ ಬಲ್ಲಾಳ (ಕ್ರಿ.ಶ. ೧೧೯೬), ಸೇವುಣ ವಂಶದ ೨ನೆಯ ಸಿಂಘಣ, ರಾಮಚಂದ್ರ (ಕ್ರಿ.ಶ. ೧೨೯೧), ವಿಜಯನಗರ ವಿಜಾಪೂರದ ಆದಿಲ್‌ಶಾಹಿ, ಸವಣೂರು ನವಾಬ ಅನೇಕ ಸಂಸ್ಥಾನಿಕರು, ದೇಸಾಯಿ, ದೇಶಪಾಂಡೆ ಹಾಗೂ ಬ್ರಿಟಿಷ್ ಸಾಮ್ರಾಜ್ಯದ ಆಡಳಿತದಲ್ಲಿ ಮುಂಡರಗಿ ತಾಲೂಕು ಬಾಳಿ ಬೆಳಗಿದ್ದನ್ನು ಬೆಳಗಿ ಬೀಳು ಬಿದ್ದುದನ್ನು ಇತಿಹಾಸ ಹೇಳುತ್ತದೆ.

೨೦ನೆಯ ಶತಮಾನದಲ್ಲಿ ಪ್ರಾರಂಭವಾದ ಸ್ವಾತಂತ್ರ್ಯದ ಆಂದೋಲನದಲ್ಲಿ ಈ ತಾಲೂಕು ಮತ್ತೆ ಪ್ರಜ್ವಲಿಸಿದುದನ್ನು ಕಾಣುತ್ತೇವೆ. ೧೯೩೦–೩೨ ರಲ್ಲಿ ಜರುಗಿದ ಸ್ವದೇಶಿ ಆಂದೋಲನದಲ್ಲಿ ಮುಂಡರಗಿ ತಾಲೂಕಿನವರೇ ಆದ ಡಂಬಳದ ಅಣ್ಣಾಚಾರ್ಯ ಸ್ವಾಮ್ಯಚಾರ್ಯ ಗುಡಿ ಹಾಗೂ ಯಲ್ಲಪ್ಪ ಶೇಷಪ್ಪ ಫತ್ತೇಪೂರ, ಕಾರವಾರದಲ್ಲಿ ನಡೆದ ಅರಣ್ಯ ಚಳುವಳಿಯಲ್ಲಿ ಭಾಗವಹಿಸಿ ಜೈಲುಶಿಕ್ಷೆ ಅನುಭವಿಸಿದರು. ಡಾ. ಬಿ.ಜಿ. ಹುಲಗಿ ಅಸಹಕಾರ ಆಂದೋಲನದಲ್ಲಿ ಪಾಲ್ಗೊಂಡು ಈಚಲುಗಿಡ ಕಡೆದು ಪೋಲೀಸರ ದೌರ್ಜನ್ಯಕ್ಕೆ ಒಳಗಾದರು. ಕ್ರಿ.ಶ. ೧೯೪೦ ರಲ್ಲಿ ಮಹಾತ್ಮಾಜೀಯವರು ವೈಯಕ್ತಿಕವಾಗಿ ಸತ್ಯಾಗ್ರಹದಲ್ಲಿ

ಡಾ. ಬಿ.ಜಿ. ಹುಲಗಿ, ಶಂಕ್ರಪ್ಪ ಗುಡ್ಡದ, ಇಸ್ಮಾಯಿಲ್ ಸಾಹೇಬ ಕಂಪ್ಲಿಮನಿ, ಕಾಳಪ್ಪ ಹರ್ಲಾಪುರ, ಹುಸೇನಸಾಹೇಬ ಕಲ್ಲೂರ, ರಾಮಾಚಾರ್ಯ ಕೊರ್ಲಹಳ್ಳಿ ಪಾಲ್ಗೊಂಡು ನಾಲ್ಕು ತಿಂಗಳಿಂದ ಒಂದು ವರ್ಷದವರೆಗೆ ಶಿಕ್ಷೆ ಅನುಭವಿಸಿದರು.

ಕ್ರಿ.ಶ. ೧೯೪೨ ಆಗಸ್ಟ್ ೯ರ ಚಲೇಜಾವ್ ಚಳುವಳಿ ಇಡೀ ತಾಲೂಕನ್ನೇ ಆವರಿಸಿತು. ಮೇಲ್ಕಾಣಿಸಿದ ಸ್ವಾತಂತ್ರ್ಯ ಯೋಧರೊಂದಿಗೆ ವೀರಭದ್ರಯ್ಯ ಶೆಟ್ಟರ, ಜಂಬಣ್ಣ ಕವಲೂರ, ಹನುಮಂತಪ್ಪ ಈಳಗೇರ, ಕಪ್ಪತಪ್ಪಾ ಬ್ಯಾಳಿ, ಅಡಿವೆಪ್ಪ ಕಿನ್ನಾಳ, ಹನುಮಂತಪ್ಪ ದಾಯಪುಲೆ, ಷಣ್ಮುಖಪ್ಪ ನಾಗನೂರು, ಮಹಾದೇವಪ್ಪ ಅಜಗೊಂಡ ಮೊದಲಾದವರು ಈ ಚಳುವಳಿಯಲ್ಲಿ ನುಗ್ಗಿದರು. ಬ್ರಿಟಿಷ್ ಸರಕಾರ ಈ ಸತ್ಯಾಗ್ರಹಿಗಳನ್ನು ಅಮಾನುಷವಾಗಿ ನಡೆಸಿಕೊಂಡಿತು. ಹಲವರು ಕಠಿಣ ಶಿಕ್ಷೆಗೂ ಗುರಿಯಾದರು. ಇಡೀ ಭಾರತದಾದ್ಯಂತ ನಡೆದ ಸ್ವಾತಂತ್ರ್ಯ ಜಾಗೃತಿಯ ಫಲವಾಗಿ ಕ್ರಿ.ಶ. ೧೯೪೭ ಆಗಸ್ಟ್ ೧೫ ರಂದು ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿತು. ಭಾರತ ದೇಶಕ್ಕೆ ಸ್ವಾತಂತ್ರ್ಯ ದೊರೆತರೂ, ಬ್ರಿಟಿಷರ ಕುಟೀಲ ನೀತಿಯ ಫಲವಾಗಿ ದೇಶೀಯ ಸಂಸ್ಥಾನಿಕರು ತಾವು ಸ್ವತಂತ್ರರೆಂದು ಎದ್ದು ಕುಳಿತರು.

ಹೀಗೆ ಭಾರತದ ಒಕ್ಕೂಟದ ಕರೆಯನ್ನು ಧಿಕ್ಕರಿಸಿದವರಲ್ಲಿ ಹೈದರಾಬಾದ ನಿಜಾಮನೂ ಒಬ್ಬ. ಈ ದಿಶೆಯಲ್ಲಿ ಹೈದರಾಬಾದ ವಿಮೋಚನಾ ಚಳುವಳಿ ಪ್ರಾರಂಭಗೊಂಡು ಮುಂಡರಗಿ ಮುಖ್ಯ ಶಿಬಿರಗಳಲ್ಲಿ ಒಂದಾಯಿತು. ಹೈದರಾಬಾದ ನಿಜಾಮನ ಪೊಲೀಸರನ್ನು ರಜಾಕಾರರನ್ನು ಎದುರಿಸುವಲ್ಲಿ ಮುಂಡರಗಿಯ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಈ ಮೊದಲೇ ಈ ಭಾಗದ ಸ್ವಾತಂತ್ರ್ಯ ಯೋಧರಾದ ಡಾ. ಸಿ.ಎಂ. ಚುರ್ಚಿಹಾಳಮಠ, ಷಣ್ಮುಖಪ್ಪ ನಾಗನೂರು, ಎಫ್.ಎಂ. ಹವಳದ, ಸೂಗೀರಪ್ಪ ಶೀರಿ, ಚನ್ನಬಸಯ್ಯ ಹಿರೇಮಠ, ಎಸ್.ಎಸ್. ಅಳವಂಡಿಮಠ, ಕಟ್ಟಿ ತಮ್ಮಣ್ಣಾಚಾರ್ಯ ಮೈಸೂರು ಚಲೋ ಸತ್ಯಾಗ್ರಹದಲ್ಲಿ ಭಾಗವಹಿಸಿ ಶಿಕ್ಷೆ ಅನುಭವಿಸಿ ಬಿಡುಗಡೆ ಆಗಿ ಬಂದಿದ್ದರು. ಮರಳಿ ಬರುವಷ್ಟರಲ್ಲಿ ಹೈದರಾಬಾದ ವಿಮೋಚನಾ ಚಳುವಳಿಯಲ್ಲಿ ಇವರೆಲ್ಲಾ ಧುಮುಕಿ ತಮ್ಮ ಶೌರ್ಯ ಸಾಹಸಗಳನ್ನು ಇಡೀ ಕರ್ನಾಟಕದ ಜನತೆಗೆ ಪರಿಚಯಿಸಿಕೊಟ್ಟರು. ರಜಾಕಾರರೊಂದಿಗೆ ಗಡಿಭಾಗಗಳಲ್ಲಿ ಗುಂಡಿನ ಚಕಮಕಿ



ನಡೆಯಿತು. ಮುಂಡರಗಿಯವರಾದ ಘಂಟೋಸಾ ಮಗಜಿಯವರಿಗೆ ಗುಂಡು ಬಡಿದರೂ ಉಪಚಾರದಿಂದ ಪಾರಾದರು. ಈ ಒಂದು ವಿಮೋಚನಾ ಚಳುವಳಿಯಲ್ಲಿ ಮುಂಡರಗಿ ತಾಲೂಕಿನವರೇ ಡಾ॥ ಸಿ.ಎಂ. ಚುರ್ಚಿಹಾಳಮಠ, ಭರಮಪ್ಪ ಉಳ್ಳಾಗಡ್ಡಿ, ಆರ್.ಎಂ. ದಫ್ತರದಾರ, ಡಾ॥ ಎಸ್.ಕೆ. ನರೇಗಲ್ಲಮಠ, ಸೀನಪ್ಪ ಅಪರಂಜಿ, ಚೆನ್ನಪ್ಪ ಬೆಲ್ಲದ, ಮಾನಪ್ಪ ಕಮ್ಮಾರ, ನಬಿಸಾಬ, ಬಾವಜಿ, ಗೂಳಪ್ಪ ಹೂಗಾರ, ಲಾಲಸಿಂಗಪ್ಪ ಲಮಾಣಿ ಇನ್ನೂ ನೂರಾರು ಸ್ವಾತಂತ್ರ್ಯ ಯೋಧರು ಶಿಬಿರಗಳಲ್ಲಿದ್ದುಕೊಂಡು ಗೃಹರಕ್ಷಕದಳ, ಗ್ರಾಮ ರಕ್ಷಕದಳದವರಾಗಿ ಸೇವೆ ಸಲ್ಲಿಸಿದ್ದು, ಇತಿಹಾಸ ಪುಟಗಳಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವಂತಹುದಾಗಿದೆ.

ಕರ್ನಾಟಕ ಏಕೀಕರಣದಲ್ಲಿ ಕೂಡ ಮುಂಡರಗಿ ತಾಲೂಕಿನ ಪಾತ್ರ ಮಹತ್ವದ್ದಾಗಿದೆ. ಈ ಎಲ್ಲ ಹೋರಾಟಗಳಿಗೆ ಮುಂಡರಗಿ ತಾಲೂಕಿನ ಹಿರಿಯರಾಗಿದ್ದ ಸರ್ವಶ್ರೀ ಕೊಪ್ಪಳ ವೀರಭದ್ರಪ್ಪನವರು, ಶಿವಪ್ಪಣ್ಣಾ ಭೂಮರಡ್ಡಿ, ಮುದಕನಗೌಡ್ರ ಪಾಟೀಲ, ರಾಚೋಟೆಪ್ಪ ಕೊಪ್ಪಳ, ಗುರುರಾಜಗೌಡ್ರು, ಅಪರಂಜಿ ಮೊದಲಾದವರು ಸಹಾಯ ಸಹಕಾರಗಳನ್ನಿತ್ತು ತಮ್ಮ ಸ್ವಾತಂತ್ರ್ಯ ಪ್ರಿಯತೆಯನ್ನು ಮೆರೆಸಿದ್ದಾರೆ. ಈ ತಾಲೂಕಿನ ಪ್ರಮುಖ ಮಠಗಳಾದ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠ, ಡಂಬಳದ ಜಗದ್ಗುರು ತೋಂಟದಾರ್ಯ ಶಾಖಾ ಮಠಗಳು ಕೂಡಾ ಸ್ವಾತಂತ್ರ್ಯ ಯೋಧರಿಗೆ ಆಶ್ರಯವನ್ನಿತ್ತುದುದನ್ನು ಮರೆಯುವಂತಿಲ್ಲ.

## ೭. ಮಾಸವಾಡಿ –೧೪೦:

ಪ್ರಾಚೀನ ಕಾಲದಲ್ಲಿ ರಾಜಕೀಯ ಸ್ಥಿತ್ಯಂತರಗಳಿಗನುಗುಣವಾಗಿ, ಆಡಳಿತಕ್ಕೆ ತಕ್ಕಂತೆ ಹಲವಾರು ಪ್ರದೇಶಗಳು ವಿಭಜಿಸಲ್ಪಟ್ಟಿದ್ದವು. ಭೌಗೋಳಿಕವಾಗಿ ವಿಸ್ತಾರವಾಗಿದ್ದ ರಾಜ್ಯವನ್ನು ಆಳಿಕೆಯ ಸೌಕರ್ಯದ ದೃಷ್ಟಿಯಿಂದ ಮೂರು ಭಾಗಗಳಾಗಿ ವಿಂಗಡಿಸಿದ್ದರು. ೧) ಮಂಡಲ ೨) ನಾಡು ೩) ಊರು ರಾಜಧಾನಿಯ ಸುತ್ತಮುತ್ತಣ ಭಾಗವನ್ನು ರಾಜನೇ ನೇರವಾಗಿ ಆಳುತ್ತಿದ್ದು ಉಳಿದ ರಾಜ್ಯವನ್ನು ಮಂಡಲಗಳಾಗಿ ವಿಂಗಡಿಸಿ ಒಂದೊಂದು ಮಂಡಲಕ್ಕೆ ಮಂಡಲೇಶ್ವರರನ್ನೂ ನೇಮಿಸುತ್ತಿದ್ದನು. ಒಂದೊಂದು ಮಂಡಲವನ್ನು ಬೇರೆ ಬೇರೆ ನಾಡುಗಳಾಗಿ ವಿಂಗಡಿಸಿ ಆಯಾ ನಾಡಿಗೆ ತನ್ನ ಪ್ರತಿನಿಧಿಗಳನ್ನು ನೇಮಿಸುವ

ಪದ್ಧತಿ ಇತ್ತು. ತಮಿಳನಾಡಿನಲ್ಲಿಯೂ ಕೂಡ ಮಂಡಲಂ, ಕೊಟ್ಟಮ್ ಅಥವಾ ಒಳನಾಡು, ನಾಡು, ಊರು ಎಂದು ನಾಲ್ಕು ಭಾಗಗಳಾಗಿ ವಿಂಗಡಿಸಿರುವುದನ್ನು ಅನೇಕ ಗ್ರಂಥಗಳಿಂದ ತಿಳಿದು ಬರುತ್ತದೆ. ಇವು ಈಗಿನ ಪ್ರಾಂತ, ಜಿಲ್ಲೆ, ತಾಲೂಕು, ಊರುಗಳಿಗೆ ಸಮಾನವಾಗಿದ್ದವೆಂದು ಹೇಳಬಹುದು.

ಧಾರವಾಡ ಜಿಲ್ಲೆಯು ಪ್ರಾಚೀನಕಾಲದಲ್ಲಿ ಬೆಳ್ವಲ–೩೦೦, ಪುಲಿಗೆರೆ–೩೦೦, ಕಿಸುಕಾಡು–೭೦, ಮಾಸೇವಾಡಿ–೧೪೦, ಬನವಾಸಿ–೧೨೦೦೦, ಚೆಂಚಲಿ–೫೦, ಕುಕನೂರ–೩೦, ಮುಳಗುಂದ–೧೨, ನರೆಯಂಗಲ್–೧೨, ಬೆಳ್ವಣಿಕೆ–೧೨, ಹಲಸಿಗೆ, ಸಾಂತಲಿಗೆ, ಪಾನುಂಗಲ್ ಮೊದಲಾದ ಭಾಗಗಳಲ್ಲಿ ಸೇರಿದ್ದಿತು. ಇಂದಿನ ನರಗುಂದ, ನವಲಗುಂದ ಮತ್ತು ಗದಗ ತಾಲೂಕಿನ ಕೆಲವು ಭಾಗಗಳು ಬೆಳವೊಲ ನಾಡಿನಲ್ಲಿ, ರೋಣ ತಾಲೂಕಿನ ಪೂರ್ವ ಮತ್ತು ಉತ್ತರ ಭಾಗಗಳು ಕಿಸುಕಾಡಿನಲ್ಲಿ ಲಕ್ಷ್ಮೇಶ್ವರದಿಂದ ಉತ್ತರಕ್ಕೆ ಸೂರಟೂರ ಸುತ್ತಮುತ್ತಲಿನ ಪ್ರದೇಶಗಳು ಪುಲಿಗೆರೆಯ ನಾಡಿನಲ್ಲಿ, ಮುಂಡರಗಿ ತಾಲೂಕು, ಗದಗ ತಾಲೂಕಿನ ಲಕ್ಕುಂಡಿ ಅದರ ಸುತ್ತಮುತ್ತಲಿನ ಪ್ರದೇಶಗಳು ಮಾಸೇವಾಡಿ ನಾಡಿನಲ್ಲಿಯೂ, ಹಾವೇರಿ, ಕರ್ಜಗಿ ಭಾಗದ ಪ್ರದೇಶಗಳು ಬನವಾಸಿ ದೇಶದ ಬಸವೂರ ವಿಭಾಗದಲ್ಲಿ ಬರುತ್ತಿದ್ದವೆಂದು ಪ್ರಾಚೀನ ಕಾಲದ ಐತಿಹಾಸದಿಂದ ತಿಳಿದುಬರುತ್ತದೆ.

ಇಂದಿನ ಮುಂಡರಗಿ ತಾಲೂಕು ಗದಗ ತಾಲೂಕಿನ ಲಕ್ಕುಂಡಿ ಮೊದಲಾದ ಭಾಗಗಳು ಪ್ರಾಚೀನ ಕಾಲದಲ್ಲಿ ಮಾಸವಾಡಿ–೧೪೦ರಲ್ಲಿ ಅಂತರ್ಗತವಾಗಿದ್ದವು. ಈ ಮಾಸವಾಡಿ–೧೪೦ರ ಬಗೆಗೆ ಡಂಬಳದ ಶಾಸನವೊಂದು ತಿಳಿಯಪಡಿಸುತ್ತದೆ. ಇದರ ಕಾಲ ೧೨ನೆಯ ಶತಮಾನ. "It described Masavadi Nadu which is stated to have been situated on the northern bank of the river Dakshina Ganga i.e. Tungabhadra in Kuntala Vishaya"

**"ಶ್ರೀ ಕುಂತಳ ವಿಷಯದ ದಕ್ಷಿಣ ಗಂಗಾ ನದಿಯೋತ್ತರ**
**ತೀರಂ ಬೀಡಿದೊರ್ಪ್ಪುತ್ತಿರ್ಪ ಮಾಸವಾಡಿ ನಾಡದಂ..."**



ಇನ್ನೋರ್ವ ಶಾಸನ ಕವಿ ಈ ಮಾಸವಾಡಿ ನಾಡನ್ನು ಬಹು ಸುಂದರವಾಗಿ ಬಣ್ಣಿಸಿದ್ದಾನೆ.

**"ಶ್ರೀ ಮತ್ಕುಂತಳ ಭೂಮಿ ಕಾಮಿನಿಯ**
**ವಕ್ತ್ರಾದರ್ಶಮಂ ಮೋತ್ತು**
**ಸದ್ದಾಮಂ ಶೋಭೆಗೆ ಮಾಸವಾಡಿಯಸುಗುಂ**
**ನಾಡದಂತದಂ..."**

ಮೇಲಿನ ಎರಡು ಶಾಸನಗಳ ಮೇರೆಗೆ ಮಾಸವಾಡಿ ನಾಡು ಕುಂತಲ ವಿಷಯದಲ್ಲಿತ್ತಲ್ಲದೇ ದಕ್ಷಿಣಗಂಗೆಯೆಂದು ಪ್ರಸಿದ್ಧವಾಗಿದ್ದ ತುಂಗಭದ್ರೆಯ ಉತ್ತರಕ್ಕಿರುವುದು ಸ್ಪಷ್ಟವಾಗಿ ತಿಳಿದುಬರುತ್ತದೆ.

**"ಬೆಳೆಸಲ್ಲದಲ್ಲರಿಸಿನ ಮೆಣಸು ಸರಾಜಾ**
**ನವಿಕ್ಷು ವೃಕ್ಷಮವೆಲ್ಲಂ ಹಲಸೀಳೆ ಮಾಮರ..."**

ಇಂಥ ಮಣ್ಣಿನಲ್ಲಿ ಹುಟ್ಟಿ ಬೆಳೆದ ಮಕ್ಕಳೇನು ಸಾಮಾನ್ಯರೇ!

**"ಸತುಕುಲರ್ ಸಪುಣ್ಯ ಸ್ವರೂಪಿಗಳು**
**.....ನರರೆಲ್ಲರಂ ಅಲ್ಲಿ.....**
**ಪ್ರಿಯದಿಂ ಚಕ್ರಿಯ ಮೆಚ್ಚಿ ವಿಕ್ರಮದ ಪೆತ್ತಂ**
**ರೂಢಿಯಂ ಮಾಸವಾಡಿಯ.......**

ರಾಷ್ಟ್ರಕೂಟರ ಚಕ್ರವರ್ತಿ ಅಮೋಘವರ್ಷ ನೃಪತುಂಗ, ಎರಡನೆಯ ಕೃಷ್ಣರು ರಾಜ್ಯವಾಳುತ್ತಿದ್ದಾಗ ಮಾಸೇವಾಡಿ–೧೪೦ ಎಂಬುದು ಭೌಗೋಲಿಕ ವಿಭಾಗವಾಗಿದ್ದು ಅದರಲ್ಲಿ ೧೪೦ ಗ್ರಾಮಗಳು ಸಮಾವೇಶಗೊಂಡಿದ್ದುವಲ್ಲದೆ ಪುಲಿಗೆರೆ–೩೦೦ರ ಕೆಲ ಪ್ರದೇಶಗಳು ಈ ನಾಡಿನಲ್ಲಿ ಅಂತರ್ಗತವಾಗಿದ್ದು, ಪೂರ್ವಕ್ಕೆ ಕೋಗಳಿ ತಾರಾ ನಾಡಿತ್ತೆಂಬುದನ್ನು ಶಾಸನವೊಂದು ದಾಖಲಿಸಿದೆ. ಹೀಗೆ ಮಾಸವಾಡಿ–೧೪೦ ನೆಗಳ್ತೆವೆಡೆದಿದ್ದು ಅದರಲ್ಲಿದ್ದ ಇಂದಿನ ಮುಂಡರಗಿ ತಾಲೂಕು ಹಾಗೂ ಅದರ ಸುತ್ತಮುತ್ತಲಿನ ನಾಡುಗಳಾದ ಕೊಪ್ಪಳ, ಗದಗ, ಶಿರಹಟ್ಟಿ, ರೋಣ, ಲಕ್ಷ್ಮೇಶ್ವರ, ಯಲಬುರ್ಗಾ ಮೊದಲಾದವುಗಳು ಪ್ರಾಚೀನ ಕಾಲದಿಂದಲೂ ತಮ್ಮ ಹಿರಿಮೆ ಗರಿಮೆಗಳನ್ನು ಉಳಿಸಿಕೊಂಡು ಬಂದುದಲ್ಲದೆ

ಒಂದಿಲ್ಲೊಂದು ರೀತಿಯಿಂದ ಮುಂಡರಗಿ ಅರ್ಥಾತ್ ಮುಂಡಗಿರಿ ನಾಡಿಗೆ ಸಂಬಂಧಪಟ್ಟುದ್ದರಿಂದ ಈ ಭಾಗದ ಇತಿಹಾಸ, ಸಂಸ್ಕೃತಿ, ಧಾರ್ಮಿಕ ಪರಂಪರೆ, ರಾಜಕೀಯ ಏಳು–ಬೀಳುಗಳನ್ನೆಲ್ಲ ಮನದಲ್ಲಿಟ್ಟುಕೊಂಡು ಇದು ಕೇವಲ ಮುಂಡರಗಿ ತಾಲೂಕಿನ ಚಿತ್ರಣವಾಗಿರದೆ, ಇಡೀ ಮೇಲ್ಕಾಣಿಸಿದ ಎಲ್ಲ ಭಾಗಗಳ ಅಂಶಗಳನ್ನೊಳಗೊಂಡ ಸಮಗ್ರ ಚಿತ್ರಣವಾದುದರಿಂದ ಈ ಭಾಗಕ್ಕೆ ಮಾಸೇವಾಡಿ – ೧೪೦ ಎಂದು ಕರೆಯಲಾಗಿದೆ. ಈ ಭಾಗದವರು ಇಲ್ಲಿದ್ದುಕೊಂಡು ಹೋರಾಟ ಮಾಡುವದರೊಂದಿಗೆ ನಾಡಿನ ಹೊರಭಾಗಗಳಿಗೆ ಹೋಗಿ ಹೋರಾಟ ಮಾಡಿದ್ದಾರೆ. ಹಾಗೆಯೇ ಬೇರೆ ಬೇರೆ ಭಾಗಗಳಿಂದ ಬಂದು ಮುಂಡರಗಿಯ ನಾಡಿನಲ್ಲಿ ಆಶ್ರಯ ಪಡೆದು ತಮ್ಮ ಭಾಗದ ಸ್ವಾತಂತ್ರ್ಯಕ್ಕಾಗಿ, ಧಾರ್ಮಿಕ ಉತ್ಥಾನಕ್ಕಾಗಿ, ರಾಜಕೀಯ ಕಾರಣಗಳಿಗಾಗಿ ಹೋರಾಟ ಮಾಡಿದ್ದೂ ಇದೆ.

## ೮. ಧೊಂಡಿಯಾ ವಾಘ:

'ಧೊಂಡಿಯಾ ವಾಘನು ದಾವಣಗೆರೆ ಜಿಲ್ಲೆಯ ಹೊನ್ನಾಳಿಯಲ್ಲಿ ಹುಟ್ಟಿದನು. ಮೂಲತಃ ಸೈನಿಕ ವೃತ್ತಿಯವನಾಗಿದ್ದ ಧೊಂಡಿಯಾ ವಾಘನು ಕೊಲ್ಲಾಪುರದ ಶಾಹು ರಾಜರು, ಪಟವರ್ಧನರು, ಗದಗ ಜಿಲ್ಲೆಯ ಲಕ್ಷ್ಮೇಶ್ವರದ ದೇಸಾಯಿಯವರಲ್ಲಿ ಸೈನಿಕನಾಗಿ ಕೆಲಸ ಮಾಡಿದ್ದನು. ನಂತರ ಹೈದರ್ ಮತ್ತು ಟಿಪ್ಪುವಿನ ಸೈನ್ಯದಲ್ಲಿ ಸೇರಿಕೊಂಡನು. ಆತನ ಸೈನಿಕ ಶಕ್ತಿಯನ್ನು ಅರಿತುಕೊಂಡಿದ್ದ ಟಿಪ್ಪು ಸೈನ್ಯದಲ್ಲಿ ಬಡ್ತಿಯನ್ನು ನೀಡಿದ್ದನು. ಧೊಂಡಿಯಾ ವಾಘನು ಮಹತ್ವಾಕಾಂಕ್ಷೆಯುಳ್ಳವನಾಗಿದ್ದನಲ್ಲದೇ ಸ್ವತಂತ್ರ ರಾಜನಾಗಲು ಇಷ್ಟಪಟ್ಟ ಕಾರಣಕ್ಕೆ ಟಿಪ್ಪು ಧೊಂಡಿಯಾನನ್ನು ಬಂಧಿಸಿ ಸೆರೆಮನೆಯಲ್ಲಿ ಇಟ್ಟಿದ್ದನು.

ನಾಲ್ಕನೇ ಮೈಸೂರು ಯುದ್ಧದಲ್ಲಿ (ಕ್ರಿ.ಶ. ೧೭೯೯) ವಿಜಯಿಗಳಾದ ಬ್ರಿಟಿಷರು ಸೆರೆಮನೆಯಲ್ಲಿ ಬಂದಿಸಲ್ಪಟ್ಟಿದ್ದ ಟಿಪ್ಪುವಿನ ಸರ್ದಾರರಲ್ಲಿ ಒಬ್ಬನಾಗಿದ್ದ ಧೊಂಡೋಜಿ ವಾಘನನ್ನು ಸೆರೆಮನೆಯಿಂದ ಬಂಧಮುಕ್ತಗೊಳಿಸಿದರು.

ಸ್ವತಂತ್ರ ಮನೋಭಾವದ ಧೊಂಡೋಜಿ ವಾಘನು ಬ್ರಿಟಿಷರ ವಿರುದ್ಧ ಹೋರಾಡಲು ಮಲೆನಾಡು ಪ್ರದೇಶದ ಐಗೂರಿನಲ್ಲಿ ನೆಲೆನಿಂತನು. ತಮಿಳುನಾಡು, ಕೇರಳ, ಕರ್ನಾಟಕ, ಮಹಾರಾಷ್ಟ್ರದ ಪಾಳೇಗಾರರ ಜೊತೆಗೆ ಪತ್ರ ವ್ಯವಹಾರ ನಡೆಸಿ ಬ್ರಿಟಿಷ್ ವಿರೋಧಿ ಒಕ್ಕೂಟ ರಚಿಸಿ ಆ ಮೂಲಕ ಯುದ್ಧ ಘೋಷಿಸಲು ತಯಾರಿ ನಡೆಸಿದ್ದನು. ಈ ಎಲ್ಲ ಬೆಳವಣಿಗೆಗಳ ಹಿನ್ನಲೆಯಲ್ಲಿ ಚದುರಿಹೋಗಿದ್ದ ಟಿಪ್ಪುವಿನ ಸೈನಿಕರು, ಸರ್ದಾರರು ಧೊಂಡೋಜಿ ವಾಘನೊಂದಿಗೆ ಕೈಜೋಡಿಸಿದರು. ಪ್ರಾರಂಭಿಕ ಹಂತದಲ್ಲಿ ೫೦೦೦ ಅಶ್ವ ದಳದ ಸೈನಿಕ ತುಕಡಿಯಾಗಿ ಮಾರ್ಪಟ್ಟ ಸೈನ್ಯವು ಶಿವಮೊಗ್ಗೆಯನ್ನು ಕೇಂದ್ರ ಸ್ಥಾನ ಮಾಡಿಕೊಂಡಿತು. ಧೊಂಡೋಜಿ ವಾಘನು ತನ್ನನ್ನು ತಾನು 'ಎರಡು ಜಗತ್ತಿನ ರಾಜನೆಂದು' ಸ್ವಯಂ ಘೋಷಿಸಿಕೊಂಡನು. ಬ್ರಿಟಿಷ್ ವಿರೋಧಿ ಹೋರಾಟ ಕಟ್ಟಲು ಕಾರ್ಯತಂತ್ರ ರೂಪಿಸಿ ಮೈಸೂರು ಭಾಗದಲ್ಲಿ ಬ್ರಿಟೀಷ್ ಆಡಳಿತವನ್ನು ದುರ್ಬಲಗೊಳಿಸಲು ತಯಾರು ಆದನು. ನಿಜಾಮ ರಾಜ್ಯದ ಕೋಟೆಯನ್ನು ವಶಪಡಿಸಿಕೊಂಡನು. ಬ್ರಿಟೀಷರ ಯುದ್ಧ ಸಲಕರಣೆಗಳ ಉತ್ಪಾದನಾ ಕೇಂದ್ರ ವಶಪಡಿಸಿಕೊಂಡು ಫಿರಂಗಿ ದಳವನ್ನು ಕಟ್ಟಿದನು.

ಪ್ರಾರಂಭಿಕ ಹಂತದಲ್ಲಿ ಚಿಕ್ಕ ಸೈನಿಕ ಶಕ್ತಿ ರೂಪದಲ್ಲಿದ್ದ ವಾಘನ ಸೈನ್ಯವು ಎರಡು ತಿಂಗಳ ಕಡಿಮೆ ಅವಧಿಯಲ್ಲಿ ದೈತ್ಯ ಸೈನಿಕ ಶಕ್ತಿಯಾಗಿ ರೂಪಾಂತರ ಹೊಂದಿತು. ಕ್ರಿ.ಶ. ೧೮೦೦ರ ಹೊತ್ತಿಗೆ ೧೦ ಸಾವಿರ ಅಶ್ವ ದಳ ಸವಾರರು, ೫ ಸಾವಿರ ಕಾಲ್ದಳದ ಸೈನಿಕರು ೮ ಬಂದೂಕುಗಳನ್ನು ಹೊಂದಿದ ಸೈನ್ಯ ಆಗಿತ್ತು. ಶಿವಮೊಗ್ಗ, ಚಿತ್ರದುರ್ಗ, ಬಳ್ಳಾರಿ ಪ್ರದೇಶದಲ್ಲಿ ೧ ವರ್ಷದ ಅವಧಿಯಲ್ಲಿ ಸೈನಿಕ ತಿರುಗಾಟ ನಡೆಸಲಾಗಿತ್ತು. ೭೦ ಸಾವಿರದಿಂದ ೮೦ ಸಾವಿರದಷ್ಟು ಜನ ಸೈನಿಕರು ಸಂಘಟಿತ ರೂಪದಲ್ಲಿ ಇದ್ದರು. ಕಡಪಾ, ಹೈದರಾಬಾದ್, ಔರಂಗಾಬಾದ್, ಸೈನ್ಯದಲ್ಲಿ ಕೆಲಸ ಕಳೆದುಕೊಂಡಿದ್ದ ಸೈನಿಕರು ಧೊಂಡೋಜಿ ವಾಘನ ಸೈನ್ಯದಲ್ಲಿ ಸೇರಿಕೊಳ್ಳತೊಡಗಿದರು.

ಧೊಂಡೋಜಿ ವಾಘನು ಕ್ರಿ.ಶ. ೧೭೬೬ ಜೂನ್ ತಿಂಗಳಲ್ಲಿ ಧಾರವಾಢ ಜಿಲ್ಲೆಯನ್ನು ಪ್ರವೇಶಿಸಿದನು. ಪೇಶ್ವೆಯವರ ಅಧೀನದಲ್ಲಿದ್ದ ಗದಗ, ಅಣ್ಣಿಗೇರಿ, ಧಾರವಾಡ, ನವಲಗುಂದ ಕೋಟೆಗಳನ್ನು ಗೆದ್ದು ಅಲ್ಲಿ ಆಡಳಿತ ನಡೆಸುತ್ತಿದ್ದ ದೇಸಾಯಿಯವರಿಗೆ ಆಡಳಿತವನ್ನು ಬಿಟ್ಟುಕೊಟ್ಟನು. ನಂತರ ಲಕ್ಷ್ಮೇಶ್ವರ ದೇಸಾಯಿಯವರ ಬಳಿಗೆ ಬಂದು ಅವರಿಂದ ಸೈನಿಕ ಸಹಾಯವನ್ನು ಪಡೆದನು.

ಈ ಎಲ್ಲ ಉಪಟಳದಿಂದ ಬೇಸತ್ತ ಬ್ರಿಟೀಷರು ಶ್ರೀರಂಗಪಟ್ಟಣದಿಂದ ಕರ್ನಲ್ ಅರ್ಥರ್ ವೆಲ್ಲೆಸ್ಲಿಯನ್ನು ಪುಣೆ ಮತ್ತು ಮೀರಜ್‌ನಿಂದ ಧೊಂಡೋಪಂತ್ ಘೋಖಲೆ ಹಾಗೂ ಪರಶುರಾಮ ಭಾವುನನ್ನು ಸೈನ್ಯದೊಂದಿಗೆ ವಾಘನನ್ನು ಸೋಲಿಸಲು ಕಳಿಸಿಕೊಟ್ಟರು. ಈ ನಡುವೆ ಧೊಂಡೋಜಿ ವಾಘನು ಕ್ರಿ.ಶ. ೧೮೦೦ ಏಪ್ರಿಲ್‌ನಲ್ಲಿ ಡಂಬಳದ ಕೋಟೆಯನ್ನು ಗೆದ್ದು ಶ್ರೀನಿವಾಸ ಬಹದ್ದೂರ ದೇಸಾಯಿಯವರಿಗೆ ಬಿಟ್ಟುಕೊಟ್ಟಿದ್ದನು.

ಕ್ರಿ.ಶ. ೧೮೦೦ ಜುಲೈನಲ್ಲಿ ಧಾರವಾಡ ಹತ್ತಿರ ಹಳ್ಯಾಳ ಸಮೀಪ ಧೊಂಡೋಜಿ ವಾಘ ಹಾಗೂ ಧೊಂಡೋಪಂತ್ ಘೋಖಲೆ, ಪರಶುರಾಮ ಭಾವುರ ನಡುವೆ ಯುದ್ಧ ನಡೆದು ಯುದ್ಧದಲ್ಲಿ ಮರಾಠಾ ಸರ್ದಾರರಾದ ಘೋಖಲೆ ಮತ್ತು ಭಾವು ಕೊಲ್ಲಲ್ಪಟ್ಟರು. ಆ ಯುದ್ಧವನ್ನು ಮುಗಿಸಿ ಕುಂದಗೋಳ ಮಾರ್ಗವಾಗಿ ಡಂಬಳ ಕೋಟೆಗೆ ವಾಘನು ಬಂದು ತಲುಪಿದನು. ಡಂಬಳ ಕೋಟೆಯ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ರಕ್ಷಕರಾಗಿದ್ದ ಶ್ರೀನಿವಾಸ ಬಹದ್ದೂರ ದೇಸಾಯಿಯವರು ವಾಘನನ್ನು ಆದರದಿಂದ ಬರಮಾಡಿಕೊಂಡು ಆದರಿಸಿದರು.

ಪೇಶ್ವೆಗಳ ಮರಾಠಾ ಸೈನ್ಯ ಮತ್ತು ಬ್ರಿಟೀಷರ ಜಂಟಿ ಸೈನ್ಯವು ಕರ್ನಲ್ ಸ್ಟೀವನ್‌ಸನ್ ಹಾಗೂ ಭಾಪು ಘೋಖಲೆ ನೇತೃತ್ವದಲ್ಲಿ ಡಂಬಳ ಕೋಟೆಗೆ ಮುತ್ತಿಗೆ ಹಾಕಿದರು. ಅಷ್ಟರಲ್ಲಿಯೇ ಡಂಬಳ ಕೋಟೆಯಿಂದ ವಾಘನು ತಪ್ಪಿಸಿಕೊಂಡಿದ್ದನು. ಡಂಬಳ ಕೋಟೆಯ ಉಸ್ತುವಾರಿ ರಕ್ಷಕ ಅಧಿಕಾರಿಯಾಗಿದ್ದ ಶ್ರೀನಿವಾಸ ಬಹದ್ದೂರ ದೇಸಾಯಿಯವರು ಧೊಂಡೋಜಿ ವಾಘನನ್ನು ರಕ್ಷಿಸಿ ಸಹಾಯ ಮಾಡಿರುವ ನೆಪವನ್ನು ಮುಂದೆ ಮಾಡಿಕೊಂಡು ತಮಗೆ ಶರಣಾಗಲು ಬ್ರಿಟೀಷ್ ಅಧಿಕಾರಿಗಳು ಶ್ರೀನಿವಾಸ ಬಹದ್ದೂರ ದೇಸಾಯಿಯವರಿಗೆ ಜಂಟಿ ಸೈನ್ಯವು ಆಗ್ರಹಪಡಿಸಿತು. ಶ್ರೀನಿವಾಸ ಬಹದ್ದೂರ ದೇಸಾಯಿಯವರು ತಮ್ಮ ಬಳಿ ಇದ್ದ ಬರೀ ೧ ಸಾವಿರದಷ್ಟಿದ್ದ ಸೈನ್ಯವನ್ನು ಸನ್ನದ್ಧರಾಗಿಸಿ ಜಂಟಿ ಸೈನ್ಯದ ವಿರುದ್ಧ ಹೋರಾಡಲು ಸಿದ್ಧರಾದರು.



ಕ್ರಿ.ಶ. ೧೮೦೦ ಜುಲೈ ೨೬ ರಂದು ಕರ್ನಲ್ ಅರ್ಥರ್ ವೆಲ್ಲೆಸ್ಲಿಯು ಡಂಬಳ ಕೋಟೆಗೆ ಬಂದು ತಲುಪಿ ಒಂದು ತಾಸಿನ ಒಳಗೆ ಕೋಟೆಯನ್ನು ತನ್ನ ಸುಪರ್ದಿಗೆ ಒಪ್ಪಿಸಲು ಡಂಬಳ ದೇಸಾಯಿಯವರಿಗೆ ಎಚ್ಚರಿಗೆ ನೀಡಿದನು. ಶರಣಾಗತಿ ಬದಲು ಹೋರಾಡುವ ಕೆಚ್ಚನ್ನು ಹೊಂದಿದ್ದ ದೇಸಾಯಿಯವರು ಪರಾಕ್ರಮದಿಂದ ತಮ್ಮ ಸೈನ್ಯದೊಂದಿಗೆ ಹೋರಾಡತೊಡಗಿದರು. ಬ್ರಿಟೀಷ್ ಮತ್ತು ಮರಾಠರ ಸಂಘಟಿತ ಸುಸಜ್ಜಿತ ಜಂಟಿ ಸೈನ್ಯದ ಎದುರು ದೇಸಾಯಿಯವರು ಸೋಲು ಒಪ್ಪಲೇಬೇಕಾಯಿತು. ಶ್ರೀನಿವಾಸ ಬಹದ್ದೂರ ದೇಸಾಯಿಯವರು ಸೆರೆ ಸಿಕ್ಕರು. ಕರ್ನಲ್ ಅರ್ಥರ್ ವೆಲ್ಲಸ್ಲಿಯು ಸೆರೆ ಸಿಕ್ಕ ಶ್ರೀನಿವಾಸ ದೇಸಾಯಿಯವರನ್ನು ಯುದ್ಧನಿಯಮಾವಳಿ ಅಡಿಯಲ್ಲಿ ಕೋರ್ಟ ಮಾರ್ಷಲ್ ಸೈನಿಕ ಕೋರ್ಟಿನಲ್ಲಿ ವಿಚಾರಣೆ ನಡೆಸದೆ ಏಕಪಕ್ಷೀಯ ಮತ್ತು ಯುದ್ಧ ನೀತಿ ವಿರೋಧಿಯಾದ ನಿಯಮಾವಳಿ ಪ್ರಕಾರ ವ್ಯಕ್ತಿಗತವಾಗಿ ತಾನೇ ತೀರ್ಮಾನಿಸಿ ಶ್ರೀನಿವಾಸ ಬಹದ್ದೂರ ದೇಸಾಯಿಯವರನ್ನು ನೇಣಿಗೆ ಹಾಕಿದನು. ಈ ಪಾಪಪ್ರಜ್ಞೆಯು ಕಾಡದೇ ಬಿಡದಿದ್ದರಿಂದ ಇರುವ ಕಾರಣಕ್ಕೆ ಬಾಂಬೆ ಪ್ರೆಸಿಡೆನ್ಸಿಯ ಜನರಲ್ ವೆಲ್ಲೆಸ್ಲಿಗೆ ಪತ್ರ ಬರೆದು ಶ್ರೀನಿವಾಸ ದೇಸಾಯಿಯವರ ವಿಧವೆ ಪತ್ನಿಗೆ ದತ್ತುಪುತ್ರನನ್ನು ತೆಗೆದುಕೊಳ್ಳಲು ಅನುಮತಿ ಕೊಡಲು ಕೇಳಿಕೊಂಡನು. ಜನರಲ್ ವೆಲ್ಲಿಸ್ಲಿಯು ಕ್ರಿ.ಶ. ೧೮೦೧ ರಲ್ಲಿ ದತ್ತುಪುತ್ರನನ್ನು ಪಡೆಯಲು ಅನುಮತಿ ಕೊಟ್ಟನು. ಶ್ರೀನಿವಾಸ ಬಹದ್ದೂರ ದೇಸಾಯಿಯವರನ್ನು ನೇಣಿಗೆ ಹಾಕಿರುವ ಈ ಘಟನೆಯು ಬ್ರಿಟೀಷ್ ಆಡಳಿತಗಾರರು ತಮ್ಮ ಮೂಗಿನ ನೇರಕ್ಕೆ ಆಡಳಿತ ನಡೆಸಿರುವ ಉದಾಹರಣೆಯಾಗಿದೆ. ಸುಸಂಸ್ಕೃತ ಬ್ರಿಟೀಷ್ ನ್ಯಾಯಪದ್ಧತಿಯ ಅಳವಡಿಕೆಯನ್ನು ಹೇಳುತ್ತಲೇ ಅದರ ಆಚರಣೆಯಲ್ಲಿ ವಿರೋಧಿ ಮನೋಭೂಮಿಕೆಯನ್ನು ಬ್ರಿಟೀಷರು ಹೊಂದಿರುವುದನ್ನು ಕಾಣುತ್ತೇವೆ. ನಂತರ ಶ್ರೀನಿವಾಸ ಬಹದ್ದೂರ ದೇಸಾಯಿಯವರ ವಿಧವೆ ಪತ್ನಿ ಮತ್ತು ಪರಿವಾರ ಪಕ್ಕದಲ್ಲಿರುವ ಸೊರಟೂರಿಗೆ ಹೋಗಿ ನೆಲೆಸಿದರು.

**ಧೊಂಡಿಯಾ ವಾಘನ ಅಂತ್ಯ :**

ಧೊಂಡಿಯಾ ವಾಘನು ಡಂಬಳದಿಂದ ಹೊರಟು ಅಣ್ಣಿಗೇರಿ, ಸವದತ್ತಿ, ಮುನವಳ್ಳಿ, ಕಿತ್ತೂರ, ಖಾನಾಪೂರ, ಅಗಳವಾಡಿ ಸುತ್ತಲೂ ಘಟಪ್ರಭಾ ನದಿಯ

ಉದ್ದಕ್ಕೂ ಸಂಚರಿಸಿದನು. ಬಹುದಿನಗಳು ಬ್ರಿಟೀಷರಿಗೆ ಧೊಂಡಿಯಾ ವಾಘನು ಸಿಗಲಿಲ್ಲ. ಬ್ರಿಟೀಷ್‌ರು ಧೊಂಡಿಯಾ ವಾಘನನ್ನು ಹಿಡಿದುಕೊಟ್ಟವರಿಗೆ ೩೦ ಸಾವಿರ ಬಹುಮಾನವನ್ನು ಕೊಡಲಾಗುವುದೆಂದು ಘೋಷಿಸಿದರು.

'ಮಲಪ್ರಭಾ ನದಿ ಪಾತ್ರದ ಸುತ್ತಮುತ್ತಲೂ ಸಂಚರಿಸುತ್ತಾ ಬದಾಮಿ ಕೋಟೆಗೆ ಧೊಂಡಿಯಾ ವಾಘನು ಬಂದನು. ಬ್ರಿಟೀಷ್ ಅಧಿಕಾರಿ ವೆಲ್ಲೆಸ್ಲಿಯು ಧೊಂಡಿಯಾ ವಾಘನನ್ನು ಬೆನ್ನುಹತ್ತಿ ಸಪ್ಟೆಂಬರ್ ೯, ೧೮೦೦ ರಂದು ಕುಣಿಗಲ್‌ನಲ್ಲಿ ಕೋಣಗಲ್ಲಿ ಕೊಂದನೆಂದು ಹೇಳಲಾಗುತ್ತದೆ. ಆದರೆ, ಕರವೀರ ರಿಯಾಸತ್ತಿನಲ್ಲಿ ಧೊಂಡಿಯಾ ವಾಘನನ್ನು ಕ್ರಿ.ಶ. ೧೮೦೦ ಸಪ್ಟೆಂಬರ್ ೧೦ ರಂದು ನಂದಿಹಳ್ಳಿಯಲ್ಲಿ ಕೊಲ್ಲಲಾಯಿತೆಂದು ಹೇಳಲಾಗಿದೆ.

## ೯. ಸ್ವಾತಂತ್ರ್ಯ ಹೋರಾಟಕ್ಕೆ ಎದೆಕೊಟ್ಟು ನಿಂತವರು :

ಮುಂಡರಗಿ ನಿರಂತರವಾಗಿ ಸ್ವಾತಂತ್ರ್ಯ ಹೋರಾಟಕ್ಕೆ ಪ್ರತಿ ಸ್ಪಂದಿಸುತ್ತ ಒಂದು ಚಿಕ್ಕ ತೊರೆಯಾಗಿ ಸೇರ್ಪಡೆಗೊಂಡು ಸ್ವಾತಂತ್ರ್ಯದ ಮಹಾನ್ ಕೆಲಸದಲ್ಲಿ ತೊಡಗಿಸಿಕೊಂಡ ಈ ಭಾಗದ ಸ್ವಾತಂತ್ರ್ಯ ಹೋರಾಟಗಾರರನ್ನು ಅವರ ದೇಶಪ್ರೇಮ, ಅಭಿಮಾನ ಮರೆಯಲಾಗದು. ಆದರೆ ೧೯೩೨–೧೯೩೩ ರಲ್ಲಿ ಮುಂಡರಗಿಯೆಂದರೇ ರಾಷ್ಟ್ರೀಯ ಜಾಗೃತಿಯಿಂದ ದೂರವಿರುವ ಬಿಸಲಿನ ತಾಪದಿಂದ ಕುದಿಯುವ ಸ್ಥಳವೆಂದು ಗುರುತಿಸಲ್ಪಟ್ಟ ಕಾರಣಕ್ಕೆ ಬ್ರಿಟೀಷ ಸರಕಾರವು ಸ್ಥಾನಬದ್ಧತೆಯಲ್ಲಿರುವ ರಾಜಕೀಯ ಕೈದಿಗಳನ್ನು ಇಡಲು ಮುಂಡರಗಿಯನ್ನು ಬಳಸಲಾಗುತ್ತಿತ್ತು.

೧೯೩೨ ರಲ್ಲಿ ಧಾರವಾಡದಲ್ಲಿ ನಡೆಯಬೇಕಿದ್ದ ಕಾಂಗ್ರೆಸ್ ಸಮ್ಮೇಳನವನ್ನು ನಡೆಯದಂತೆ ಮಾಡುವುದಕ್ಕೆ ಅದರ ನಾಯಕರಾಗಿದ್ದ, ಕಾಂತರಾವ್ ಕಮಲಾಪುರ, ಶ್ರೀನಿವಾಸರಾವ್ ಜೋಗ, ಅನಂತರಾವ್ ಕರಮಕರ, ತಿ.ರು. ನೇಸ್ವಿ, ರಾ.ವೆ. ಕರಿಗುದರಿಯರನ್ನು ಸ್ಥಾನಬದ್ಧತೆಯಲ್ಲಿಟ್ಟಿತ್ತು. ಇದರಿಂದ ಈ ಭಾಗವು ರಾಷ್ಟ್ರೀಯ ಹೋರಾಟದಲ್ಲಿ ಭಾಗಿಯಾಗಲು ಸಂಪರ್ಕವೇರ್ಪಟ್ಟಿತು. ೩೦ ರ ದಶಕದಲ್ಲಿ ಅಸಹಕಾರ ಆಂದೋಲನಕ್ಕೆ ಪೂರಕವಾಗಿ, ರಾಷ್ಟ್ರೀಯ ಹೋರಾಟದ ಪ್ರಜ್ಞೆಯನ್ನು ಮೂಡಿಸುವಲ್ಲಿ, ಪ್ರಮುಖವಾಗಿ ವಕೀಲರಾದ ಅನಂತರಾವ್ ಜಾಲಿಹಾಳ, ಡಾ. ವೆಂಕಟರಾವ್ ಹುಯಿಲಗೋಳ, ಅಂದಾನೆಪ್ಪ



ದೊಡ್ಡಮೇಟಿಯಂತಹ ನಾಯಕರು ಮುಂಡರಗಿ ಭಾಗದಲ್ಲಿ ಚಳುವಳಿಯಲ್ಲಿ ಭಾಗವಹಿಸುವಂತೆ ಇಲ್ಲಿನ ಜನರನ್ನು ಹುರಿದುಂಬಿಸಿದರು. ಅನಂತರದ ದಿನಗಳಲ್ಲಿ ಮುಂಡರಗಿಯಲ್ಲಿ ೧೯೩೭–೩೮ ರ ಸುಮಾರಿಗೆ ಕಾಂಗ್ರೆಸ್‌ನ ಸ್ಥಾಪನೆಯಾಯಿತು. ಅದರ ಮೊದಲ ಅಧ್ಯಕ್ಷರಾಗಿ ಶಂಕರಪ್ಪ ಗುಡ್ಡದ, ಕಾರ್ಯದರ್ಶಿಯಾಗಿ ತಿಮ್ಮಣ್ಣಾಚಾರ್ಯ ಗುಡಿಯವರು ಕಾರ್ಯನಿರ್ವಹಿಸಿದರು. ಗವಿಸಿದ್ದಪ್ಪ ಬಳ್ಳಾರಿ, ಸುಬ್ಬಣ್ಣಾಚಾರ್ಯ ಜೋಶಿ, ಕಾಳಪ್ಪ ಹರ್ಲಾಪುರ, ರಾಮಾಚಾರ್ಯ ಕೋರ್ಲಹಳ್ಳಿ, ಇಸ್ಲಾಯಿಲ್‌ಸಾಹೇಬ ಕಂಪ್ಲಿಮನಿ ಕಾರ್ಯಕಾರಿ ಸಮಿತಿಯಲ್ಲಿದ್ದರು. ಮುಂದಿನ ದಿನಗಳಲ್ಲಿ ಡಾ. ಬಿ.ಜಿ. ಹಲಗಿ ಉಪಾಧ್ಯಕ್ಷರಾಗಿ ಹನುಮಂತಗೌಡ ಪಾಟೀಲ ಅಧ್ಯಕ್ಷರಾಗಿ ಕಾಂಗ್ರೆಸ್ಸಿಗೆ ಕೆಲಸ ಮಾಡಿದರು. ಅದಕ್ಕಿಂತಲೂ ಮುಂಚಿತವಾಗಿ ೧೯೩೧–೩೨ ರಲ್ಲಿಯೇ ಯಲ್ಲಪ್ಪ ಪತ್ತೆಪುರ, ಅಣ್ಣಾಚಾರ್ಯ ಗುಡಿ ಶಿರಸಿಯಲ್ಲಿ ನಡೆದ ಅರಣ್ಯ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು.

ಮುಂಡರಗಿಯ ಅನ್ನದಾನೇಶ್ವರ ಮಠವು ಧಾರ್ಮಿಕ – ಸಾಮಾಜಿಕ ಕಾರ್ಯಕ್ಕೆ ಪ್ರಸಿದ್ಧಿ ಆದಂತೆ, ಅನ್ನದಾಸೋಹವನ್ನು ಸತ್ಯಾಗ್ರಹಿಗಳಿಗೆ ಮಾಡುತ್ತಿತ್ತು. ಈಶ್ವರಯ್ಯ ಮತ್ತು ಪ್ರಾಥಮಿಕ ಶಾಲೆಯ ಗುರುಗಳಾದ ಭೀಮಪ್ಪ ಬಡಿಗೇರ ಜನರಿಗೆ ರಾಷ್ಟ್ರೀಯತೆಯನ್ನು ತುಂಬುವಲ್ಲಿ ಶ್ರಮಿಸಿದರು. ೧೯೩೦ ರಲ್ಲಿ ಈ ಮಠವು ಸತ್ಯಾಗ್ರಹಿಗಳಿಗೆ ಸುರಕ್ಷಿತ ಆಶ್ರಯದ ತಾಣವಾಗಿತ್ತು. ಅನ್ನದಾನೀಶ್ವರ ಸ್ವಾಮಿಗಳು ಧಾರವಾಡ, ಬೆಳಗಾವಿಯಲ್ಲಿ ರಾಷ್ಟ್ರೀಯತೆ ಭಾವನೆಯನ್ನು ಜನರಲ್ಲಿ ಉಂಟು ಮಾಡಲು ಸಂಚರಿಸಿದರು. ಸ್ವಾಮಿಗಳು ಸ್ವತಃ ಖಾದಿಧಾರಿಗಳಾಗಿದ್ದರು.

ತಾಲೂಕಿನ ಹಿರೇವಡ್ಡಟ್ಟಿಯಲ್ಲಿ ಗುದ್ಲೆಪ್ಪ ಹಳ್ಳಿಕೇರಿ, ಅಂದಾನಪ್ಪ ದೊಡ್ಡಮೇಟಿ, ರಾಮನಗೌಡರ ಸಹಕಾರದಿಂದ ಕಾಂಗ್ರೆಸನ್ನು ಸ್ಥಾಪಿಸಿದ ಕೀರ್ತಿ, ಕಪ್ಪತಪ್ಪ ಬ್ಯಾಳಿ ಅವರಿಗೆ ಸಲ್ಲುತ್ತದೆ. ಈ ಗ್ರಾಮವು ಮಿರಜ, ಬುದಗಾಂವ ಸಂಸ್ಥಾನಕ್ಕೆ ಸೇರಿದ್ದರು ಕ್ರಿ.ಶ. ೧೯೪೧ ರಿಂದ ೧೯೪೩ ರವರೆಗೆ ಮಹಾತ್ಮಾ ಗಾಂಧೀಜಿಯವರ ನೇತೃತ್ವದಲ್ಲಿ ನಡೆದ ಅಸಹಕಾರ ಆಂದೋಲನದಲ್ಲಿ ಕಪ್ಪತಪ್ಪನವರು ಧುಮಿಕಿದ್ದರ ಫಲವಾಗಿ ಗದಗ, ಅಹಮದ ನಗರ ಜಿಲ್ಲೆಯ ವೀಸಾಪುರಗಳಲ್ಲಿ ೩ ವರ್ಷ ಜೈಲು ಶಿಕ್ಷೆಯನ್ನು ಅನುಭವಿಸಬೇಕಾಯಿತು.

ಡಂಬಳದ ಇಸ್ಮಾಯಿಲ್‌ಸಾಹೇಬ ಕಂಪ್ಲಿಮನಿ ರಾಷ್ಟ್ರೀಯ ನಾಯಕರ ಭಾಷಣದಿಂದ ಪ್ರೇರಣೆಗೊಂಡು ೧೯೩೩ ರ ಕರನಿರಾಕರಣೆ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಜೊತೆಗೆ ತಮ್ಮೊಂದಿಗೆ ಒಂದು ತಂಡವನ್ನು ಕಟ್ಟಿದ ಇಸ್ಮಾಯಿಲ್‌ಸಾಹೇಬ ಆ ತಂಡದಲ್ಲಿ ನಾರಾಯಣರಾವ ಡಂಬಳ, ಕಪ್ಪತಪ್ಪ ಬ್ಯಾಳಿ, ಕಾಳಪ್ಪಾ ಹರ್ಲಾಪೂರ, ಹುಸೇನಸಾಬ ಕಲ್ಲೂರು, ಜಂಬಣ್ಣ ಕವಲೂರ ಅವರೊಂದಿಗೆ ಸೇರಿಕೊಂಡು ಬ್ರಿಟಿಷರ ವಿರುದ್ಧ ಹೋರಾಟವನ್ನು ಕೈಗೊಂಡರು. ಅದರ ಫಲವಾಗಿ ಸೆರೆ ಸಿಕ್ಕ ಕಂಪ್ಲಿಮನಿಯವರು ನ್ಯಾಯಾಲಯದಲ್ಲಿ ತಮ್ಮ ಸಹಚರರ ಹೆಸರು ಹೇಳಿದರೆ ಶಿಕ್ಷೆಯಿಂದ ಬಚಾವು ಆಗುವ ಆಮಿಷಕ್ಕೆ ಒಳಗಾಗದೆ ಒಂದು ವರ್ಷ ಆರು ತಿಂಗಳ ಶಿಕ್ಷೆಯನ್ನು ಬೆಳಗಾಂವಿ ಮತ್ತು ಅಹಮದನಗರ ಜಿಲ್ಲೆಯ ವೀಸಾಪುರ ಜೈಲುಗಳಲ್ಲಿ ಕಠಿಣ ಶಿಕ್ಷೆಯನ್ನು ಕಳೆದುಬಂದರು.

ಮಲ್ಲಿಕಾರ್ಜುನಯ್ಯ ಸಾಲಿಮಠರು ಬಾಲ್ಯದಲ್ಲಿಯೆ ರಾಷ್ಟ್ರ ಪ್ರೇಮದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರಲ್ಲದೆ ಬೆಳಗಾವಿಯಲ್ಲಿ ಅಧ್ಯಯನ ಮಾಡುವಾಗ ರಾಷ್ಟ್ರ ನಾಯಕರ ಭಾಷಣಗಳಿಂದ ಪ್ರಭಾವಿತರಾಗಿ ಅಕ್ಕಿ ಆಲೂರಿನಲ್ಲಿ ಸಿಂಧೂರು ಶಿದ್ದಪ್ಪನವರ ನೇತೃತ್ವದಲ್ಲಿ ಕರಪತ್ರ ಹಂಚಿ ಕಾಂಗ್ರೆಸ ಸಂದೇಶವನ್ನು ಜನರ ಮಧ್ಯೆ ತೆಗೆದುಕೊಂಡು ಹೋಗುವ ಕೆಲಸ ಮಾಡಿದರು. ೧೯೪೨ ರ ಚಲೇಜಾವು ಚಳುವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ೨ ವರ್ಷಗಳ ಜೈಲು ಶಿಕ್ಷೆಯನ್ನು ಧಾರವಾಡ ಮತ್ತು ಮುಂಬೈಯ ವರೇಲಿ ಜೈಲಿನಲ್ಲಿ ಕಳೆದರು. ನಂತರ ನೌಕರಿ ಸೇರಿ ತಾಲೂಕಾ ಕ್ಷೇತ್ರ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿ ವಿಶ್ರಾಂತ ಜೀವನವನ್ನು ಮುಂಡರಗಿಯಲ್ಲಿಯೆ ಕಳೆದರು. ಡಂಬಳದ ಹನಮಂತಪ್ಪಾ ಹೇಮಾಜಪ್ಪ ದಾಯಿಪುಲೆಯವರನ್ನು ಗದುಗಿನ ಗಾಂಧಿ ಚೌಕದಲ್ಲಿ ಧ್ವಜ ಹಾರಿಸುವಾಗ ಬಂಧಿಸಿದ ಪೋಲಿಸರು ೬ ತಿಂಗಳ ಶಿಕ್ಷೆ, ೫೦೦ ರೂ.ಗಳ ದಂಡವನ್ನು ವಿಧಿಸಿದ್ದರು. ದಂಡದ ಹಣ ಕಟ್ಟಲಾರದ್ದಕ್ಕೆ ಹೆಚ್ಚುವರಿಯಾಗಿ ಒಂದು ತಿಂಗಳ ಶಿಕ್ಷೆಯನ್ನು ಹಿಂಡಲಗಾ ಜೈಲಿನಲ್ಲಿ ಅನುಭವಿಸಿದರು.



ಎನ್.ಜೆ. ಹುಲಗಿ ಮಾಸ್ತರೆಂದು ಜನಪ್ರಿಯರಾಗಿದ್ದ ನಾರಾಯಣಚಾರ್ಯ ಹುಲಿಗಿ ಮುಂಡರಗಿಯಲ್ಲಿ ಕಾಂಗ್ರೆಸ್‌ಗಾಗಿ ದುಡಿದವರು. ಬ್ರಿಟೀಷರ ವಿರುದ್ಧ ಪ್ರಭಾತಪೇರಿ, ಕರಪತ್ರ ಹಂಚುವ ಕಾರ್ಯದಲ್ಲಿ ತೊಡಗಿಸಿಕೊಂಡು ಮಹಾತ್ಮ ಗಾಂಧೀಜಿಯವರನ್ನು ಪುಣೆಯ ಆಗಾಖಾನ ಅರಮನೆಯಲ್ಲಿ ಬಂಧನದಲ್ಲಿ ಇಟ್ಟಾಗ ಗಾಂಧೀಜಿಯವರನ್ನು ಬಂಧ ಮುಕ್ತಗೊಳಿಸಲು ಪುಣೆಗೆ ಹೊರಟ ೫ ಜನರ ತಂಡದಲ್ಲಿ ಇವರು ಒಬ್ಬರಾಗಿದ್ದರು. ಪುಣೆಯಲ್ಲಿ ಸತ್ಯಾಗ್ರಹ ಮಾಡಿ ಯರವಾಡ ಜೈಲಿನಲ್ಲಿ ೬ ತಿಂಗಳ ಶಿಕ್ಷೆಯನ್ನು ಅನುಭವಿಸಿದರು.

ಫಕೀರಪ್ಪ ಮಲ್ಲೇಶಪ್ಪ ಹವಳದ ಅವರು ತಾಲೂಕಿನ ಬಾಗೇವಾಡಿಯವರು. ಚಿಕ್ಕ ವಯಸ್ಸಿನಲ್ಲಿಯೆ ಮಕ್ಕಳ ತಂಡವನ್ನು ಕಟ್ಟಿಕೊಂಡು ಬ್ರಿಟೀಷ ವಿರೋಧಿ ಚಳುವಳಿ ಮತ್ತು ಮೆರವಣಿಗೆಗಳಲ್ಲಿ ಭಾಗವಹಿಸಿದ್ದಕ್ಕಾಗಿ ಫಕ್ಕೀರಪ್ಪ ಹವಳದ ಮತ್ತು ಶಿವಪ್ಪ ಅಂಬೋಜಿಯವರನ್ನು ಪೊಲೀಸರು ಬಂಧಿಸಿ ಎಚ್ಚರಿಕೆಯನ್ನು ನೀಡಿ ಕಳಿಸಿದರು. ಆದರೂ ಪಟ್ಟು ಬಿಡದ ಫಕ್ಕೀರಪ್ಪ ಹಳ್ಳಿಗಳಲ್ಲಿ ದೇಶ ಭಕ್ತಿ ಗೀತೆಗಳನ್ನು ಹಾಡಿ ಜನರಲ್ಲಿ ಜಾಗೃತಿ ಮೂಡಿಸಿದ್ದಲ್ಲದೆ ಮೈಲಾರ ಮಹಾದೇವಪ್ಪ ಕಪ್ಪತ್ತಗುಡ್ಡದಲ್ಲಿ ಭೂಗತರಾಗಿದ್ದಾಗ ಅವರಿಗೆ ಸುದ್ದಿ ಮುಟ್ಟಿಸುವ ಕೆಲಸವನ್ನು ಮಾಡಿದರು.

ಭೂಗತ ಹೋರಾಟಗಾರರಿಗೆ ಸುದ್ದಿ ಮತ್ತು ಆಹಾರ ಧಾನ್ಯಗಳನ್ನು ಸಂಗ್ರಹಿಸಿ ವ್ಯವಸ್ಥಿತವಾಗಿ ಮೈಲಾರ ಮಹಾದೇವರ ಗುಂಪಿಗೆ ತಲುಪಿಸಿದ ಶ್ರೇಯಸ್ಸಿನ ಮುರಡಿ ತಾಂಡೆದ ಪೂನಪ್ಪ, ಗಣಿಯಪ್ಪ, ಕಶನಪ್ಪ, ಮಾನಪ್ಪ ಮತ್ತು ಹರಿಸಿಂಗರನ್ನು ಆಹಾರ ಧಾನ್ಯ ಸಾಗಿಸುವ ಸಂದರ್ಭದಲ್ಲಿ ಶಿರಹಟ್ಟಿ ಪೊಲೀಸರು ಹಿಡಿದುಕೊಂಡು ಹೋಗಿ ನಂತರ ಬಿಡುಗಡೆ ಮಾಡಿದರು. ಅಲ್ಲದೆ ದುರಗಪ್ಪ ಲಮಾಣಿ, ಶ್ರೀಮತಿ ಕೇಶಲಮ್ಮ ಮಾನಪ್ಪ ಲಮಾಣಿ ಮತ್ತು ವಿರುಪಾಪೂರ ತಾಂಡದ ಶ್ರೀಮತಿ ಪೂನವ್ವ ಹೂವಪ್ಪ ಲಮಾಣಿ ಇವರು ಸ್ವಾತಂತ್ರ್ಯ ಹೋರಾಟಗಾರರಿಗೆ ಸಹಾಯ ಮಾಡಿದವರಲ್ಲಿ ಪ್ರಮುಖರು.

೧೯೪೨ ರಲ್ಲಿ ಅಸಹಕಾರ ಚಳುವಳಿಯ ಭಾಗವಾಗಿ ಶಿವಲಿಂಗಪ್ಪ ಅಸಪ್ಪ ಸವಣೂರ ಅವರು ಡಾ. ಬಿ.ಜಿ. ಹುಲಗಿ, ಶಂಕ್ರಪ್ಪ ಗುಡ್ಡದ, ಇಸ್ಮಾಯಿಲ್‌ಸಾಹೇಬ ಕಂಪ್ಲಿಮನಿ ಇವರೊಡನೆ ಕೂಡಿಕೊಂಡು ಈಚಲ ಗಿಡ

ಕಡಿಯುವದು, ತಾರು ತಂತಿ ಕತ್ತರಿಸುವ ಚಾವಡಿಗಳಿಗೆ ಬೆಂಕಿ ಹಚ್ಚುವ ಕೆಲಸವನ್ನು ಮಾಡಿದರು. ಗಾಂಧೀಜಿಯವರ ಪ್ರಭಾವದಿಂದ ಗಾಂಧಿ ಟೊಪ್ಪಿಗೆಯನ್ನು ಧರಿಸುತ್ತಿದ್ದ ಚನ್ನಪ್ಪ ಮುರಿಗೆಪ್ಪ ಬೆಲ್ಲದ ಅವರು ಹಳ್ಳಿಕೇರಿ ಗ್ರಾಮದವರು. ಭೂಗತರಾಗಿ ಬುಲೆಟನ್‌ಗಳನ್ನು ಹಂಚುವ ಮೂಲಕ ಚಳುವಳಿಯಲ್ಲಿ ತೊಡಗಿಸಿಕೊಂಡಿದ್ದರು.

೧೯೪೧ ರ ವೈಯಕ್ತಿಕ ಸತ್ಯಾಗ್ರಹದಲ್ಲಿ ಮುಂಡರಗಿ ಭಾಗದಿಂದ ಭಾಗವಹಿಸಲು ಶಂಕ್ರಪ್ಪ ಗುಡ್ಡದ, ರಾಮಚಾರ್ಯ ಕೊರ್ಲಹಳ್ಳಿ, ಹುಸೇನಸಾಬ ಕಲ್ಲೂರ, ಕಾಳಪ್ಪ ಹರ್ಲಾಪುರ ಮತ್ತು ಇಸ್ಮಾಯಿಲ್ ಸಾಬ ಕಂಪ್ಲಿಮನಿ ಇವರಿಗೆ ಗಾಂಧೀಜಿಯವರಿಂದ ಅನುಮತಿ ಸಿಕ್ಕಿತು. ಸತ್ಯಾಗ್ರಹಿಗಳು ಸತ್ಯಾಗ್ರಹದ ದಿನಾಂಕ ಮತ್ತು ಸ್ಥಳಗಳನ್ನು ಪೊಲೀಸರಿಗೆ ಮೊದಲೇ ತಿಳಿಸಬೇಕಾಗಿತ್ತು. ಸತ್ಯಾಗ್ರಹದ ಸಂದರ್ಭದಲ್ಲಿ ಈ ಯುದ್ಧವನ್ನು ನಾನು ತನು, ಮನ, ಧನದಿಂದ ನಿಷೇಧಿಸುತ್ತೇನೆ ಎಂದು ಹೇಳಬೇಕಾಗಿತ್ತು. ಈ ಸತ್ಯಾಗ್ರಹದಲ್ಲಿ ಶಂಕ್ರಪ್ಪ ಗುಡ್ಡದ, ರಾಮಾಚಾರ್ಯ ಕೊರ್ಲಹಳ್ಳಿ, ಹುಸೇನಸಾಬ ಕಲ್ಲೂರ ಜೈಲಿಗೆ ಹೋದರು. ಡಾ. ಬಿ.ಜಿ. ಹುಲಗಿ ಮೌಲಾನ ಆಜಾದರ ಬಂಧನವನ್ನು ಖಂಡಿಸಿ ಭಾಷಣ ಮಾಡಿದ್ದಕ್ಕೆ ಬಂಧಿಸಲ್ಪಟ್ಟು ಒಂದು ವರ್ಷ ಆರು ತಿಂಗಳ ಶಿಕ್ಷೆಗೆ ಗುರಿ ಪಡಿಸಿ ಜೈಲಿಗೆ ಕಳುಹಿಸಲ್ಪಟ್ಟರು.

ಅಲ್ಲದೆ ಸ್ವಾತಂತ್ರ್ಯ ಹೋರಾಟಗಾರರ ಒಂದು ಪಟ್ಟಿಯನ್ನು ಈ ಕೆಳಗಿನಂತೆ ದಾಖಲಿಸಬಹುದಾಗಿದೆ.

೧) ಡಾ. ಬಿ.ಜಿ. ಹುಲಗಿ ೨) ಡಾ. ಸಿ. ಎಮ್. ಚುರ್ಚಿಹಾಳಮಠ ೩) ಎಮ್.ಸಿ. ಸಾಲಿಮಠ ೪) ಭೀಮಾಚಾರ್ಯ ಎನ್. ಜೋಶಿ ೫) ನಾರಾಯಣ ಜಿ. ಜೋಶಿ ೬) ಗೋವಿಂದಾಚಾರ್ಯ ಜಿ. ಹುಲಗಿ ೭) ರುದ್ರಯ್ಯ ಹಾಲಪ್ಪನಮಠ ೮) ಹನಮಂತಪ್ಪ ಹೇಮಾಜಪ್ಪ ದಾಯಿಪುಲೆ ೯) ಕಪ್ಪತಪ್ಪ ಮಲ್ಲಪ್ಪ ಬ್ಯಾಳಿ ೧೦) ಲಾಲಸಿಂಗಪ್ಪ ಲಮಾಣಿ ೧೧) ಗಣೆಯಪ್ಪ ಲಮಾಣಿ ೧೨) ಕಶನಪ್ಪ ಲಮಾಣಿ ೧೩) ನಾಗಯ್ಯ ವಿರಕ್ತಮಠ ೧೪) ಶ್ರೀನಿವಾಸಚಾರ್ಯ ಹನಮಂತಗೌಡ ಅಪರಂಜಿ ೧೫) ಶ್ರೀನಿವಾಸಚಾರ್ಯ ಪಾಂಡುರಂಗಚಾರ್ಯ ಕಟ್ಟಿ ೧೬) ಷಣ್ಮುಕಪ್ಪ ಭರಮಪ್ಪ ನಾಗನೂರ ೧೭) ಗೂಳಪ್ಪ ಹೂಗಾರ ೧೮) ಬಸಪ್ಪ ನೀರಲಗಿ ೧೯) ಯಲ್ಲಪ್ಪ ಶೇಷಪ್ಪ ಪತ್ತೆಪುರ ೨೦) ಅಣ್ಣಂಯ್ಯಾಚಾರ್ಯ ಸ್ವಾಮಿರಾಮಾಚಾರ್ಯ ಗುಡಿ ೨೧) ಇಸ್ಮಾಯಿಲ್‌ಸಾಬ ಕಂಪ್ಲಿಮನಿ ೨೨) ಮಹಾದೇವಪ್ಪ ಧರ್ಮಪ್ಪ ಅಜಗೊಂಡ ೨೩) ಗುರಪ್ಪ ಲಚ್ಚಪ್ಪ ನಾರಾಯಣಕೇರಿ ೨೪) ಚಿದಾನಂದಪ್ಪ ಕಮ್ಮಾರ ೨೫) ರಾಮಾಚಾರ್ಯ ಜಿ. ಕೊರ್ಲಹಳ್ಳಿ ೨೬) ಶಂಕ್ರಪ್ಪ ಎಮ್. ಗುಡ್ಡದ ೨೭) ಕಾಳಪ್ಪ ಹರ್ಲಾಪುರ ೨೮) ಹುಸೇನಸಾಬ ಅಲ್ಲಿಸಾಬ ಕಲ್ಲೂರ ೨೯) ಚಂಬಣ್ಣಾ ಈಶ್ವರಪ್ಪ ಕವಲೂರ ೩೦) ಹನುಮಂತಗೌಡ ಈಳಗೇರ ೩೧) ಸೂಗೀರಪ್ಪ ಶೀರಿ ೩೨) ವೀರಭದ್ರಯ್ಯ ಜಿ. ಶೆಟ್ಟರ ೩೩) ಹಾವನಾಳೆಪ್ಪ ಏಳಕೊಳ್ಳಿ ೩೪) ಅಯ್ಯಪ್ಪ ಶೀರಿ ೩೫) ಹುಸೇನಸಾಬ ಬಿಸನಹಳ್ಳಿ ೩೬) ಮುರಡೆಪ್ಪ ಕರಿಗಾರ ೩೭) ಹುಸೇನಸಾಬ ಸುಂಕದ ೩೮) ಅಡಿವೆಯ್ಯ ಕಿನ್ನಾಳ ೩೯) ಚಂದ್ರಶೇಖರಪ್ಪ ಎ. ಗೋಗೇರಿ ೪೦) ಹೂವಪ್ಪ ಲಮಾಣಿ ೪೧) ಮಾನಪ್ಪ ದುರಗಪ್ಪ ಲಮಾಣಿ ೪೨) ಹರಿಸಿಂಗಪ್ಪ ದುರಗಪ್ಪ ಲಮಾಣಿ.



## ೧೦. ಮುಂಡರಗಿ ಭೀಮರಾಯರು :

ಟಿಪ್ಪು ಸುಲ್ತಾನನು ಜುಲೈ ೧೭೮೬ ರಲ್ಲಿ ಆದವಾನಿ ನವಾಬನನ್ನು ಸೋಲಿಸಿ, ಸವಣೂರಿಗೆ ಬಂದು ನವಾಬ ಅಬ್ದುಲ್ ಕರೀಂಖಾನನ ಮೇಲೆ ದಾಳಿ ಮಾಡಿದನು, ಆಗ ಅಬ್ದುಲ್ ಕರೀಂಖಾನ್ ನವಾಬನು ಸವಣೂರನ್ನು ತೊರೆದು ಪುಣೆಗೆ ಹೋಗಿ ಪೇಶ್ವೆಯವರಲ್ಲಿ ಆಶ್ರಯ ಪಡೆದನು. ಟಿಪ್ಪು ಇಲ್ಲಿ ನಿಲ್ಲದೆ ಕೇರಳದತ್ತ ದಾಳಿಗೆಂದು ಹೋದೊಡನೆ, ಪೇಶ್ವೆಯವರ ವಶದಲ್ಲಿದ್ದ ಈ ಪ್ರದೇಶದಲ್ಲಿಯ ಆಡಳಿತ ಶಿಥಿಲಗೊಂಡಿತು. ಉತ್ತರ ಕರ್ನಾಟಕದ ದೇಸಾಯರು ತಮಗೆ ಸ್ವಾತಂತ್ರ್ಯ ಬಂದಂತೆ ಸ್ವೇಚ್ಛೆಯಿಂದ ಕುಣಿಯ ಹತ್ತಿದರು. ಅಂತಲೇ ಧೋಂಡಿಯಾ ವಾಘ ನಂತರದ ಸರದಾರರು ತಲೆ ಎತ್ತಿ ಆಂಗ್ಲರನ್ನು ಮತ್ತು ಮರಾಠರನ್ನು ಚಳ್ಳೇ ಹಣ್ಣು ತಿನ್ನುವಂತೆ ಮಾಡಿ ಈ ದೇಸಾಯರಿಗೆ ಬೆಂಬಲವಾಗಿ ನಿಂತರು.

ಮುಂಡರಗಿಯಲ್ಲಿ ಕಲಕೇರಿ ನಾಡಗೌಡರಾಗಿದ್ದ ಭೀಮರಾಯರು ತರುಣರನ್ನು ಒಂದೆಡೆ ಸೇರಿಸಿದನು. ಕಲಕೇರಿ ನಿಜಾಮ ಆಡಳಿತಕ್ಕೆ ಸೇರಿದ ಒಂದು ಹಳ್ಳಿಯಾಗಿತ್ತು. ಅಲ್ಲಿಯ ಶಾನುಭೋಗರು ಇವರಾಗಿರಬೇಕು. ಕಾರಣ ಇವರೆಂದೂ ದೇಸಾಯರಾಗಿರಲಿಲ್ಲ. ಅನೇಕ ಸಲ ನಾಡಗೌಡರನ್ನು ನಾಡಸ್ವಾಮಿಯೆಂದು ಕರೆದಿರುವ ಸಂಭವ ಇದೆ. ಮುಂಡರಗಿ ಮೊಂಡಗೈ

ಭೀಮರಾಯರೆಂದೂ ಕರೆದಿರುವ ಸಂಭವ ಇದೆ. ಮುಂಡರಗಿ ಮೊಂಡಗೈ ಭೀಮರಾಯರೆಂದೇ ಪ್ರಸಿದ್ಧರಾಗಿದ್ದ ಇವರು ಆನುವಂಶಿಕವಾಗಿ ಡಂಬಳದ ಬಹದ್ದೂರ ದೇಸಾಯರ ಮುತಾಲಿಕರಾಗಿದ್ದರು. ಮುತಾಲಿಕರೆಂದರೆ ಸಾರ್ವಜನಿಕ ಅಧಿಕಾರಿ ಅಥವಾ ದೇಸಾಯರ ಮುಖ್ಯ ಕಾರಭಾರಿ ಕಲಕೇರಿಯಲ್ಲಿ ಇನ್ನೊಬ್ಬ ದೇಸಾಯರು ಇದ್ದಿರಬೇಕೆಂದು ಅಲ್ಲಗಳೆಯಲು ಬರುವಂತಿಲ್ಲ.

ಕ್ರಿ.ಶ. ೧೭೯೦ರ ಹೊತ್ತಿಗೆ ಟಿಪ್ಪು ತನ್ನ ಸೇನಾಪತಿಯಾಗಿದ್ದ ಖಮರುದ್ದೀನಖಾನನನ್ನು ಹರಪನಹಳ್ಳಿ ಮೇಲೆ ದಾಳಿ ಮಾಡಲು ಕಳಿಸಿದ್ದನು. ಇವನು ಕೊಟ್ಟೂರು ಕೋಟೆಯನ್ನು ಜಯಿಸಿ, ಉಚ್ಚಂಗಿದುರ್ಗದ ಮೇಲೆ ಏರಿಹೋದನು. ಉಚ್ಚಂಗಿ ದುರ್ಗದ ಬೇಡರು ಎಷ್ಟು ಹೋರಾಡಿದರೂ ಖಮರುದ್ದೀನಖಾನನನ್ನು ಎದುರಿಸುವುದು ಆಗಲಿಲ್ಲ. ಆಗ ಟಿಪ್ಪುವಿನ ಈ ಅಧಿಕಾರಿ ೫೦೦ ಜನ ಬೇಡರನ್ನು ಬಂಧಿಸಿ, ಟಿಪ್ಪುವಿನ ಬಳಿ ಹೋದಾಗ ಅವನು ಇವರೆಲ್ಲರ ಸುಂತಿ ಮಾಡಿಸಿ ಮುಸಲ್ಮಾನರನ್ನಾಗಿ ಮಾಡಿದನು. ಈ ಯುದ್ಧದಲ್ಲಿ ಹಳ್ಳಿ ಪೂರ್ಣ ನೆಲಸಮವಾಯಿತು. ಯುದ್ಧದ ಮುನ್ನ ಹರಪನಹಳ್ಳಿ ದೊರೆಯಾಗಿದ್ದ ಸೋಮಶೇಖರನು ತನ್ನ ಸುತ್ತಮುತ್ತಲಿನ ದೇಸಾಯಿಯವರಿಗೆ ತನ್ನ ಸಹಾಯಕ್ಕೆ ಬರಬೇಕೆಂದು ಪ್ರಾರ್ಥಿಸಿದನು. ಸೋಮಶೇಖರನ ಪ್ರಾರ್ಥನೆಯನ್ನು ಮನ್ನಿಸಿ ಮುಂಡರಗಿ ಭೀಮರಾಯರು ೫೦೦ ಸೈನಿಕರನ್ನು ಸೇರಿಸಿಕೊಂಡು ಅವನ ಸಹಾಯಕ್ಕೆ ಧಾವಿಸಿದರು. ಆದರೆ ಟಿಪ್ಪುವಿನ ಸೇನಾಪತಿ ಖಮರುದ್ದೀನನು ಬಲಿಷ್ಠನಾಗಿದ್ದರಿಂದ ಸೋಮಶೇಖರನು ಸೋತನು. ಅವನ ಅನೇಕ ಸೈನಿಕರು ಬಂಧಿತರಾದರು. ಅವರಲ್ಲಿ ಮುಂಡರಗಿ ಭೀಮರಾಯರ ಸೈನಿಕರೂ ಇದ್ದರು.

ಬಂಧಿತರಾದ ಈ ಸೈನಿಕರ ಕೈಗಳನ್ನು ಕಡಿದು ಹಾಕಬೇಕೆಂದು ಖಮರುದ್ದೀನ ನಿರ್ಧರಿಸಿ ತನ್ನ ಸಹಾಯಕರನ್ನು ಕರೆದು ಆಜ್ಞಾಪಿಸಿದನು. ಇದನ್ನು ಕೇಳಿದ ಮುಂಡರಗಿ ಭೀಮರಾಯರು ತಮ್ಮ ಸೈನಿಕರನ್ನು ತೋರಿಸುತ್ತ "ಇವರೆಲ್ಲರೂ ನಿರಪರಾಧಿಗಳು ಅಮಾಯಕರು! ಇವರನ್ನು ಪ್ರಚೋದಿಸಿ ನಾನು ಯುದ್ಧಕ್ಕೆ ಕರೆದು ತಂದಿದ್ದೇನೆ. ಬೇಕಾದರೆ ನನ್ನ ಕೈಗಳನ್ನು ಕತ್ತರಿಸಿ ಹಾಕಿರಿ. ಇವರನ್ನು ಜೀವದಿಂದ ಬಿಟ್ಟರೆ ಇವರು ನಾಳೆ ನಿಮ್ಮ ಸೈನ್ಯವನ್ನು ಸೇರಬಹುದು. ಅದರಿಂದ ನಿಮಗೆ ಉಪಯೋಗವಿದೆ."



ಎಂದು ನುಡಿದಾಗ ಖಮರುದ್ದೀನಖಾನನ ಮೇಲೆ ಬಿಂಬಿಸಿದ ಈ ಭೀಮರಾಯರ ಮಾತು, ಖಾನನಿಗೆ ಸರಿಯೆನಿಸಿತು. ಆಗ ಅವನು ಭೀಮರಾಯರ ಕೈ ಕತ್ತರಿಸಿ ಖಡ್ಗವನ್ನು ಹಿಡಿಯಲು ಬಾರದಂತೆ ಮೊಂಡು ಮಾಡಿದನು. ಅಂದಿನಿಂದ ಎಲ್ಲರೂ ಇವರನ್ನು ಮೊಂಡಗೈ ಮುಂಡರಗಿ ಭೀಮರಾಯರೆಂದೇ ಕರೆಯಹತ್ತಿದರು.

ಭೀಮರಾಯರು ಮರಳಿ ಮುಂಡರಗಿಗೆ ಬಂದರು. ಅಲ್ಲಿಂದ ಡಂಬಳಕ್ಕೆ ಹೋಗಿ ಶ್ರೀನಿವಾಸ ವೆಂಕಟಾದ್ರಿ ಬಹದ್ದೂರ ದೇಸಾಯರ ಮುತಾಲಿಕರಾಗಿ ಕಾರ್ಯವನ್ನು ಮಾಡಹತ್ತಿದರು. ೧೮೦೦ ರಲ್ಲಿ ಪೇಶ್ವೆಯವರು ಮತ್ತು ಆಂಗ್ಲರು ಡಂಬಳವನ್ನು ಗೆದ್ದು ಶ್ರೀನಿವಾಸರಾಯರನ್ನು ಗಲ್ಲಿಗೇರಿಸಿದ ಮೇಲೆ ಆ ಬಹಾದ್ದೂರ ದೇಸಾಯರ ಕುಟುಂಬವು ಶಿರಹಟ್ಟಿ ಬಳಿ ಇರುವ ಸೊರಟೂರಿಗೆ ಹೋಯಿತು. ಅಲ್ಲಿ ಅವರಿಗೆ ಭೂಮಿಗಳಿದ್ದವು. ಹಾಗೆ ನೋಡಿದರೆ ಇವರೇನು ಸೊರಟೂರು ದೇಸಾಯರಲ್ಲ. ಆದರೆ ಸೊರಟೂರಿಗೆ ಹೋದ ಮೇಲೆ ಇವರನ್ನು ಸೊರಟೂರು ದೇಸಾಯರು ಎಂದು ಕರೆಯಹತ್ತಿದರು. ಅದಕ್ಕೆ ಡಂಬಳದ ದೇಸಾಯರಿಗೆ ಸೊರಟೂರ ದೇಸಾಯರೆಂದು ಕರೆಯುತ್ತಾರೆ. ಮೊಂಡಗೈ ಭೀಮರಾಯರು ಡಂಬಳದಿಂದ ಕಲಕೇರಿಗೆ ಬಂದು ತಮ್ಮ ನಾಡಗೌಡಿಕೆ ಕಾರ್ಯವನ್ನು ಮುಂದುವರೆಸಿದರು.

ಡಂಬಳದ ದೇಸಗತಿ ಆಗ ಮರಾಠಾ ಸರದಾರನಾದ ಬಾಪೂ ಗೋಖಲೇನ ಕಡೆಗಿತ್ತು. ಮೊಂಡಗೈ ಮುಂಡರಗಿ ಭೀಮರಾಯರು ಪೇಶ್ವೆಯವರ ಆಧಿಪತ್ಯವನ್ನು ಒಪ್ಪಿಕೊಂಡಿದ್ದರಿಂದ ಕೈಬಿಟ್ಟು ಹೋಗಿದ್ದ ಅವರ ಕಲಕೇರಿ ನಾಡಗೌಡಿಕೆ ಭೂಮಿಗಳು ಮರಳಿ ದೊರೆಯಲು ಅವರಿಗೆ ಅನುಕೂಲವಾಯಿತು. ಇದೇ ಕಾಲಕ್ಕೆ ಮೂವರು ಪಠಾಣರು ನಿಜಾಮನ ಪ್ರತಿನಿಧಿಯಾಗಿ ಶಾಂತಿಯ ಮಾತುಕತೆಗಳನ್ನಾಡಲು ಬಂದಿರುವುದಾಗಿ ಭೀಮರಾಯರು ಭೆಟ್ಟಿಯಾದರು. ಭೀಮರಾಯರಿಗೆ ಈ ಮೂವರ ಮೇಲೆ ಸಂಶಯ ಬಂದಿತು. ಅವರನ್ನು ಬಂಧಿಸಿ ಕೊಲ್ಲಲು ಸಿದ್ಧತೆ ನಡೆಸಿದಾಗ ಅವರು ಭೀಮರಾಯರ ಮಗನಾದ ಅಲ್ಪವಯಿ ರಂಗರಾಯರನ್ನು ಅಪಹರಿಸಿಕೊಂಡು ಹೋಗಿ ಒಂದು ಮನೆಯಲ್ಲಿ ಬಚ್ಚಿಟ್ಟರು. ಭೀಮರಾಯರು ಮಗನನ್ನು ಬಿಡಿಸಿಕೊಳ್ಳಲು ಹೋದಾಗ ಒಳಗಿದ್ದವರು "ನಮ್ಮನ್ನು ಸುರಕ್ಷಿತವಾಗಿ ಹೊರಗೆ ಹೋಗಲು ಬಿಟ್ಟರೆ ನಾವು

ನಿಮ್ಮ ಮಗನನ್ನು ಬಿಟ್ಟುಕೊಡುತ್ತೇವೆ, ಇಲ್ಲದಿದ್ದರೆ ನಿಮ್ಮ ಮಗನ ಜೀವಕ್ಕ ಅಪಾಯವಿದೆ" ಎಂದು ಹೇಳಿದರು. ನಂತರ ನಮಗೆ ನೀವು ಮೂರು ಅಶ್ವಗಳನ್ನು ಒದಗಿಸಬೇಕು ಎಂದು ಇನ್ನೊಂದು ಕರಾರನ್ನು ಹಾಕಿದರು. ಭೀಮರಾಯರು ಪಠಾಣರ ಎಲ್ಲ ಕರಾರುಗಳಿಗೆ ಒಪ್ಪಿ ಮಗನು ಕೈಸೇರಿದೊಡನೆ ಆ ಮೂವರು ಪಠಾಣರನ್ನು ಹಿಡಿದು ಕೊಂದುಹಾಕಿದರು. ಈ ಘಟನೆಯನ್ನು ಕೇಳಿದ ಪೇಶ್ವೆ ಸರದಾರನಾಗಿದ್ದ ಬಾಪೂ ಗೋಖಲೆಗೆ ಹೊಟ್ಟೆಕಿಚ್ಚು ಶುರುವಾಯಿತು. ಏನಾದರೂ ಮಾಡಿ ಭೀಮರಾಯನ ಪ್ರಾಬಲ್ಯವನ್ನು ಕಡಿಮೆ ಮಾಡಲು ಗೋಖಲೆ ನಿರ್ಧರಿಸಿದನು. ಆದರೆ ಪ್ರಕಟವಾಗಿ ಅವನೇನೂ ಮಾಡಲು ಬರುವಂತಿರಲಿಲ್ಲ. ಅಷ್ಟೇ ಅಲ್ಲ ಅವನ ಒಡೆಯರಾದ ಪೇಶ್ವೆಯವರು ನವಲಗುಂದ ಮೇಲೆ ಹಾಸಿ ಸೊಂಡೂರಿನ ಕಾರ್ತಿಕ ಸ್ವಾಮಿ ದರ್ಶನಕ್ಕೆ ಹೋಗುವಾಗ ಸವಣೂರು ನವಾಬನಿಗೆ ಅಲ್ಲಿ ಬಂದು ಭೆಟ್ಟಿಯಾಗಬೇಕೆಂದು ಹೇಳಿ ಕಳಿಸಿದ್ದರು. ನವಾಬನ ಜೊತೆ ಮೊಂಡಗೈ ಮುಂಡರಗಿ ಭೀಮರಾಯರು ನವಲಗುಂದಕ್ಕೆ ಹೋಗಿದ್ದರು. ಹೀಗಾಗಿ ಭೀಮರಾಯರಿಗೆ ಪೇಶ್ವೆಯವರ ಪರಿಚಯವಾಯಿತು. ಈ ಸಮಯಕ್ಕೆ ಬಾಪೂ ಗೋಖಲೆ ಸವದತ್ತಿಯಲ್ಲಿ ವಾಸ್ತವ್ಯ ಮಾಡಿದ್ದನು. ಅವನು ಭೀಮರಾಯರಿಗೆ ಸವದತ್ತಿಗೆ ಬಂದು ತನ್ನನ್ನು ಕಾಣಬೇಕೆಂದು ಹೇಳಿಕಳಿಸಿದನು. ಭೀಮರಾಯರು ಅವನನ್ನು ಭೆಟ್ಟಿಯಾಗಲು ಹೋದಾಗ ಮೋಸದಿಂದ ಅವರನ್ನು ಬಂಧಿಸಿ ಅವರಿಗೆ ವಿಷ ಹಾಕಿದನು. ಇದರಿಂದ ಮೊಂಡಗೈ ಮುಂಡರಗಿ ಭೀಮರಾಯರು ೧೮೧೧ ರಲ್ಲಿ ನಿಧನರಾದರು.

ಭೀಮರಾಯರದು ಅಸಾಮಾನ್ಯ ವ್ಯಕ್ತಿತ್ವ. ಅವರು ಸೈನ್ಯವನ್ನು ಕಟ್ಟಿ ಬ್ರಿಟಿಷರೊಡನೆ ಹೋರಾಡಿದ್ದು ಸಾಮಾನ್ಯ ಮಾತಲ್ಲ. ಆದರೆ ಅವರ ಮಗ ರಂಗರಾಯ ತಂದೆಯ ಶೌರ್ಯ, ಧೈರ್ಯ, ಸಾಹಸಗಳನ್ನು ಪ್ರದರ್ಶಿಸಲಿಲ್ಲ. ಆದರೆ ರಂಗರಾಯನು ವ್ಯವಹಾರದಲ್ಲಿ ಚತುರನಿದ್ದನು. ಇಂಗ್ಲೀಷ ಅಭ್ಯಾಸವನ್ನು ಮಾಡಿದ್ದನು. ಅವನಿಗೆ ಧಾರವಾಡ ಜಿಲ್ಲೆ ಮತ್ತು ಅದರ ಸುತ್ತಲಿನ ಪರಿಸರದ ಪರಿಚಯವಿತ್ತು. ಇದನ್ನು ಕಂಡ ಧಾರವಾಡದ ಅಸಿಸ್ಟೆಂಟ ಕಲೆಕ್ಟರನಾಗಿದ್ದ ವಾಲ್ಟರ ಇಲೀಯಟ್ ರಂಗರಾಯನ ಸಹಾಯದಿಂದ ಹಲವಾರು ಕನ್ನಡದ ಶಾಸನಗಳನ್ನು ಓದಿಸಿ, ಸಂಶೋಧನೆ ನಡೆಸಿದನು. ರಂಗರಾಯನು ಕೋವಿ ಖಡ್ಗಗಳನ್ನು ಹಿಡಿಯಲು ಕಲಿಯದಿದ್ದರೂ ಲೋಕಜ್ಞಾನದಲ್ಲಿ ಸಾಕಷ್ಟು ಪಾರಂಗತನಿದ್ದನು. ಅದರಿಂದ ಅವನು ಪೇಶ್ವೆಯವರ ಆಡಳಿತದಲ್ಲಿ



ನ್ಯಾಯಾಧೀಶನಾಗಿ ನೇಮಕನಾಗಿದ್ದನು. ಕೆಲವರ ಪ್ರಕಾರ ರಂಗರಾಯನು ಪೇಶ್ವೆಯವರ ಆಡಳಿತದಲ್ಲಿ ಅಧಿಕಾರಿಯಾಗಿದ್ದನಂತೆ.

## ೧೧. ಮೊದಲ ಸ್ವಾತಂತ್ರ್ಯ ಸಂಗ್ರಾಮ: ಮುಂಡರಗಿಯ ಕೆಚ್ಚೆದೆಯ ಕಲಿಗಳು

೧೮೧೮ರ ಹೊತ್ತಿಗೆ ಪೇಶ್ವೆಯವರ ಆಳ್ವಿಕೆ ಕೊನೆಗೊಂಡು ಬ್ರಿಟಿಷರ ಪ್ರಾಬಲ್ಯ ಹೆಚ್ಚಾಯಿತು. ಸಣ್ಣ ಸಣ್ಣ ಸಂಸ್ಥಾನಿಕರಂತಿದ್ದ ಉತ್ತರ ಕರ್ನಾಟಕದ ದೇಸಾಯಿ, ದೇಶಪಾಂಡೆ, ದೇಶಮುಖರು ತಾವೇ ಸ್ವತಂತ್ರ ರಾಜರಂತೆ ವರ್ತಿಸಹತ್ತಿದರು. ದೇಶದಾದ್ಯಂತ ಬ್ರಿಟಿಷರ ವಿರುದ್ಧ ಬಂಡಾಯದ ಬಿರುಗಾಳಿ ಬೀಸುವ ಲಕ್ಷಣಗಳು ಸ್ಪಷ್ಟವಾಗಿ ಕಂಡುಬರಹತ್ತಿದವು.

ಆಂಗ್ಲರ ವಿರುದ್ಧ ಭಾರತೀಯರಿಗೆ ಅಸಂತೋಷ ಉಂಟಾಗಲು ಇನಾಮ ಕಮೀಷನ್ ಕಾರಣೀಭೂತವಾಯಿತು. ಈ ಪೂರ್ವದಲ್ಲಿ ಪೇಶ್ವೆಯವರು ತನ್ನ ನಿಷ್ಠ ಸೇವಕರಿಗೆ ಕಂದಾಯ ವಸೂಲಿ ಮಾಡುವ ದೇಸಾಯಿ, ದೇಶಪಾಂಡೆ, ದೇಶಮುಖ, ಪಾಟೀಲ, ಕುಲಕರ್ಣಿ, ನಾಡಗೌಡಕಿ ಹುದ್ದೆಗಳನ್ನಿತ್ತು, ಕೆಲ ಭೂಮಿಗಳನ್ನು ಅಂದರೆ ವತನಗಳನ್ನು ನೀಡಿದ್ದರು. ಇದರ ಜೊತೆ ಇವರಿಗೆ ಆತ್ಮರಕ್ಷಣೆ ಮಾಡಿಕೊಳ್ಳಲು ಸಣ್ಣ ಪ್ರಮಾಣದಲ್ಲಿ ಸೈನ್ಯವನ್ನು ಇಟ್ಟುಕೊಳ್ಳಲು ಅಧಿಕಾರವನ್ನು ನೀಡಿದ್ದರು. ಪ್ರಸಂಗ ಬಂದಾಗ ಈ ದೇಸಾಯಿ ದೇಶಪಾಂಡೆ ಅವರು ತಮ್ಮ ಒಡೆಯರಿಗೆ ಸೈನಿಕ ಸಹಾಯವನ್ನು ಒದಗಿಸುತ್ತಿದ್ದರು.

ಪೇಶ್ವೆಯವರಿಂದ ನಾಡಿನ ಆಡಳಿತವು ಪೂರ್ಣವಾಗಿ ಬ್ರಿಟಿಷರ ಕೈಗೆ ಬಂದೊಡನೆ ಅವರು ಮಾಮಲೇದಾರ, ಕಲೆಕ್ಟರ, ಶೇಕಸನದಿ ಮೊದಲಾದ ಹುದ್ದೆಗಳನ್ನು ಸೃಷ್ಟಿಸಿ ಅವರಿಂದ ಕರವಸೂಲಿಯನ್ನು ನೇರವಾಗಿ ಮಾಡತೊಡಗಿದರು. ಸೈನ್ಯವನ್ನು ಕೂಡ ಸರದಾರ ಸುಭೇದಾರರ ಮೊದಲಾದವರ ಕೈ ತಪ್ಪಿಸಿ ತಾವೇ ನೇರವಾಗಿ ತಮ್ಮ ಅಧೀನಕ್ಕೆ ತೆಗೆದುಕೊಳ್ಳತೊಡಗಿದರು.

ಕಂದಾಯ ವಸೂಲಿ ಪದ್ಧತಿಯಲ್ಲಿ ಆಮೂಲಾಗ್ರವಾಗಿ ಬದಲಾವಣೆಯಾದೊಡನೆ, ಮುಲ್ಕಿ ಅಧಿಕಾರಿಗಳ ಕಂದಾಯ ವಸೂಲಿ ಮಾಡುತ್ತಿದ್ದ ದೇಸಾಯಿ ದೇಶಪಾಂಡೆ ದೇಶಮುಖರ ವರ್ಚಸ್ಸು ಕಡಿಮೆಯಾಯಿತು.

ಪೇಶ್ವೆಯವರ ಪತನಾನಂತರ ಉದ್ಭವಿಸಿದ ಅರಾಜಕತೆಯಲ್ಲಿ, ಜಹಗೀರದಾರರು ನಾಡಗೌಡರು, ಇನಾಮದಾರರು ತಮ್ಮ ಅಧಿಕಾರ ನಡೆಯುವಲ್ಲೆಲ್ಲ ಅನಧಿಕೃತವಾಗಿ ಸಾಕಷ್ಟು ಜಮೀನುಗಳನ್ನು ತಮ್ಮ ಹೆಸರಿಗೆ ಮಾಡಿಕೊಂಡರು. ಈ ಸುದ್ದಿ ಕಂಪನಿ ಅಧಿಕಾರಿಗಳ ಕಿವಿಗೆ ಬಿದ್ದೊಡನೆ ಅವರು ಎಚ್ಚೆತ್ತರು. ಸರಕಾರಿ ನೌಕರಿ ಮಾಡದ ಈ ಮುಲ್ಕಿ ಅಧಿಕಾರಿಗಳಿಂದ ಇನಾಮು ಮತ್ತು ವತನಿ ಭೂಮಿಗಳನ್ನು ಕಸಿದುಕೊಳ್ಳಬೇಕೆಂದು ಕೆಲವರು ಸರಕಾರಕ್ಕೆ ಸಲಹೆ ಮಾಡಿದರು. ಹಾಗೆ ಮಾಡಿದರೆ ಜನರಲ್ಲಿ ಸರಕಾರದ ವಿರುದ್ಧ ಅಸಂತೋಷ ಉಂಟಾಗಬಹುದೆಂದು ಬೇರೆ ಕೆಲವರು ಸರಕಾರವನ್ನು ಅಂಜಿಸಿದರು. ಕಂಪನಿ ಸರಕಾರವು ವತನಗಳನ್ನು ಮರಳಿ ಪಡೆಯಬೇಕು ಮತ್ತು ಯಾರ ವತನಗಳನ್ನು ಹಾಗೆಯೇ ಬಿಡಬೇಕು ಅನ್ನುವುದನ್ನು ವಿಚಾರಿಸಲು ಕರ್ನಲ್ ಏಥ್ರಿಲ್ ಅನ್ನುವ ಅಧಿಕಾರಿಯ ಅಧ್ಯಕ್ಷತೆಯಲ್ಲಿ ಒಂದು ಆಯೋಗವನ್ನು ನಿಯಮಿಸಿತು. ಇದೇ ಇನಾಮ ಕಮೀಷನ್ ಎಂದು ಇತಿಹಾಸ ಪ್ರಸಿದ್ಧವಾಯಿತು. ಈ ಕಮೀಶನ್ನು ಕ್ರಿ.ಶ. ೧೮೪೩ ರಿಂದ ೧೮೫೨ ರ ವರೆಗೆ ಹದಿನಾಲ್ಕು ವರುಷ ಕೆಲಸ ಮಾಡಿತು. ಈ ಆಯೋಗದಲ್ಲಿ ಕಾನೂನು ತಜ್ಞರು ಯಾರು ಇರಲಿಲ್ಲ. ಇದ್ದವರೆಲ್ಲರೂ ಸೈನ್ಯಾಧಿಕಾರಿಗಳು. ಇವರಿಗೆ ಕಂಪನಿ ಸರಕಾರದ ಆದಾಯವನ್ನು ಹೆಚ್ಚಿಸಬೇಕೆಂಬ ಉದ್ದೇಶವಿತ್ತೇ ವಿನಃ ಇದರಿಂದ ಆಗುವ ಸಾಮಾಜಿಕ ನ್ಯಾಯ ಅನ್ಯಾಯಗಳ ಬಗ್ಗೆ ಎಳ್ಳಷ್ಟೂ ಕಾಳಜಿ ಇರಲಿಲ್ಲ.

ಈ ಕಾನೂನು ಜಾರಿಗೆ ಬಂದೊಡನೆ ಅನೇಕ ಜಮೀನುದಾರರು ಕೈಕಾಲು ಕಳೆದುಕೊಂಡರು. ಇದರಿಂದ ಹಮ್ಮಿಗಿ ಕೆಂಚನಗೌಡರು, ಡಂಬಳದ ಬಹದ್ದೂರ ದೇಸಾಯರು ಮತ್ತು ನರಗುಂದದ ಬಾಬಾಸಾಹೇಬನು ಸೇರಿ ಉತ್ತರ ಹಿಂದೂಸ್ತಾನದಂತೆ ಮೇ ೧೮೫೨ ರಲ್ಲಿ ಒಂದೇ ಕಾಲಕ್ಕೆ ಬಂಡಾಯವನ್ನು ಹೂಡಬೇಕೆಂದು ನಿರ್ಧರಿಸಿದರು.

ಬಳ್ಳಾರಿ ಕಲೆಕ್ಟರನು ಧಾರವಾಡದ ಕಲೆಕ್ಟರನಿಗೆ ೧–೮–೧೮೫೭ ರಂದು ಒಂದು ಪತ್ರವನ್ನು ಬರೆದು ಮುಂಡರಗಿ ಭೀಮರಾಯರು ಮತ್ತು ಸೊರಟೂರ (ಡಂಬಳ) ದೇಸಾಯರು ಕೂಡಿಕೊಂಡು ಡಂಬಳದಲ್ಲಿ ಕೆರೆಕಟ್ಟುವ ನೆಪವನ್ನು ಮಾಡಿ, ೩–೪ ನೂರು ಜನರನ್ನು ಸೇರಿಸಿ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸುತ್ತಿರುವರೆಂದು



ಸುದ್ದಿ ಬಂದಿದೆ ಎಂದು ತಿಳಿಸಿದನು. ಅಷ್ಟರಲ್ಲಿ ಕೋಲ್ಲಾಪುರದಲ್ಲಿ ೨೯ನೇ ಹಿಂದಿ ಕಾಲ್ದಳವು ಬಂಡೆದ್ದಿದೆ ಎಂಬ ವಾರ್ತೆ ಧಾರವಾಡಕ್ಕೆ ಬಂದಿತು. ಧಾರವಾಡದ ಕಲೆಕ್ಟರನು ಬಳ್ಳಾರಿಯ ಕಲೆಕ್ಟರನ ಸಂದೇಶದ ಮೇಲಿಂದ ಗಾಬರಿಯಾಗಿ ಮುಂಡರಗಿ ಭೀಮರಾಯರನ್ನು ಮತ್ತು ಡಂಬಳ ಶ್ರೀನಿವಾಸ ವೆಂಕಟಾದ್ರಿ ದೇಸಾಯರನ್ನು ಧಾರವಾಡಕ್ಕೆ ಕರೆಸಿ ಅವರಿಂದ ಜವಾಬನ್ನು ಬರೆಸಿಕೊಂಡನು. ಇವರಿಬ್ಬರೂ ತಾವು ಬ್ರಿಟಿಷರಿಗೆ ರಾಜನಿಷ್ಠರಾಗುವೆವೆಂದು ಕಲೆಕ್ಟರ ಮಿ. ಆಗಿಲ್ವೆನಿಗೆ ನಂಬಿಕೆಯಾಗುವಂತೆ ನಟಿಸಿದರು. ಇವರ ಮಾತಿನಿಂದ ಕಲೆಕ್ಟರನ ಸಂದೇಹ ಪರಿಹಾರವಾಯಿತು. ಅವರಿಗೆ ಮರಳಿ ಹೋಗಲು ಹೇಳಿದನು.

ಹಿಂದಿ ಕಾಲ್ದಳದವರ ಬಳಿ ೧೮೫೭ ಆಗಸ್ಟ್ ೭ ರಂದು ಒಂದು ಪತ್ರ ದೊರೆಯಿತು. ಅದರಲ್ಲಿ ಸ್ವೈಪಂಡರಿ ಸಿಪಾಯಿಗಳನ್ನು ಸೇರಿಸಿಕೊಂಡು ಬಂಡಾಯವನ್ನು ಹೂಡಿ ಬಿಳಿಯರ ಸಾಮೂಹಿಕ ಕೊಲೆ ಮಾಡಿ ಖಜಾನೆಯನ್ನು ಲೂಟಿ ಮಾಡಬೇಕೆಂದು ಬರೆದಿತ್ತು. ಆ ಪ್ರಕಟಣೆಯಲ್ಲಿ ಪತ್ರ ಬರೆದವರ ಹೆಸರಿರಲಿಲ್ಲ. ಅದನ್ನು ನೋಡಿ ಅಂಜಿದ ಕಲೆಕ್ಟರ ಮಿ. ಆಗಿಲ್ವೆ ಮದ್ರಾಸಕ್ಕೆ ಒಂದು ತುರ್ತು ಸಂದೇಶವನ್ನು ಕಳಿಸಿ ಬಿಳಿ ಸೈನಿಕರ ಸಹಾಯವನ್ನು ಕೋರಿದನು. ಆಗಸ್ಟ್ ೨೨ ರಂದು ಎರಡನೆಯ ಕಾಲ್ದಳದ ಐವತ್ತು ಯುರೋಪಿಯನ್ ಸೈನಿಕರು ಮುಂಬೈಯಿಂದ ಹುಬ್ಬಳ್ಳಿಗೆ ಬಂದರೂ ಧಾರವಾಡದ ಕಲೆಕ್ಟರನು ಇಷ್ಟಕ್ಕೆ ಶಾಂತನಾಗದೆ ಎಲ್ಲ ಯುರೋಪಿಯನ್ನರನ್ನು ಮತ್ತು ಕ್ರಿಶ್ಚಿಯನ್ನರನ್ನು ಧಾರವಾಡ ಕಿಲ್ಲೆಗೆ ಬಂದು ರಕ್ಷಣೆಯನ್ನು ಪಡೆಯಬೇಕೆಂದು ತಿಳಿಸಿದನು. ಆಗಸ್ಟ್ ಮೊದಲನೆಯ ವಾರದಲ್ಲಿ ಸವಣೂರಿನ ನವಾಬರಾಗಿದ್ದ ಅಬ್ದುಲ್ ದಿಲೇರಖಾನನನ್ನು ಮತ್ತು ನರಗುಂದ ಸಂಸ್ಥಾನಿಕರಾಗಿದ್ದ ಬಾಬಾಸಾಹೇಬ ಬಾವೆ ಅವರನ್ನು ಕರೆಸಿಕೊಂಡು ಧಾರವಾಡ ಜಿಲ್ಲೆಯ ರಾಜಕೀಯ ಸ್ಥಿತಿಗತಿಗಳನ್ನು ಕುರಿತು ವಿವರವಾಗಿ ಚರ್ಚಿಸಿದನು. ಬಾಬಾಸಾಹೇಬನು "ಸಾಹೇಬರೆ ನೀವೆಲ್ಲಿ ಹೋಗುವಿರೋ ಅಲ್ಲಿ ನನಗೊಂದು ಗುಡಾರವನ್ನು ಹಾಕಿಸಿ ನಾನಲ್ಲಿಯೇ ಬಂದು ಇರುತ್ತೇನೆ." ಅಷ್ಟು ಮಾತನಾಡಿ ತಾನು ಬಂಡೇಳುವುದಿಲ್ಲವೆಂದು ಕಲೆಕ್ಟರನನ್ನು ನಂಬಿಸಿ ಬಂದನು.

ಧಾರವಾಡದಲ್ಲಿದ್ದ ಕಾಫ್‌ಮನ್ ಅನ್ನುವ ಜರ್ಮನ್ ಪಾದ್ರಿಯು ಕಲೆಕ್ಟರನಿಗೆ ಒಂದು ಪತ್ರವನ್ನು ಬರೆದು "ದಕ್ಷಿಣ ಧಾರವಾಡ ಭಾಗದ ಬ್ರಾಹ್ಮಣರು ಮತ್ತು

ಮುಸಲ್ಮಾನರು ಸೇರಿ ಕಂಪನಿ ಸರಕಾರದ ವಿರುದ್ಧ ಬಂಡೇಳುವ ಸನ್ನಾಹದಲ್ಲಿ ಇರುವರು. ಮರಾಠರು, ಹಿಂದುಗಳು ಮೊಗಲ ಸಿಂಹಾಸನದ ಪುನರ್ ಪ್ರತಿಷ್ಠಾಪನೆಗೆ ಮತ್ತು ಮುಸಲ್ಮಾನರು ಪೇಶ್ವ ರಾಜ್ಯ ಸ್ಥಾಪನೆಗೆ ಒಂದೆಡೆ ಕೂಡಿ ಬಂಡನ್ನು ಹೂಡುವರೆಂಬ ವಾರ್ತೆ ಬಂದಿದೆ. ದಸರೆ ಹಬ್ಬಕ್ಕೆ ಧೋಂಡೋ ಪಂತ ನಾನಾ ಪೇಶ್ವೆ ಅವರು ಪುಣೆಗೆ ಬರುವರಂತೆ. ಆಗ ಈ ಬಂಡಿನ ಗಾಳಿ ಎಲ್ಲ ಕಡೆಗೆ ಬೀಸಲಿದೆ ಎಂದು ತಿಳಿದಿದೆ' ಎಂದು ತನಗೆ ತಿಳಿದಿದ್ದನ್ನು ಸರಕಾರದ ಗಮನಕ್ಕೆ ತಂದನು. ಇದರಿಂದ ಕಲೆಕ್ಟರ ಮಿ. ಆಗಿಲ್ವೇನ ಸಂಶಯವು ಮುಂಡರಗಿ ಭೀಮರಾಯರ ಮತ್ತು ಡಂಬಳ ದೇಸಾಯರ ಮೇಲೆ ಬಲವಾಗಹತ್ತಿತು. ರಂಗರಾಯರ ಮಗನಿಗೆ ಇಂಗ್ಲೀಷ ಶಿಕ್ಷಣವನ್ನು ಕಲಿಸಿ ಸರಕಾರಿ ನೌಕರಿಗೆ ಹಚ್ಚಿದರು. ಭೀಮರಾಯರ ವಿದ್ವತ್ತನ್ನು ನೋಡಿ ಬಳ್ಳಾರಿ ಕಲೆಕ್ಟರನು ಇವರನ್ನು ಮಾಮಲೇದಾರರೆಂದು ನಿಯಮಿಸಿಕೊಂಡು ಹೂವಿನಹಡಗಲಿಗೆ ಕಳಿಸಿದನು. ನೌಕರಿ ದೊರೆಯುವ ಪೂರ್ವದಲ್ಲಿ ರಂಗರಾಯರು ಮಗನನ್ನು ಕರಕೊಂಡು ಬಳ್ಳಾರಿ ಕಲೆಕ್ಟರ ಬಳಿ ಹೋದರು. ಆಗ ಕಲೆಕ್ಟರು ಭೀಮರಾಯರ ಯೋಗ್ಯತೆಯನ್ನು ಪರೀಕ್ಷಿಸಲು ಏಳೆಂಟು ವರುಷಗಳಿಂದಲೂ ಕಂದಾಯವೇ ವಸೂಲಾಗದ ನೆಲ್ಲೂರಿಗೆ ಕಂದಾಯ ವಸೂಲಿಗೆ ಕಳಿಸಿದನು. ಅಲ್ಲಿಯ ರೈತರು ಕಂದಾಯವನ್ನೇ ಕೊಟ್ಟಿರಲಿಲ್ಲ. ಭೀಮರಾಯರು ಕುದುರೆ ಏರಿ ನೆಲ್ಲೂರಿಗೆ ಹೋಗಿ ರೈತರನ್ನು ಅಂಜಿಸಿ ಕಂದಾಯವನ್ನು ವಸೂಲು ಮಾಡಿ ಹಣದ ಪೆಟ್ಟಿಗೆಯನ್ನು ಬಳ್ಳಾರಿಗೆ ತಂದಾಗ ಕಲೆಕ್ಟರನಿಗೆ ಆಶ್ಚರ್ಯ. ಆಗಲೇ ಇವರನ್ನು ಮಾಮಲೇದಾರರೆಂದು ನಿಯಮಿಸಿದನು. ತಾರುಣ್ಯದಲ್ಲಿ ಭೀಮರಾಯರು ಒಳ್ಳೇ ಅಶ್ವ ಸವಾರರಾಗಿದ್ದರು. ಅವರು ಶ್ರೇಷ್ಠ ಜಾತಿಯ ಅಶ್ವಗಳನ್ನು ಸಾಕುತ್ತಾರೆ ಅನ್ನುವುದನ್ನು ಯುರೋಪಿಯನ್ ಅಧಿಕಾರಿಗಳು ಬಂದು ಕುತೂಹಲದಿಂದ ನೋಡಿಹೋಗುತ್ತಿದ್ದರು. ಭೀಮರಾಯರು ಹಾರುವ ಹಕ್ಕಿಗೆ ಗುಂಡಿಟ್ಟು ಕೊಲ್ಲುವುದನ್ನು ನೋಡಿ ಅವರ ಗುರಿಯನ್ನು ಯುರೋಪಿಯನ್ನರು ಮೆಚ್ಚುತ್ತಿದ್ದರು. ಭೀಮರಾಯರು ಮೇಲಿನ ಯುರೋಪಿಯನ್ ಅಧಿಕಾರಿಗಳೊಡನೆ ಭಿನ್ನಾಭಿಪ್ರಾಯಗಳನ್ನು ತಾಳುತ್ತಿದ್ದರು. ಅಂತಲೇ ಇಂತಹ ಒಂದು ಕಹಿ ಪ್ರಸಂಗದಲ್ಲಿ ನೌಕರಿಗೆ ರಾಜಿನಾಮೆ ಕೊಟ್ಟು ತಮ್ಮೂರಾದ ಬೆಣ್ಣಿಹಳ್ಳಿಗೆ ಬಂದು ನೆಲಸಿದರು.



ಬೆಣ್ಣಿಹಳ್ಳಿ ಮತ್ತು ಹೈತಾಪುರ ಹಳ್ಳಿಗಳು ಪೂರ್ಣವಾಗಿ ಭೀಮರಾಯರ ಇನಾಮ ಹಳ್ಳಿಗಳಾಗಿದ್ದವು. ಭೀಮರಾಯರು ಪ್ರಾಯಶಃ ೧೮೫೭–೫೮ ರಲ್ಲಿ ಬೆಣ್ಣಿಹಳ್ಳಿಗೆ ಬಂದಿರಬೇಕು. ಆಗ ದೇಶದಲ್ಲಿ ಬಂಡೇಳುವ ಮಾತುಗಳು ಕೇಳಿಬರುತ್ತಿದ್ದವು. ಬ್ರಿಟಿಷರು ಭಾರತೀಯರನ್ನು ಶೋಷಿಸುತ್ತಿದ್ದರಿಂದಲೇ ಅವರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿ ತೀರಾ ಶೋಚನೀಯವಾಗಿತ್ತು. ದೇಶದಾದ್ಯಂತ ಜನರಲ್ಲಿ ದ್ವೇಷಾಗ್ನಿ ಹೊತ್ತಿ ಉರಿಯಹತ್ತಿತ್ತು.

ಭೀಮರಾಯರು ಮತ್ತು ಡಂಬಳದ ಅರ್ಥಾತ್ ಸೊರಟೂರ ದೇಸಾಯರಾಗಿದ್ದ ಶ್ರೀನಿವಾಸ ವೆಂಕಟಾದ್ರಿ ದೇಸಾಯರು ಆಪ್ತಮಿತ್ರರಾಗಿದ್ದರು. ಭೀಮರಾಯರ ವಂಶದವರು ತಮ್ಮ ನಾಡಗೌಡಿಕೆ ಜೊತೆ ಡಂಬಳ ದೇಸಾಯರ ಮುತಾಲಿಕರೂ ಆಗಿದ್ದರು. ಡಂಬಳವನ್ನು ಬಿಟ್ಟು ಸೊರಟೂರಿಗೆ ಹೋಗಿದ್ದ ಶ್ರೀನಿವಾಸ ವೆಂಕಟಾದ್ರಿಯವರು ಈಗ ಪುನಃ ಡಂಬಳಕ್ಕೆ ಬಂದಿದ್ದರು. ಮುಂಡರಗಿ ಭೀಮರಾಯರು ಡಂಬಳ ದೇಸಾಯರು, ನರಗುಂದ ಸಂಸ್ಥಾನಿಕರಾಗಿದ್ದ ಬಾಬಾಸಾಹೇಬ ಭಾವೆ, ಹಮ್ಮಿಗಿ ಕೆಂಚನಗೌಡರು ಸೇರಿ ಧಾರವಾಡ ಜಿಲ್ಲೆಯಲ್ಲಿ ಬಂಡೇಳಲು ಬಂದು ಷಡ್ಯಂತ್ರ ಜಾಲವನ್ನೇ ರಚಿಸಿದರು.' ಮುಂಡರಗಿ ಭೀಮರಾಯರು ಹೇಗೆ ಬಂಡಾಯದ ಸಿದ್ಧತೆಗಳನ್ನು ಮಾಡಿದರು ಅನ್ನುವುದನ್ನು ಅವರ ಕಾರಕೂನನಾಗಿದ್ದ ಭೀಮರಾವ ಗುಮಾಸ್ತ ಅನ್ನುವವನು ರಾಯಚೂರಿನ ಡೆಪ್ಯೂಟಿ ಕಮೀಶನರರ ಮುಂದೆ ಹೇಳಿಕೆಯೊಂದನ್ನು ನೀಡಿದನು. ಆ ಹೇಳಿಕೆಯಲ್ಲಿ ಅನೇಕ ಸಂಗತಿಗಳು ಹೊರಬಂದಿವೆ.

"೪–೬–೧೮೫೮ ಮೂರು ತಿಂಗಳ ಹಿಂದೆ ನರಗುಂದ ಸಂಸ್ಥಾನಿಕರು ಬಂಡೇಳುವ ಪ್ರಸ್ತಾವಣೆಯನ್ನು ಮಾಡಿದನು. ಅವರು ಮೊದಲು ಡಂಬಳದ ದೇಸಾಯರನ್ನು (ಶ್ರೀನಿವಾಸ ವೆಂಕಟಾದ್ರಿ) ಮತ್ತು ಹಮ್ಮಿಗಿ ದೇಸಾಯಿ ಕೆಂಚನಗೌಡರೊಡನೆ ಸಮಾಲೋಚಿಸಿದರು. ಈ ನಾಲ್ವರು ಸಭೆಯಲ್ಲಿ ಮುಂಡರಗಿ ಭೀಮರಾಯರು ಬಂಡೇಳುವ ಸಾಧ್ಯತೆಗಳಿವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಅಲ್ಲದೆ, ನರಗುಂದ ಬಾಬಾಸಾಹೇಬರು, ತೊರಗಲ್ಲ ರಾಜರು ಹಾಗೂ ಮತ್ತೆ ಕೆಲವರು ಸೈನಿಕ ಸಹಾಯವನ್ನು ನೀಡಲು ಒಪ್ಪಿರುವದರಿಂದ ನಮ್ಮ ಸೈನ್ಯವು ದೊಡ್ಡದಾಗುವುದು ಎಂದೂ ಅವರು ಹೇಳಿದರು. ತಕ್ಷಣ ಡಂಬಳದ ದೇಸಾಯರು ಜನರನ್ನು ಸಂಗ್ರಹಿಸಹತ್ತಿದರು. ಭೀಮರಾಯರು

ಹೊಸಪೇಟೆ ಕಮಲಾಪುರಗಳಲ್ಲಿ ಜನರನ್ನು ಸೇರಿಸಹತ್ತಿದರು. ಸೈನ್ಯ ಸಂಗ್ರಹಣೆ ಹೆಚ್ಚಾದಂತೆ ಭೀಮರಾಯರು ಕೊಪ್ಪಳ ಪೊಲೀಸ್ ಠಾಣೆಯನ್ನು ವಶಪಡಿಸಿಕೊಳ್ಳುವ ವಿಚಾರದಲ್ಲಿ ಮುಳುಗಿದರು.

ಎರಡು ತಿಂಗಳ ಹಿಂದೆ ಭೀಮರಾಯರು ಪವಾರ ಭರಮನಾಯಕನ ಮಗನಿಗೆ ಬಂದು ಭೆಟ್ಟಿಯಾಗಲು ಹೇಳಿಕಳಿಸಿದರು. ಅವನು ಬಂದಾಗ ಅವನಿಗೆ ಮೋಸ ಮಾಡಿದರೂ ಚಿಂತೆ ಇಲ್ಲ ಕೊಪ್ಪಳ ಕೋಟೆಯನ್ನು ವಶಪಡಿಸಿಕೊಳ್ಳಬೇಕೆಂದು ತಿಳಿಸಿದರು.

ನರಗುಂದ ಸಂಸ್ಥಾನಿಕರಿಗೆ ಸರಕಾರವು ಶಸ್ತ್ರಾಸ್ತ್ರಗಳನ್ನು ತಂದು ಒಪ್ಪಿಸಬೇಕೆಂದು ಹೇಳಿದ್ದೇ ಮೂಲವಾಯಿತು. ಬಾಬಾಸಾಹೇಬರು ತಮ್ಮ ಸೇವಕನಾದ ಬಸಪ್ಪನನ್ನು ಭೀಮರಾಯರ ಬಳಿ ಕಳಿಸಿ ಸರಕಾರವು ನಮ್ಮೆಲ್ಲ ಶಸ್ತ್ರಾಸ್ತ್ರಗಳನ್ನು ಒಪ್ಪಿಸಲು ಆಜ್ಞೆಯನ್ನು ಮಾಡಿದ್ದಾರೆ. ನಮ್ಮ ಪೂರ್ವಜರು ಸಂಗ್ರಹಿಸಿದ ಇವುಗಳನ್ನು ನಾವು ಒಪ್ಪಿಸಿದರೆ ನಮ್ಮ ಗತಿ ಏನು? ನಾವು ಮುಂದೆ ಏನು ಮಾಡಬೇಕು? ಎಂದು ತಿಳಿದು ಕೊಂಡುಬರಲು ಹೇಳಿದ್ದರು. ಇದನ್ನು ಕೇಳಿದ ಮುಂಡರಗಿ ಭೀಮರಾಯರು ಹಮ್ಮಿಗಿ ಕೆಂಚನಗೌಡರೊಂದಿಗೆ ಸಮಾಲೋಚಿಸಿ, ನಮಗೂ ಈ ಗತಿ ಬಂದರೆ ನಾಳೆ ನಾವು ಏನು ಮಾಡಬೇಕು? ಎಂದು ವಿಚಾರಿಸಿ ಕೊನೆಗೆ ನರಗುಂದ ಬಾಬಾಸಾಹೇಬರಿಗೆ ಸಹಾಯ ಮಾಡಬೇಕೆಂದು ನಿರ್ಧರಿಸಿದರು.

ನರಗುಂದ ಬಾಬಾಸಾಹೇಬರು ಈ ಬಂಡಿಗೆ ಮೂಲಪ್ರೇರಣೆಯಾದರು. ತೊರಗಲ್ಲ ರಾಜ, ಡಂಬಳದ ದೇಸಾಯಿ ವೆಂಕಪ್ಪಯ್ಯ (ಶ್ರೀನಿವಾಸ), ಹಮ್ಮಿಗಿ ದೇಸಾಯಿ ಮತ್ತು ಭೀಮರಾಯರನ್ನು ಬಿಟ್ಟು ಬೇರಾರೂ ಈ ಬಂಡಾಯದಲ್ಲಿದ್ದ ವಿಚಾರ ನನಗೆ ಗೊತ್ತಿಲ್ಲ. ನರಗುಂದ, ಬಾಬಾಸಾಹೇಬರು, ನಾನಾಸಾಹೇಬ ಪೇಶ್ವೆಯವರೊಂದಿಗೆ ಪತ್ರ ವ್ಯವಹಾರವನ್ನು ಮಾಡುತ್ತಿದ್ದರು.

ಈ ಎಲ್ಲಾ ಮುಖ್ಯಸ್ಥರೂ ಮೇ ೨೭, ೧೮೫೮ ರಂದು ಏಕಕಾಲಕ್ಕೆ ಬಂಡೇಳಬೇಕೆಂದು ನಿರ್ಧರಿಸಿದರು. ನರಗುಂದ ಬಾಬಾಸಾಹೇಬರು ನವಲಗುಂದ ಮತ್ತು ಧಾರವಾಡಗಳತ್ತ ಹೋಗಿ ದೊಡ್ಡ ದೊಡ್ಡ ಪಟ್ಟಣಗಳನ್ನು ಸುಲಿದು ನವಲಗುಂದ ಕೋಟೆಯನ್ನು ವಶಪಡಿಸಿಕೊಳ್ಳಬೇಕು. ತೊರಗಲ್ಲರಾಜನು



ತನ್ನ ಪ್ರದೇಶದಲ್ಲಿ ಕ್ಷೋಭೆಯನ್ನು ಮಾಡಬೇಕು. ಭೀಮರಾಯರು ಮತ್ತು ಹಮ್ಮಿಗಿ ಕೆಂಚನಗೌಡರು ಕೊಪ್ಪಳದ ಮೇಲೆ ದಾಳಿಯನ್ನು ಮಾಡಬೇಕು ಹಾಗೂ ಡಂಬಳದ ದೇಸಾಯಿಯವರು ಡಂಬಳ ಮತ್ತು ಗದಗಗಳಲ್ಲಿ ಸುಲಿಗೆ ಮಾಡಬೇಕು ಎಂಬ ನಿರ್ಧಾರಕ್ಕೆ ಅವರು ಬಂದರು.

ವೆಂಕಟರಾಯರು (ಸರಕಾರಿ ಅಧಿಕಾರಿ) ಮತ್ತು ಧಾರವಾಡದ ಮ್ಯಾಜಿಸ್ಟ್ರೇಟರಿಂದ ಆಜ್ಞೆ ಪಡೆದುಕೊಂಡು ಬಂದಿದ್ದ ಗದುಗಿನ ಜಂಟಿ ಪೋಲೀಸ್ ಅಧಿಕಾರಿಯು ಹಮ್ಮಿಗಿ ದೇಸಾಯರ ಬಳಿಯಿದ್ದ ಶಸ್ತ್ರಾಸ್ತ್ರಗಳನ್ನು ಜಪ್ತು ಮಾಡಲು ಬಂದೊಡನೆ ಮೇ ೨೭ಕ್ಕೆ ಪ್ರಾರಂಭವಾಗಬೇಕಿದ್ದ ಬಂಡಾಯದ ಬಿರುಗಾಳಿ ಮೇ ೨೪ಕ್ಕೆ ಬೀಸಿತು. ಸುತ್ತಲಿನ ಹಳ್ಳಿಗಳಿಂದ ಎರಡು ಮೂರು ನೂರು ಜನರನ್ನು ಕರೆದುಕೊಂಡು ಬಂದು ಹಮ್ಮಿಗಿಯ ಬಳಿಯಿದ್ದ ಕಲ್ಲುಪಡೆಯಲ್ಲಿ ನಿಲ್ಲಿಸಲಾಯಿತು. ಡಂಬಳದ ದೇಸಾಯರು ಇಲ್ಲಿಗೆ ಬಂದು ಇವರನ್ನು ಕಂಡು ಮಾತನಾಡಿಸಿ ಹೋದರು. ಅಂದು ರಾತ್ರಿ ಅಲ್ಲಿಗೆ ಯಾರೂ ಬಾರದಿದ್ದರಿಂದ ಅವರೆಲ್ಲರೂ ಮೇ ೨೫, ೧೮೫೮ ರಂದು ಕವಲೂರು ಹಳ್ಳದ ಆಚೇಗಿನ ದಂಡೆಯ ಮೇಲೆ ವಿಶ್ರಮಿಸಿದರು. ಕವಲೂರಿನ ಪಾಟೀಲ ತೋಟನಗೌಡರು ಇವರೆಲ್ಲರಿಗೂ ರೊಟ್ಟಿ ಬುತ್ತಿಗಳನ್ನು ಒದಗಿಸಿದರು. ಮರುದಿವಸ ಅವರು ಭೀಮರಾಯರನ್ನು ಕಾಣಲು ಹೋದರೆ ಅವರು ಕೊಪ್ಪಳ ಜಿಲ್ಲೆ ಕುಮಾರ ರಾಮನ ಕಮ್ಮಟದತ್ತ ಹೋದರೆಂದು ತಿಳಿಯಿತು. (೨೬–೫–೧೮೫೮) ಕಮ್ಮಟದಲ್ಲಿ ಭೀಮರಾಯರಿಗೆ ಶಿವಾಪುರದ ಕೆಂಚಪ್ಪ ಮುದ್ದಿ ಬಂದು ಭೆಟ್ಟಿಯಾಗಿ ತಾನು ಸೈನ್ಯವನ್ನು ಕೂಡಿಸಿಕೊಡುವುದಾಗಿ ಹೇಳಿದನು. ಈ ಮಾತುಗಳನ್ನು ಸ್ವತಃ ನನಗೆ ಭೀಮರಾಯರೇ ಹೇಳಿಕೊಂಡಿದ್ದಾರೆ.

ಭೀಮರಾಯರು ಭೂತಪ್ಪನ ಹಳ್ಳಿಯಿಂದ ಒಬ್ಬ ಮನುಷ್ಯನನ್ನು ಭರಮನಾಯಕ ಪವಾರನ ಬಳಿ ಕಳಿಸಿದರು. ಪವಾರನು ಭೀಮರಾಯರಿಂದ ಬಂದ ಮನುಷ್ಯನಿಗೆ “ಕೋಟೆಯ ಒಳಗೆ ವಿಶ್ವಾಸಘಾತ ಮಾಡಿ ಕೋಟೆಯನ್ನು ನಮಗೊಪ್ಪಿಸಲು ಸಿದ್ಧರಾದ ನಮ್ಮ ಜನರಿದ್ದಾರೆ ಎಂದು ಹೇಳಿ ಕಳಿಸಿದನು. ಈ ಸಂದೇಶದಿಂದ ಉತ್ಸಾಹಗೊಂಡ ಭೀಮರಾಯರು ಕೆಂಚನಗೌಡರನ್ನು ಕರೆದುಕೊಂಡು ಕೊಪ್ಪಳ ಕೋಟೆಯನ್ನು ವಶಪಡಿಸಿಕೊಂಡರು. ಭೀಮರಾಯರು ಮತ್ತು ಕೆಂಚನಗೌಡರು ಕೊಪ್ಪಳದ ಮಕ್ತುಂ ಮೋದಿನ ನಾಯಕನ ಮನೆಗೆ

ಹೋಗಿ ಬ್ರಿಟಿಷರೊಡನೆ ಹೋರಾಡಲು ತಮಗೆ ಸಹಾಯವನ್ನು ಮಾಡಬೇಕೆಂದು ಕೇಳಿಕೊಂಡರು. ಕೊಪ್ಪಳದ ಮಕ್ತುಂ ಮೋದಿನ ನಾಯಕನು ಸಹಾಯದ ಆಶ್ವಾಸನೆಯನ್ನು ನೀಡಿದರು.

ಎರಡು ತಿಂಗಳ ಹಿಂದೆ ಭೀಮರಾಯರು ಮುದ್ದಿ ಕೆಂಚಪ್ಪ ಮತ್ತು ವೆಂಕಯ್ಯನನ್ನು ಕರೆಸಿ ಶಿವಪುರ ಮತ್ತು ಅವರ ಸುತ್ತಮುತ್ತಲಿನ ಹಳ್ಳಿಯ ಜನರನ್ನು ಕರೆದುಕೊಂಡು ಯುದ್ಧಕ್ಕೆ ಬರಬೇಕೆಂದು ಹೇಳಿ ಕಳಿಸಿದರು. ಅವರು ಅನಂತರ ಮರಳಿ ಬಂದು ಸಶಸ್ತ್ರ ಸೈನಿಕರನ್ನು ಕರೆತರುವ ವ್ಯವಸ್ಥೆ ಆಗಿದೆ. ಮತ್ತು ಆನೆಗೊಂದಿ ರಾಜರು ಈ ಬಂಡಾಯವನ್ನು ಸೇರುವರೆಂದು ತಿಳಿದುಬಂದಿದೆ ಎಂದು ಹೇಳಿದರು. ಇದನ್ನು ಕೇಳಿದ ಭೀಮರಾಯರು ತಮ್ಮ ಕಾರಕೂನನಾದ ನರಹರಿಯನ್ನು ಆನೆಗೊಂದಿಗೆ ಕಳಿಸಿ ವಿಷಯ ತಿಳಿದು ಬರಲು ಹೇಳಿದರು. ಆನೆಗೊಂದಿ ರಾಜನು ತಮ್ಮ ಜಮೇದಾರನನ್ನು ಬೆಣ್ಣಿಹಳ್ಳಿಗೆ ಕಳಿಸಿ ಭೀಮರಾಯರ ಜೊತೆ ವಿಚಾರ ವಿನಿಮಯ ಮಾಡಿದನು. ಆನೆಗೊಂದಿ ಪ್ರತಿನಿಧಿಯು ಗಂಗಾವತಿ ಮುಸಲ್ಮಾನರ ಜೊತೆ ಒಳಸಂಚು ಮಾಡಿ ಭೀಮರಾಯರು ಕೊಪ್ಪಳ ಕೋಟೆಗೆ ಹೋಗುವಂತೆ ಮಾಡಿದನು. ಅಲ್ಲದೆ ಅವನು ಕೊಪ್ಪಳ ಪೊಲೀಸ ಠಾಣೆಯನ್ನು ತೆಗೆದುಕೊಳ್ಳುವ ಪೂರ್ಣ ಯೋಜನೆಯನ್ನು ಸಿದ್ಧಪಡಿಸಿದನು. ಭೀಮರಾಯರು ಗಂಗಾವತಿಗೆ ಹೋಗಲು ಸಿದ್ಧತೆ ನಡೆಸಿದಾಗ ಅವರ ಕುಟುಂಬವು ಕೊಪ್ಪಳಕ್ಕೆ ಬಂದ ಸುದ್ದಿ ಬಂದಿತು ಹೀಗಾಗಿ ಭೀಮರಾಯರು ಅತ್ತಹೋದರು.

ಮೂರು ತಿಂಗಳ ಹಿಂದೆ ಬಂದ ನರಗುಂದದ ಬಾಬಾಸಾಹೇಬನ ಪ್ರತಿನಿಧಿ ಸಾವಕಾರ ಬಸಪ್ಪನು ಧಾರವಾಡ, ಬೆಳಗಾವಿ ಮತ್ತು ಕಲಾದಗಿಯಲ್ಲಿ ಅಶ್ವಸವಾರರು ಸಿದ್ಧರಾಗಿ ನಿಂತಿರುವರೆಂದು ಹೇಳಿದನು. ಸಕಲ ಸಿದ್ಧತೆಗಳು ಪೂರ್ಣಗೊಂಡಂತಾಗಲು ಸಾವಕಾರ ಬಸಪ್ಪನನ್ನು ಮತ್ತು ನರಗುಂದದ ಬಾಬಾಸಾಹೇಬ ಮತ್ತು ಡಂಬಳ ದೇಸಾಯರ ಕಡೆ ಕಳಿಸಿ ಶಾಂತಿಯನ್ನು ಕದಡಲು ದೊಂಬಿಯನ್ನು ಎಬ್ಬಿಸುವಂತೆ ಹೇಳಿಕಳಿಸಿದರು. ಭೀಮರಾಯರು ಹೊಸಪೇಟೆ ಮತ್ತು ಕಮಲಾಪುರ ಜನರನ್ನು ಕರೆತರಲು ಠಾಕೂರ ಅನ್ನುವವನಿಗೆ ೫೦೦ ರೂಪಾಯಿ ಕೊಟ್ಟು ಕಳಿಸಿದರು."



ಭೀಮರಾಯನು ರಾಯಚೂರಿನ ಕಲೆಕ್ಟರರ ಸಮ್ಮುಖದಲ್ಲಿ ಸ್ವಯಂ ಸ್ಫೂರ್ತಿಯಿಂದ ಮೇಲಿನಂತೆ ಹೇಳಿಕೆ ನೀಡಿದ್ದಾನೆ.

ಮುಂಡರಗಿ ಭೀಮರಾಯರ ಕಾರಕೂನ ಭೀಮರಾಯನ ಹೇಳಿಕೆ ನೋಡಿದರೆ ಭೀಮರಾಯರು ವ್ಯವಸ್ಥಿತವಾಗಿ ಬಂಡೇಳಲು ಸಾಕಷ್ಟು ಸಿದ್ಧತೆಗಳನ್ನು ಮಾಡಿಕೊಂಡಿದ್ದರೆಂದು ತಿಳಿಯುತ್ತದೆ.

ಮಿರಜ ಸಂಸ್ಥಾನ ಮತ್ತು ಧಾರವಾಡ ಜಿಲ್ಲೆಯಲ್ಲಿದ್ದ ಅದರ ತಾಲೂಕಿನ ಕೇಂದ್ರಸ್ಥಳವಾದ ಗುಡಗೇರಿ ಮಧ್ಯ ರಹಸ್ಯ ಪತ್ರಗಳು ಓಡಾಡುತ್ತವೆಂದು ಕಮೀಶನರಾಗಿದ್ದ ಮೇಜರ ಜನರಲ್ ಜೇಕಬ್ ಮತ್ತು ಪೋಲಿಟಿಕಲ್ ರೆಸಿಡೆಂಟನಾಗಿದ್ದ ಕೊಲ್ಲಾಪುರದ ಮ್ಯಾನ್ಸನ್‌ನಿಗೆ ತಿಳಿದು ಬಂದಿದ್ದರಿಂದ ಅವರು ಧಾರವಾಡದ ಪೋಲಿಸ ಅಧಿಕಾರಿ ಥಾಮಸನಿಗೆ ತಿಳಿಸಿದರು. ಥಾಮಸನು ಮೇ ೨೨, ೧೮೫೮ ರಂದು ಕಳಸಕ್ಕೆ ಹೋಗಿ ಅಲ್ಲಿದ್ದ ಗುಡಗೇರಿ ಮಾಮಲೇದಾರರ ಕಾಗದ ಪತ್ರಗಳನ್ನೆಲ್ಲ ಪರಿಶೀಲಿಸಿದನು. ಅದರಿಂದ ಬಂಡೇಳಲು ಹಮ್ಮಿಗಿ ಮತ್ತು ಲಕ್ಷ್ಮೇಶ್ವರದಲ್ಲಿ ಗಂಧಕ ಮದ್ದು ಮತ್ತು ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿ ಇಟ್ಟಿರುವರೆಂದು ತಿಳಿದು ಬಂದಿತು. ತಕ್ಷಣ ಮಿ. ಥಾಮಸ್‌ನು ಡಂಬಳದ ಫೌಜದಾರನಿಗೆ ಡಂಬಳಕ್ಕೆ ಹೋಗಿ ಝಡತಿ ಮಾಡಬೇಕೆಂದು ತುರ್ತು ಸಂದೇಶವನ್ನು ಕಳಿಸಿದನು. ಫೌಜದಾರನು ತನ್ನ ಆರು ಜನ ಪೋಲಿಸರೊಂದಿಗೆ ಹಮ್ಮಿಗಿಗೆ ಹೋದನು. ಯಾರೋ ದೇಶದ್ರೋಹಿಗಳು ಹಮ್ಮಿಗಿ ದೇಸಾಯರ ವಾಡೆಯಲ್ಲಿ ಸಂಗ್ರಹಿಸಿ ಇಟ್ಟಿದ್ದಾರೆ. ಎಂದು ಹೇಳಿದರು ಸರಿ, ಫೌಜದಾರನು ದೇಸಾಯರ ವಾಡೆಯನ್ನು ಶೋಧಿಸಿ, ಅಲ್ಲಿ ಸಂಗ್ರಹಿಸಲ್ಪಟ್ಟಿದ್ದ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡು ಅವುಗಳ ಪಟ್ಟಿಮಾಡಿ ಅವನ್ನು ಬ್ರಿಟಿಷ ಮಾಮಲೇದಾರರಿಗೆ ಒಪ್ಪಿಸಿದನು.

ಥಾಮಸ್‌ನ್ನು ಹಮ್ಮಿಗಿಗೆ ಬಂದಮೇಲೆ ಈ ಬಂಡಾಯದಲ್ಲಿ ಭೀಮರಾಯರ ಮತ್ತು ಹಮ್ಮಿಗೆ ಕೆಂಚನಗೌಡರ ಕೈವಾಡವಿದೆಯೆಂದು ನಿರ್ಧರಿಸಿ ಸಿಟ್ಟಿನಿಂದ ಅರಮನೆಯಂತಹ ಹಮ್ಮಿಗಿ ದೇಸಾಯರ ವಾಡೆಗೆ ಬೆಂಕಿ ಇಡಿಸಿದನು. ನಂತರ ಹಲವಾರು ಯುರೋಪಿಯನ್ ಅಧಿಕಾರಿಗಳು ಮಿ. ಥಾಮಸ್‌ನು ಈ ಕಾರ್ಯವನ್ನು ಮಾಡಬಾರದಿತ್ತು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಮಿ. ಥಾಮಸ್‌ನು ಹಮ್ಮಿಗಿಯಿಂದ ನಿರಾಶನಾಗಿ ಭೀಮರಾಯರು ಡಂಬಳಕ್ಕೆ ಹೋಗಿರಬೇಕೆಂದು ಅವರನ್ನು ಬೆನ್ನಟ್ಟಿಸಿಕೊಂಡು ಡಂಬಳಕ್ಕೆ ಬಂದನು. ಥಾಮಸ್ ಡಂಬಳಕ್ಕೆ ಬಂದಾಗ ಮಧ್ಯಾಹ್ನದ ಮೂರು ಗಂಟೆ ಉರಿಬಿಸಿಲು ಅಲ್ಲಿ ಕೂಡಾ ಅವನಿಗೆ ನಿರಾಶೆಯಾಯಿತು. ಕಾರಣ ಭೀಮರಾಯರು ಕೊಪ್ಪಳದ ಕಡೆ ಹೋಗಿರಬೇಕೆಂದು ಯಾರೋ ಹೇಳಿದರು. ಹಿಂದಿನ ರಾತ್ರಿ ಥಾಮಸ್ ಹೋದ ಹಾದಿಯಲ್ಲಿಯೇ ಭೀಮರಾಯರು ಕೆಂಚನಗೌಡರು ಮೂರುನೂರು ಸೈನಿಕರನ್ನು ಕರೆದುಕೊಂಡು ಹೋಗಿದ್ದರು. ಆದರೆ ಯಾವ ಹಳ್ಳಿಯವರು ಭೀಮರಾಯರು ಹೋದದ್ದನ್ನು ಥಾಮಸ್ನನಿಗೆ ತಿಳಿಸಲಿಲ್ಲ. ಯಾವ ಹಳ್ಳಿಯವರಿಗೂ ಬಂಡಾಯಗಾರರ ಮೇಲೆ ದ್ವೇಷವಿರಲಿಲ್ಲ. ಅಷ್ಟೇ ಅಲ್ಲ ಅವರು ಅವರಿಗೆ ಎಲ್ಲ ಸಹಾಯವನ್ನು ನೀಡುತ್ತಿದ್ದರು.

ಭೀಮರಾಯರು ಕೊಪ್ಪಳವನ್ನು ವಶಪಡಿಸಿಕೊಳ್ಳಲು ಅತ್ತ ದಂಡ ಯಾತ್ರೆಯನ್ನು ಕೈಗೊಂಡಿದ್ದರು. ಕೊಪ್ಪಳ ಭಾಗದಲ್ಲಿ ಹಮ್ಮಿಗಿ ದೇಸಾಯರ ಪ್ರಭಾವ ಹೆಚ್ಚಿತ್ತು. ಕಾರಣ ಅವರದು ದೇಸಾಯರ ಮನೆತನವಾಗಿದ್ದರಿಂದ ಎಲ್ಲರಿಗೂ ಅವರ ಹೆಸರು ಚಿರಪರಿಚಿತವಾಗಿತ್ತು. ಭೀಮರಾಯರ ಪ್ರಭಾವ ಡಂಬಳದ ಸುತ್ತಮುತ್ತ ಹೆಚ್ಚಿತ್ತು. ಭೀಮರಾಯರ ಮನೆತನದವರು ನೂರಾರು ವರುಷಗಳಿಂದ ಡಂಬಳದ ನಾಡಗೌಡಿಕೆ ಮಾಡುತ್ತಿದ್ದರಿಂದ ಮತ್ತು ಡಂಬಳದ ದೇಸಾಯರ ಸಂಬಂಧಿಕರಾಗಿದ್ದರಿಂದ ಅವರನ್ನು ಎಲ್ಲರೂ ಗುರುತಿಸುತ್ತಿದ್ದರು.

ಭೀಮರಾಯರು ಕೆಂಚನಗೌಡರನ್ನು ಕರೆದುಕೊಂಡು ಕೊಪ್ಪಳಕ್ಕೆ ಹೋಗುವ ಹಾದಿಯಲ್ಲಿ ಕೊಪ್ಪಳದ ತಹಶೀಲದಾರನಾಗಿದ್ದ ಮೊಹಮ್ಮದ ಹನೀಫನು ಭೀಮರಾಯರ ಇಬ್ಬರೂ ಹೆಂಡಂದಿರನ್ನು ವರುಷದ ಮಗ ಮತ್ತು ಒಂದು ಹಸುಗೂಸನ್ನು ಬಂಧಿಸಿ ಕೊಪ್ಪಳ ಕೋಟೆಯಲ್ಲಿ ಇಟ್ಟಿರುವನೆಂಬ ಸುದ್ದಿ ಬಂದಿತು. ಮೊಹಮ್ಮದ ಹನೀಫನು ಭೀಮರಾಯರನ್ನು ಹುಡುಕಲು ಕೊಪ್ಪಳವನ್ನು ಬಿಟ್ಟು ಹೊರಗೆ ಹೋಗಿದ್ದಾನೆಂದೂ ಆ ವಾರ್ತಾಹರನು ಹೇಳಿದನು. ಭೀಮರಾಯರ ತಲೆ ಕೆಟ್ಟಂತಾಯಿತು. ಈಗ ಅವರಿಗೆ ತಮ್ಮ ಹೆಂಡಿರ ಮಕ್ಕಳನ್ನು ಬಂಧಮುಕ್ತ ಮಾಡಬೇಕೆಂಬ ಛಲ ಹೆಚ್ಚಿತು. ಈ ಹಿಂದೆ ಭೂತಪ್ಪನಹಳ್ಳಿ ಭರಮಪ್ಪ ನಾಯಕನು ಕೊಪ್ಪಳದ ಕೋಟೆ ಆಯಾಸವಿಲ್ಲದೆ ದೊರೆಯುವಂತೆ ತನ್ನ ನಂಬಿಕೆಯ ಸೈನಿಕರನ್ನು ಕೋಟೆಯ ಒಳಗೆ ಇರಿಸುವುದಾಗಿ ಹೇಳಿದ್ದನು.



ಭೀಮರಾಯರು ಕೆಂಚನಗೌಡರು ನೇರವಾಗಿ ಕೋಟೆಯ ಕಡೆ ಹೋಗಿ ಕೋಟೆಯನ್ನು ವಶಪಡಿಸಿಕೊಂಡು ಹೆಂಡಿರು ಮಕ್ಕಳನ್ನು ರಕ್ಷಿಸಿದರು. ಭೀಮರಾಯರಿಗೆ ಕೊಪ್ಪಳದ ಕೋಟೆಯನ್ನು ವಶಪಡಿಸಿಕೊಳ್ಳಲು ತೊಂದರೆಯಾಗಲಿಲ್ಲ. ಈ ವಾರ್ತೆ ಆಂಗ್ಲರ ಕಿವಿಗೆ ಬಿದ್ದೊಡನೆ ಅವರು ಅಧೀರರಾದರು. ರಾಯಚೂರು ಮತ್ತು ಧಾರವಾಡದ ಕಲೆಕ್ಟರರು ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ಕೊಪ್ಪಳ ಕೋಟೆಯನ್ನು ಕಾಯುವ ವ್ಯವಸ್ಥೆಯನ್ನು ಮಾಡಿದ್ದರು. ಕೋಟೆ ಕೈವಶವಾದ ಸುದ್ದಿಯನ್ನು ಕೇಳಿ ಬ್ರಿಟಿಷರು ಚಿತ್ತಚಂಚಲರಾದರು. ತಕ್ಷಣ ಮೇಜರ ಹ್ಯೂಜೆಸ್‌ನನ್ನು ಅಲ್ಲಿಗೆ ಕಳಿಸಿದರು. ಹ್ಯೂಜೆಸ್ ಏಳು ತಾಸುಗಳಲ್ಲಿ ೨೬ ಮೈಲುಗಳನ್ನು ಕ್ರಮಿಸಿ ತುಂಗಭದ್ರಾ ನದಿಯನ್ನು ದಾಟಿ ಮೇ ೩೧ಕ್ಕೆ ಕೊಪ್ಪಳಕ್ಕೆ ಬಂದನು. ಅದರ ಹಿಂದನ ದಿವಸವೇ ಕೊಪ್ಪಳ ಕೋಟೆ ಭೀಮರಾಯರ ವಶಕ್ಕೆ ಬಂದಿತ್ತು. ಕೊಪ್ಪಳದ ಜನರು ಕೆಂಚನಗೌಡರು ಭೀಮರಾಯರನ್ನು ಅತ್ಯಂತ ಸಂತೋಷದಿಂದ ಸ್ವಾಗತಿಸಿದ್ದರು.

ಹ್ಯೂಜೆಸ್‌ನು ತನ್ನ ಕಾಲ್ದಳ ಮತ್ತು ಅಶ್ವದಳದೊಂದಿಗೆ ಕೊಪ್ಪಳದ ಕೋಟೆಯನ್ನು ಸುತ್ತುವರೆದು ಯುದ್ಧ ಮಾಡದೆ ಸುಮ್ಮನೆ ನಿಂತನು. ಕಾರಣ ಅವನಿಗೆ ಹೊರಗಿನಿಂದ ಸೈನಿಕ ಸಹಾಯವು ಬರುವುದಿತ್ತು. ಆತನಿಗೊಬ್ಬನಿಗೆ ಆ ಕೋಟೆಯನ್ನು ಗೆಲ್ಲುವುದು ಅಸಾಧ್ಯವೆನಿಸಿತ್ತು. ಮುಂಡರಗಿ ನಾಡಿನಲ್ಲಿ ಡಂಬಳ ಕೋಟೆಯನ್ನು ಬಿಟ್ಟರೆ ಕೊಪ್ಪಳ ಕೋಟೆ ಅತ್ಯಂತ ಭದ್ರವಾದ ಕೋಟೆಯಾಗಿತ್ತು. ಈ ಕೋಟೆಗೆ ಎರಡು ಭದ್ರವಾದ ಹೊರಗೋಡೆಗಳು ಇದ್ದುವಲ್ಲದೆ, ಕಳೆದ ಮಾರ್ಚ ತಿಂಗಳಲ್ಲಿಯೇ ಎತ್ತರವಾದ ಬುರುಜುಗಳನ್ನು ಕಟ್ಟಿಸಿದ್ದರು. ಇದರಿಂದ ಕೋಟೆ ಭದ್ರವಾಗಿತ್ತು.

ಬ್ರಿಟಿಷರ ಸರಕಾರವು ಭೀಮರಾಯರನ್ನು ಮತ್ತು ಹಮ್ಮಿಗಿ ಕೆಂಚನಗೌಡರನ್ನು ಬಂಧಿಸಲು ಒಂದು ವಾರ ಪ್ರಯತ್ನ ನಡೆಸಿದ್ದರೂ ವಿಫಲವಾಗಿತ್ತು. ಭೀಮರಾಯರನ್ನು ಜೀವಂತ ಹಿಡಿದು ಕೊಟ್ಟವರಿಗೆ ಮೊದಲಿಗೆ ಐದು ಸಾವಿರ ರೂಪಾಯಿ ಬಹುಮಾನವನ್ನಿಟ್ಟಿತ್ತು. ಅನಂತರ ಧಾರವಾಡದ ಕಲೆಕ್ಟರ ಮಿ. ಏಂಡರಸನ್‌ರಿಗೆ ಪತ್ರ ಬರೆದು ಈ ಬಹುಮಾನದ ಹಣವನ್ನು ಹತ್ತು ಸಾವಿರ ರೂಪಾಯಿಗಳಿಗೆ ಏರಿಸಿದ್ದನು. ಕೊಪ್ಪಳದ ಕೋಟೆ ಮೊದಲು

ವಿಜಾಪುರದ ಆದಿಲ್‌ಷಾಹನ ಆಡಳಿತದಲ್ಲಿತ್ತು. ಅವನು ನಂತರ ಸವಣೂರು ನವಾಬ ಅಬ್ದುಲ್ ರಹೀಮಾನಖಾನನಿಗೆ ಜಹಗೀರಾಗಿ ಕೊಟ್ಟಿದ್ದನು.

ಮೇಜರ ಹ್ಯೂಜೆಸ್‌ನು ಲಿಂಗಸುಗೂರಿನಿಂದ ಹೈದರಾಬಾದಿನ ೪ನೇ ರೆಜಿಮೆಂಟ್ ಡೆಪ್ಯೂಟಿ ಕಮೀಷನರ ಲೆಫ್ಟಿನೆಂಟ ಟೇಲರ್‌ನ ನೇತೃತ್ವದಲ್ಲಿ ಬರುವುದನ್ನು ಕಾಯಹತ್ತಿದನು. ಅಲ್ಲಿಂದ ಸೈನ್ಯವು ಬಂದಿತು. ಕರ್ನೂಲಿನಿಂದ ಮೈಸೂರು ಅಶ್ವದಳದ ಬಾಬುರಾವ್ ಮತ್ತು ಕೃಷ್ಣರಾವ್ ಸವಾರರೊಂದಿಗೆ ಬಂದು ಕೊಪ್ಪಳದ ಕೋಟೆಯ ಮುಂದೆ ಜಮಾಯಿಸಿದರು. ಕೊನೆಯಲ್ಲಿ ಕ್ಯಾಪ್ಟನ್ ರುಧರ್ ಫೋರ್ಡನ ನೇತೃತ್ವದಲ್ಲಿ ೭೪ನೇ ಹಾಯ್‌ಲ್ಯಾಂಡರ್ ಸೈನಿಕ ತುಕಡಿ ಬಂದಿತು. ಮೇಜರ ಹ್ಯೂಜೆಸ್‌ನು ತನ್ನ ಸೈನ್ಯವನ್ನು ಮೂರು ಭಾಗ ಮಾಡಿ ಕೊಪ್ಪಳ ಕೋಟೆಯನ್ನು ಮುತ್ತಿ ಕೆಳಭಾಗದಿಂದ ಗುಂಡು ಹಾರಿಸಹತ್ತಿದನು. ಇಬ್ಬರ ಮಧ್ಯೆ ಬಿರುಸಿನಿಂದ ಯುದ್ಧವು ನಡೆಯಿತು. ಆ ಯುದ್ಧವನ್ನು ಕುರಿತು ಬ್ರಿಟಿಷ್ ಅಧಿಕಾರಿಯೊಬ್ಬನು "I proceeded to surround as much as it as I was enabled to with the infantry and the Mysore House. On which the rebels opened the fire with musketry, guns and ginjals continued doing so until the fort was subsequently taken) which was occasionally replied to by the infrontry.

(ನಾನು ಕೋಟೆಯನ್ನು ಸುತ್ತುವರೆಯುತ್ತಲೆ ಕೋಟೆಯಲ್ಲಿದ್ದ ಬಂಡುಗಾರರು ತೋಪು, ತುಫಾಕಿ, ಸಣ್ಣ ಬಂದೂಕುಗಳನ್ನು ಹಾರಿಸಹತ್ತಿದರು. ಕೋಟೆ ವಶವಾಗುವವರೆಗೂ ಹಾರಿಸಿದರು.)

ಈ ಮಾತನ್ನು ಕೇಳಿದರೆ ಭೀಮರಾಯರ ಸಾಹಸವನ್ನು ಮೆಚ್ಚುವಂತಿತ್ತು. ಮೇ ೩೧ ರಂದೇ ಭೀಮರಾಯರು ಯುದ್ಧದಲ್ಲಿ ಮುಂದಿದ್ದರು. ಆದರೆ ಬ್ರಿಟಿಷರ ತೋಪುಗಳು ಮುಂದಕ್ಕೆ ಬರುತ್ತಿದ್ದಂತೆ ಭೀಮರಾಯರು ಹಿಂದೆ ಸರಿಯಬೇಕಾಯಿತು. ಮೇ ೩೧ರ ಯುದ್ಧ ನಿರ್ಣಯಾತ್ಮಕವಾಗಲಿಲ್ಲ. ಜೂನ ೧ ರಂದು ಲೆಫ್ಟನಂಟ್ ಫೆಡ್ಲರನು ೧೮೦೦ ಬ್ರಿಟಿಷ ಸೈನ್ಯವನ್ನು ಕರೆದುಕೊಂಡು ಬಂದನು. ರಾಯಚೂರಿನ ಡೆಪ್ಯೂಟಿ ಕಮೀಷನರ ಆರ್.ಎನ್. ಟೇಲರ ಕೂಡ ಕೋಟೆಯ ಬಳಿ ಬಂದು ನಿಂತಿದ್ದನು.



ಬ್ರಿಟಿಷ ಶಕ್ತಿ ಹೆಚ್ಚಾದೊಡನೆ ಅವರು ಭೀಮರಾಯರಿಗೆ ಪತ್ರ ಬರೆದು ಮೂರು ತಾಸುಗಳಲ್ಲಿ ಕೋಟೆಯೊಳಗಿದ್ದವರನ್ನೆಲ್ಲಾ ಹೊರಗೆ ಕಳಿಸಿ ಕೋಟೆಯನ್ನು ತೆರವು ಮಾಡಿಕೊಡದಿದ್ದರೆ ನೀವು ಗಂಭೀರವಾದ ಪರಿಣಾಮವನ್ನು ಎದುರಿಸಬೇಕಾಗುವುದು ಎಂಬ ಎಚ್ಚರಿಕೆ ನೀಡಿದನು. ಭೀಮರಾಯರು ಹಾಗೂ ಹಮ್ಮಿಗಿ ಕೆಂಚನಗೌಡರು ಇದಕ್ಕೆ ಸೊಪ್ಪು ಹಾಕಲಿಲ್ಲ. ಮಧ್ಯಾಹ್ನ ಹೊತ್ತಿಗೆ ಘೋರ ಕದನವಾಯಿತು. ಯಾರಿಗೆ ಜಯವಾಯಿತು ಎಂಬ ಸ್ಪಷ್ಟ ಚಿತ್ರ ಹೊರಹೊಮ್ಮಲಿಲ್ಲ.

ಆಂಗ್ಲರ ಸೈನ್ಯದ ಮುಂದೆ ಬಂಡುಗಾರನಿಗೆ ಬಹುಕಾಲ ಹೋರಾಡುವುದು ಸಾಧ್ಯವಾಗಲಿಲ್ಲ. ಯುದ್ಧವು ಪ್ರಾರಂಭವಾದ ಒಂದು ಗಂಟೆಯಲ್ಲಿ ಭೀಮರಾಯರು ಮತ್ತು ಕೆಂಚನಗೌಡರು ವೀರಸ್ವರ್ಗವನ್ನು ಸೇರಿದರು.

ಒಂದು ಹೇಳಿಕೆಯ ಪ್ರಕಾರ ಕೆಂಚನಗೌಡರು ಭೀಮರಾಯರಿಗೆ "ನಾವು ಇಲ್ಲಿಂದ ಪಲಾಯನ ಮಾಡುವಾ ಅಥವಾ ಶತ್ರುಗಳಿಗೆ ಶರಣಾಗುವಾ" ಎಂದು ಹೇಳಿದರಂತೆ. ಇದನ್ನೊಪ್ಪದ ಭೀಮರಾಯರು ಕೆಂಚನಗೌಡರಿಗೆ ಗುಂಡು ಹೊಡೆದು ನಂತರ ತಾವೂ ಗುಂಡು ಹಾಕಿಕೊಂಡು ಸತ್ತರೆಂದು ಯುದ್ಧದಲ್ಲಿ ತೊಡಗಿದ್ದ ಬ್ರಿಟಿಷನೊಬ್ಬ ಹೇಳಿದ್ದಾನೆ.

ಮೇಜರ್ ಹ್ಯೂಜೆಸ್‌ನು ೧೨೭ ಜನರನ್ನು ಬಂಧಿಸಿದನು. ಅವರೆಲ್ಲರನ್ನು ಸೈನಿಕ ನ್ಯಾಯಾಲಯದ ಮುಂದೆ ನಿಲ್ಲಿಸಿದನು. ನಂತರ ಬೇರೆ ಕೆಲವರನ್ನು ಬಂಧಿಸಲಾಯಿತು. ಬಂಧಿತ ಜನರಲ್ಲಿ ೧೨೩ ಜನರು ಅಪರಾಧಿಗಳೆಂದು ನಿರ್ಣಯಿಸಲ್ಪಟ್ಟರು. ಅದರಲ್ಲಿ ೭೭ ಕ್ರಾಂತಿಕಾರಿಗಳನ್ನು ಸಾಲಾಗಿ ನಿಲ್ಲಸಿ ಗುಂಡುಹಾಕಿ ಕೊಲ್ಲಲಾಯಿತು. ಬ್ರಿಟಿಷರು ಜಿಲಿಯನ್ ವಾಲಾಬಾಗದಂತಹ ಮಾನವ ಹತ್ಯಾಕಾಂಡವನ್ನು ಈ ಹಿಂದೆ ನಡೆಸಿದ್ದರೆಂಬುದಕ್ಕೆ ಇದೊಂದು ನಿದರ್ಶನ. ಒಬ್ಬ ವ್ಯಕ್ತಿಗೆ ಗಲ್ಲಾಯಿತು. ಇಬ್ಬರಿಗೆ ಒಂದು ವರ್ಷದ ಶಿಕ್ಷೆ, ೮ ಜನರಿಗೆ ೫ ವರ್ಷಗಳ ಶಿಕ್ಷೆ, ೪೦ ಹೋರಾಟಗಾರರಿಗೆ ೧೪ ವರುಷಗಳ ಶಿಕ್ಷೆಯಾಯಿತು. ಈ ಮುಂಡರಗಿ ಭೀಮರಾಯರ ಬಂಡಾಯದ ಪರಿಣಾಮ ಜಲಿಯನವಾಲಾಬಾಗದಷ್ಟೇ ತೀವ್ರವಾಗಿತ್ತು. ಮುಂಡರಗಿ ಭೀಮರಾಯರ ಮತ್ತು ಹಮ್ಮಿಗೆ ಕೆಂಚನಗೌಡರ ಬಂಡಾಯದಲ್ಲಿ ಗುಂಡು ಹೊಡೆಸಿಕೊಂಡು ಹುತಾತ್ಮರಾದವರ ಸ್ಮರಣೆಯನ್ನು ಕೂಡ ನಾವು ಇಂದು ಮಾಡುವುದಿಲ್ಲ. ಈ ಪುಣ್ಯಾತ್ಮರ ಹೆಸರುಗಳು ಈ ರೀತಿ ಇವೆ.

## ಕೊಪ್ಪಳದಲ್ಲಿ ನಡೆದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಆಂಗ್ಲರ ಗುಂಡಿಗೆ ಹುತಾತ್ಮರಾದ ಮುಂಡರಗಿ ತಾಲೂಕಿನ ದೇಶಬಾಂಧವರು

| ಹೆಸರು | ಊರು | ಹೆಸರು | ಊರು |
|---|---|---|---|
| ೧. ಲಿಂಗಯ್ಯ | ಕೊರ್ಲಹಳ್ಳಿ | ೩೯. ಹರಪ್ಪಾ | ಹೆಸರೂರು |
| ೨. ಗಿರಿಯಣ್ಣ | ಕೊರ್ಲಹಳ್ಳಿ | ೪೦. ಲಿಂಗಯ್ಯ | ಹರಪನಹಳ್ಳಿ |
| ೩. ಲಚುಮಯ್ಯ | ಕೊರ್ಲಹಳ್ಳಿ | ೪೧. ಬಸ್ಯಾ | ಮುಂಡವಾಡ |
| ೪. ಹನುಮಯ್ಯ | ಕೊರ್ಲಹಳ್ಳಿ | ೪೨. ಬಸೀರ ತಲೇರಿ | ಮುಂಡವಾಡ |
| ೫. ಭರಮಾ | ಕೊರ್ಲಹಳ್ಳಿ | ೪೩. ಜೂನಾ | ಮುಂಡವಾಡ |
| ೬. ಹುಲಿಗಯ್ಯಾ | ಕೊರ್ಲಹಳ್ಳಿ | ೪೪. ದಾವೂದ ಸಾಹೇಬ | ಮುಂಡವಾಡ |
| ೭. ಭೀಮಯ್ಯ | ಕೊರ್ಲಹಳ್ಳಿ | ೪೫. ಲಚವಾಣ | ಬಾಗೇವಾಡಿ |
| ೮. ವಜಲ್ಲಾ | ಕೊರ್ಲಹಳ್ಳಿ | ೪೬. ಸಿದ್ದಯ್ಯ | ಬಾಗೇವಾಡಿ |
| ೯. ಖಾಜಾ | ಕೊರ್ಲಹಳ್ಳಿ | ೪೭. ಹನುಮಂತ | ಬಾಗೇವಾಡಿ |
| ೧೦. ಭರ್ಮಾ | ಕೊರ್ಲಹಳ್ಳಿ | ೪೮. ಉಬ್ಬುಲದಾಸ | ಬಾಗೇವಾಡಿ |
| ೧೧. ದುರ್ಗ್ಯಾ | ಕೊರ್ಲಹಳ್ಳಿ | ೪೯. ತಮ್ಮಣ್ಣ | ಕುಕನೂರು |
| ೧೨. ಹುಸೇನಸಾಬ | ಕೊರ್ಲಹಳ್ಳಿ | ೫೦. ಬಸ್ಯಾ | ಕುಂದಗೋಳ |
| ೧೩. ಮಲ್ಲಯ್ಯ | ಕೊರ್ಲಹಳ್ಳಿ | ೫೧. ಭೀಮಾ | ಕುಕನೂರು |
| ೧೪. ಹುಮೀದಸಾಹೇಬ | ಕೊರ್ಲಹಳ್ಳಿ | ೫೨. ಹನುಮಯ್ಯ | ಬಾಗೇವಾಡಿ |
| ೧೫. ಹುಸೇನಸಾಹೇಬ | ಕೊರ್ಲಹಳ್ಳಿ | ೫೩. ಯಲ್ಲ | ಹಮ್ಮಿಗಿ |
| ೧೬. ಹಯಾತ್‌ಸಾಹೇಬ | ಕೊರ್ಲಹಳ್ಳಿ | ೫೪. ಉಳವಿ | ಹಮ್ಮಿಗಿ |
| ೧೭. ಫಕೀರಸಾಹೇಬ | ಕೊರ್ಲಹಳ್ಳಿ | ೫೫. ಕುರಕಾ | ಹಮ್ಮಿಗಿ |
| ೧೮. ಓಂಕಾರಯ್ಯ | ಕೊರ್ಲಹಳ್ಳಿ | ೫೬. ಉಳವಿ (೨) | ಹಮ್ಮಿಗಿ |
| ೧೯. ರಂಗಯ್ಯ | ಕೊರ್ಲಹಳ್ಳಿ | ೫೭. ಕರಿಯಪ್ಪ | ಹಮ್ಮಿಗಿ |
| ೨೦. ರಂಗ | ಕೊರ್ಲಹಳ್ಳಿ | ೫೮. ಲಿಂಗ | ಹಮ್ಮಿಗಿ |
| ೨೧. ತಿಮ್ಮಯ್ಯ | ಕೊರ್ಲಹಳ್ಳಿ | ೫೯. ಯಲ್ಲ | ಹಮ್ಮಿಗಿ |
| ೨೨. ಸಾವಗಿರಿ | ಕೊರ್ಲಹಳ್ಳಿ | ೬೦. ತಮ್ಮಣ್ಣ | ಎಲಿಶಿರೂರ |
| ೨೩. ರಂಗ (ಎರಡನೆ) | ಕೊರ್ಲಹಳ್ಳಿ | ೬೧. ತಮ್ಮಯ್ಯ | ಎಲಿಶಿರೂರ |
| ೨೪. ಲಿಂಗಯ್ಯ | ಕೊರ್ಲಹಳ್ಳಿ | ೬೨. ಮುದ್ದುರಂಗ | ಎಲಿಶಿರೂರ |
| ೨೫. ಭೀಮಯ್ಯ | ಕೊರ್ಲಹಳ್ಳಿ | ೬೩. ಹಣುಮಣ್ಣ | ಎಲಿಶಿರೂರ |
| ೨೬. ಹೊನ್ನಗುರಯ್ಯ | ಕೊರ್ಲಹಳ್ಳಿ | ೬೪. ಮುದೇನೂರು | ಎಲಿಶಿರೂರ |
| ೨೭. ಹುಸೇನಸಾಬ | ಕೊರ್ಲಹಳ್ಳಿ | ೬೫. ಉಳವಿ | ಎಲಿಶಿರುಂದ |
| ೨೮. ಬಾವಾಸಾಬ | ಕೊರ್ಲಹಳ್ಳಿ | ೬೬. ಗರುಡ | ಎಲಿಶಿರುಂದ |
| ೨೯. ಹೀರಾಸಾಹೇಬ | ಕೊರ್ಲಹಳ್ಳಿ | ೬೭. ಚೆನ್ನಪ್ಪ | ಎಲಿಶಿರುಂದ |
| ೩೦. ಹನುಮಂತಯ್ಯ | ರಾಟಿ | ೬೮. ಗೊಗ್ಗಯ್ಯ | ಎಲಿಶಿರುಂದ |
| ೩೧. ಮಲ್ಲಯ್ಯ | ವಡ್ಡರಹಟ್ಟಿ | ೬೯. ಭೀಮಪ್ಪಾ | ಎಲಿಶಿರುಂದ |
| ೩೨. ಹನುಮ | ವಡ್ಡರಹಟ್ಟಿ | ೭೦. ವೀರಪ್ಪ | ಎಲಿಶಿರುಂದ |
| ೩೩. ಬಸಯ್ಯ | ವಡ್ಡರಹಟ್ಟಿ | ೭೧. ಫೀರೂ | ಎಲಿಶಿರುಂದ |
| ೩೪. ರಾಮಯ್ಯ | ಸಿಂಗಟಾಲೂರು | ೭೨. ಅವ್ವಣ್ಣ | ಎಲಿಶಿರುಂದ |
| ೩೫. ಚೆನ್ನ | ಸಿಂಗಟಾಲೂರು | ೭೩. ಫಿಚೂಸಾಬ | ಎಲಿಶಿರುಂದ |
| ೩೬. ಬಾಣಿಸಾಬ | ಹಮ್ಮಿಗಿ | ೭೪. ಭೀಮಯ್ಯ | ಎಲಿಶಿರುಂದ |
| ೩೭. ಜೀವನಸಾಬ | ಹಮ್ಮಿಗಿ | ೭೫. ಇಮಾಮಸಾಬ | ಎಲಿಶಿರುಂದ |
| ೩೮. ಭರಮಪ್ಪ | ನವಲಿ | ೭೬. ಸೈಯದ್ ಬುಡನ್ | ಎಲಿಶಿರುಂದ |
| | | ೭೭. ಬಸಣ್ಣಾ | ಎಲಿಶಿರುಂದ |
| | | | |



## ಹದಿನಾಲ್ಕು ವರುಷಗಳ ಕಠಿಣ ಶಿಕ್ಷೆಗೊಳಗಾದವರು

| | | |
|---|---|---|
| ೧. ಹುಣಸಪ್ಪ | ೧೪. ಇಮಾಮಸಾಬ | ೨೭. ಸಸೇನ್ಯಾ |
| ೨. ಮಾನಪ್ಪ | ೧೫. ಮೋಗೀಲ | ೨೮. ಬುಡಮಯ್ಯ |
| ೩. ಇಮಾಮಸಾಬ | ೧೬. ಲೋವಯ್ಯ | ೨೯. ಭರಮ್ಯಾ |
| ೪. ಹನುಮಯ್ಯ | ೧೭. ಪುಟ್ಟಯ್ಯ | ೩೦. ಮುದಕಯ್ಯ |
| ೫. ನಾಯಕಗೌಡ | ೧೮. ಬಿಂದಗಿ | ೩೧. ಹನುಮ |
| ೬. ಕೆಂಚ | ೧೯. ತಮ್ಮಯ್ಯ | ೩೨. ಯಲ್ಲ |
| ೭. ಜಂಗಿ | ೨೦. ಫಕೀರಯ್ಯ | ೩೩. ನಿಂಗಯ್ಯ |
| ೮. ಫಕೀರಸಾಹೇಬ | ೨೧. ಹೀರಾ | ೩೪. ಜಂಬೂ |
| ೯. ಕಾಸೀಮ | ೨೨. ಮಕ್ಯಾ | ೩೫. ದೇವಯ್ಯಾ |
| ೧೦. ಕೂಕೂ | ೨೩. ಭಂಡಯ್ಯ | ೩೬. ಹುಲಿಗೆಯ್ಯ |
| ೧೧. ವೆಂಕ | ೨೪. ಕಾಲೇಸಾಬ | ೩೭. ಪರಶ್ಯಾ |
| ೧೨. ಭರಮ | ೨೫. ಹೀರ್ಯಾ | ೩೮. ಹನುಮ ಬೀಗ |
| ೧೩. ಇಮಾಮಸಾಹೇಬ | ೨೬. ವೆಂಕಯ್ಯ | ೩೯. ಕಲ್ಲಯ್ಯ |
| | | ೪೦. ದನು |

ಭೀಮರಾಯರ ಮುಖ್ಯ ಗುಮಾಸ್ತನಾಗಿದ್ದ (ಅದೇ ಹೆಸರಿನ) ಭೀಮರಾಯನಿಗೆ ಮೊದಲು ತೋಪಿನ ಬಾಯಿಗೆ ಕಟ್ಟಿ ಕೊಲ್ಲಬೇಕೆಂಬ ಶಿಕ್ಷೆಯಾಗಿತ್ತು. ಆದರೆ ಅವನು ಭೀಮರಾಯರು ಹೇಗೆ ಯುದ್ಧದ ಸಿದ್ಧತೆಗಳನ್ನು ಮಾಡಿದರು ಎಂದು ಸರಕಾರಕ್ಕೆ ತಿಳಿಸಿದ್ದರಿಂದ ಅವನ ಮರಣ ಶಿಕ್ಷೆಯನ್ನು ಹದಿನಾಲ್ಕು ವರುಷಗಳ ಕಠಿಣ ಶಿಕ್ಷೆಗೆ ಇಳಿಸಲಾಯಿತು. ಮಗದುಮ್ (ಮಕ್ತುಂ) ಮೋದಿನ ನಾಯಕನಿಗೆ ಗಲ್ಲಿಗೇರಿಸಲಾಯಿತು.

ಹೀಗೆ ೭೭ ಕ್ರಾಂತಿಕಾರಿಗಳಿಗೆ ಮರಣ ದಂಡನೆ, ೪೦ ಜನರಿಗೆ ೧೪ ವರ್ಷಗಳ ಕಠಿಣ ಶಿಕ್ಷೆ, ೮ ಜನರಿಗೆ ೫ ವರ್ಷಗಳ ಶಿಕ್ಷೆ ಮತ್ತು ೧೨ ಜನರಿಗೆ ಒಂದು ವರ್ಷದ ಶಿಕ್ಷೆಯನ್ನಿತ್ತು ಸರಕಾರವು ಒಟ್ಟು ೧೨೯ ಜನರನ್ನು ಶಿಕ್ಷೆಗೆ ಗುರಿಮಾಡಿತು.

ಬಂಡಾಯದ ಗಾಳಿ ಬೀಸುವ ಮುನ್ನ ಅನೇಕರನ್ನು ಸರಕಾರವು ಸಂಶಯದ ಮೇಲೆ ಬಂಧಿಸಿತ್ತು. ಅವರಲ್ಲಿ ವೆಂಕಟರಾವ ದೇಶಪಾಂಡೆ ಒಬ್ಬರು. ವೆಂಕಟರಾವ ಅವರು ಗೋಕಾಕದ ಮಾಮಲೇದಾರರಿದ್ದು ಸರಕಾರವು ಅವರ ಚಟುವಟಿಕೆ

ನೋಡಿ ಅವರನ್ನು ಸೇವೆಯಿಂದ ತೆಗೆದುಹಾಕಿತ್ತು. ಅವರು ಧಾರವಾಡಕ್ಕೆ ಬಂದು ವಾಸಿಸುತ್ತಿದ್ದರು. ಭೀಮರಾಯರು ಧಾರವಾಡಕ್ಕೆ ಬಂದಾಗಲೆಲ್ಲಾ ಅವರ ಅತಿಥಿಯಾಗಿ ಉಳಿಯುತ್ತಿದ್ದರು. ಅದರಿಂದ ವೆಂಕಟರಾವ ದೇಶಪಾಂಡೆ ಬಂಡಾಯದಲ್ಲಿ ಭೀಮರಾಯರಿಗೆ ಸಹಾಯ ಮಾಡುತ್ತಿರಬೇಕೆನ್ನುವ ಅನುಮಾನದಿಂದ ಅವರನ್ನು ಬಂಧಿಸಿ ಸೆರೆಮನೆಯಲ್ಲಿಟ್ಟರು. ಅವರ ಮೇಲೆ ನಿಶ್ಚಿತ ಆಪಾದನೆಗಳು ಇರದಿದ್ದರೂ ಬಂಡಾಯ ಕೊನೆಗೊಳ್ಳುವವರೆಗೂ ಅವರು ಸೆರೆಮನೆಯಲ್ಲಿ ಕೊಳೆಯಬೇಕಾಯಿತು.

ಸಂಶಯದ ಆಪಾದನೆಯ ಮೇಲೆ ಪೊಲೀಸ ಅಧಿಕಾರಿ ಮೇಜರ ಥಾಮಸ್ ಲೀ ಧಾರವಾಡದ ಹೆಬ್ಬಳ್ಳಿ ಜಹಗೀರದಾರರಾಗಿದ್ದ ಅಪ್ಪಾಜಿರಾವ, ಲಕ್ಷ್ಮಣ ಪಾಂಡುರಂಗರಾಜ, ಕೃಷ್ಣ ರಾಮಚಂದ್ರರಾವ, ರಂಗನಾಥರಾವ ಅವರನ್ನು ಬಂಧಿಸಿ ತಮ್ಮ ವಶಕ್ಕೆ ಒಪ್ಪಿಸಬೇಕೆಂದು ಮ್ಯಾಜಿಸ್ಟ್ರೇಟ ಮಿ.ಟಿ. ಆಗಿಲ್ವೆಗೆ ಕೇಳಿದನು. ಆದರೆ ಆಗಿಲ್ವೆ ಈ ಮೂವರು ಹೆಬ್ಬಳ್ಳಿ ಜಹಗೀರದಾರರು ಯಾವ ರೀತಿ ಬಂಡುಗಾರ ಭೀಮರಾಯನಿಗೆ ಸಹಾಯ ಮಾಡುತ್ತಾರೆ ಎಂದು ಹೇಳಿದನೇ ವಿನಃ ಅವರನ್ನು ಪೊಲೀಸರ ವಶಕ್ಕೆ ತಂದು ಕೊಡುವುದಿಲ್ಲವೆಂದು ಖಡಾಖಡಿಯಾಗಿ ಹೇಳಿದನು. ಇಷ್ಟೇ ಅಲ್ಲ ತಾನು ಯಾರನ್ನೂ ಬಂಧಿಸುವನೋ ಅವೆಲ್ಲರನ್ನು ತನಗೆ ಒಪ್ಪಿಸುವ ಆಜ್ಞೆಯನ್ನು ಮಾಡಬೇಕೆಂದು ಥಾಮಸ್ ಕೇಳಿದ್ದಕ್ಕೆ ಮ್ಯಾಜಿಷ್ಟ್ರೇಟ ಆಗಿಲ್ವೆ ನಿರಕಾರಿಸಿದನು. ಹೀಗೆ ಥಾಮಸ್ ಕೇವಲ ಸಂದೇಹದ ಮೇಲೆ ಸಾಕಷ್ಟು ಅಮಾಯಕರನ್ನು ಗೋಳಾಡಿಸಿದ್ದಾನೆ.

ಭೀಮರಾಯರು ತೀರಿಕೊಂಡಾಗ (ಸುಮಾರು ೩೫ ವರುಷಗಳಿರಬೇಕು) ಅವರ ಇಬ್ಬರು ಹೆಂಡಂದಿರು, ೩೫ ವರುಷದ (ರಂಗರಾಯರ ವಿಧವೆ) ಮಲತಾಯಿ ಗಂಗೂಬಾಯಿ ೬೦ ವರುಷದ ಅಜ್ಜಿ ನಾದಿನಿ, ಒಬ್ಬ ಮಗ ಮತ್ತು ೨ ತಿಂಗಳ ಹೆಣ್ಣು ಕೂಸು, ಅನಾಥರಾದರು. ಸರಕಾರವು ಇವರಿಗೆ ತಿಂಗಳಿಗೆ ೩೦ ರೂಪಾಯಿ ಪೋಟಗಿ (ಜೀವನಾಂಶ) ಕೊಡಬೇಕೆಂದು ನಿರ್ಧರಿಸಿತ್ತು. ಕಾರಣ ಸರಕಾರವು ಭೀಮರಾಯರ ಎಲ್ಲ ಆಸ್ತಿಯನ್ನು ಮುಟ್ಟುಗೋಲು ಹಾಕಿತು. ಅವರಿಗೆ ೨೮ ವರುಷದ ನರಸಿಂಗರಾವ ಅನ್ನುವ ಒಬ್ಬ ತಮ್ಮ ೨೬ ವರುಷದ ಶ್ರೀನಿವಾಸರಾವ ಅನ್ನುವ ಇನ್ನೊಬ್ಬ ತಮ್ಮನಿದ್ದನು. ಇವರಿಬ್ಬರೂ ಮುಂಡರಗಿಯಲ್ಲಿ ಬೇರೆ ಬೇರೆಯಾಗಿ ವಾಸಿಸುತ್ತಿದ್ದರು. ಬಳ್ಳಾರಿ ಜಿಲ್ಲೆಯಲ್ಲಿ



ನೌಕರಿ ಮಾಡುತ್ತಿದ್ದ ಇವರಿಬ್ಬರನ್ನು ಬಂಡಾಯವು ಮುಗಿಯುವ ಹೊತ್ತಿಗೆ ನೌಕರಿಯಿಂದ ಕಿತ್ತು ಹಾಕಲಾಗಿತ್ತು. ನರಸಿಂಗರಾವ ಮತ್ತು ಶ್ರೀನಿವಾಸರಾವ ಅಣ್ಣನ ನಾಡಗೌಡಕಿಯ ಉತ್ಪನ್ನ ಮತ್ತು ಸಂಬಳದಲ್ಲಿ ಪಾಲುದಾರನಾಗಿದ್ದರು ಕಾರಣ ಈ ಮೂವರು ರಂಗರಾವರ ಮಕ್ಕಳಾಗಿದ್ದರು.

**ಕಂಪನಿ ಸರಕಾರವು ೧೮೫೮ ರಲ್ಲಿ ಮುಟ್ಟುಗೋಲು ಹಾಕಿದ ಭೀಮರಾವ ರಂಗರಾವ ನಾಡಗೌಡರ ಆಸ್ತಿಯ ವಿವರಗಳು:**

| ಗ್ರಾಮಗಳು ಹೆಸರು | ವಿಸ್ತೀರ್ಣ ಎಕರೆ ವಾರುಗಳಲ್ಲಿ ಎ.ಗುಂಟೆ | ಸರಕಾರಕ್ಕೆ ಇವರು ಕೊಡುತ್ತಿದ್ದ ಹಿಡುವಳಿ ಹಣ ರೂ. ಆ. ಪೈ | ಭೀಮರಾಯರಿಗೆ ಇದ್ದ ಆಸ್ತಿಯ ಉತ್ಪನ್ನ ಬೆಲೆ ರೂ.ಆ. ಪೈ. |
|---|---|---|---|
| ಬೆಣ್ಣಿಹಳ್ಳಿ | ಪೂರ್ಣಹಳ್ಳಿ | – | ೪೬೩–೦–೦ |
| ಹೈತಾಪುರ | ಪೂರ್ಣಹಳ್ಳಿ | – | ೧೬೬೦–೮–೦ |
| ಡಂಬಳ | ೧೬೫–೩೮ | ೧೦೩ | ೪೬–೦–೦ |
| ಕಲಕೇರಿ | ೨೨–೦೨ | ೩೦ | ೪–೦–೦ |
| ಹಾರೋಗೇರಿ | ೨೮–೨೦ | – | ೧೬–೦–೦ |
| ಬರದೂರು | ೧೧೦–೨೫ | – | ೯೦–೦–೦ |
| ಶಿರೋಳ | ೧೪೩–೩೨ | – | ೯೯–೦–೦ |
| ಎಲಿಶಿರೂರ | ೩೯–೧೪ | – | ೨೬–೮–೦ |
| ಮಕ್ತುಂಪುರ | ೬೦–೦೨ | ೧೬ | ೧೫–೮–೦ |
| ಬೆಟಗೇರಿ | ೫೨–೩೫ | – | ೪೦–೦–೦ |
| ಹೊಂಬಳ | ೬೩–೧೯ | – | ೫೨–೦–೦ |
| ಕೌಜಗೇರಿ | ೯೧–೦೩ | – | ೬೯–೦–೦ |
| ಒಟ್ಟು ೧೨ ಹಳ್ಳಿಗಳು | | ೧೪೯–೦–೦ | ೨೫೮೧–೮–೦ |

ಹೀಗೆ ಭೀಮರಾಯರ ರೂ. ೨೫೮೧–೫೦ ಪೈಸೆ. ವಾರ್ಷಿಕ ಉತ್ಪನ್ನ ಬರುವ ಭೂಮಿಯನ್ನು ಸರಕಾರವು ಜಪ್ತು ಮಾಡಿತು. ಭೀಮರಾಯರಿಗೆ ಇಷ್ಟು ಉತ್ಪನ್ನವಿದ್ದರೂ ಭೀಮರಾಯರ ಕುಟುಂಬಕ್ಕೆ ಸರಕಾರವು ತಿಂಗಳಿಗೆ ಮೂವತ್ತು ರೂಪಾಯಿ ಜೀವನಾಂಶವನ್ನು ಗೊತ್ತುಮಾಡಿತ್ತು. ನಂತರ ಅದು ಕೂಡ ನಷ್ಟವಾಗಿರಬೇಕು.

ಭೀಮರಾಯರಿಗೆ ಬ್ರಿಟಿಷರೊಡನೆ ಹೋರಾಡಿ ತಮ್ಮ ರಾಜ್ಯವನ್ನು ಉಳಿಸಿಕೊಳ್ಳಬೇಕು ಮತ್ತು ತಾವು ದತ್ತು ತೆಗೆದುಕೊಂಡಿದ್ದನ್ನು ಸರಕಾರವು ಮನ್ನಿಸಬೇಕು. ಅಥವಾ ತಮ್ಮಲ್ಲಿ ಇದ್ದ ಶಸ್ತ್ರಾಸ್ತ್ರಗಳನ್ನು ಸರಕಾರಕ್ಕೆ ಒಪ್ಪಿಸುವ ಒತ್ತಾಯಕ್ಕೆ ಒಳಗಾಗಬೇಕು. ಅನ್ನುವ ಯಾವ ಭೀತಿ ಇರಲಿಲ್ಲ ಕಾರಣ ಅವರಿಗೆ ರಾಜ್ಯವಿರಲಿಲ್ಲ. ಆಸ್ತಿಗೆ ದತ್ತಕ ಮಗನನ್ನು ಪಡೆಯುವ ಪ್ರಮೇಯವಿರಲಿಲ್ಲ. ಮತ್ತು ಅವರು ಸ್ವತಃ ಶಸ್ತ್ರಾಸ್ತ್ರಗಳನ್ನು ಪಡೆದಿರಲಿಲ್ಲ. ೧೮೫೭–೫೮ರ ಬಂಡಾಯದ ಹಿನ್ನೆಲೆಯನ್ನು ವೀಕ್ಷಿಸಿದಾಗ ದತ್ತಕವನ್ನು ಸರಕಾರವು ಅಮಾನ್ಯ ಮಾಡಿದ್ದನ್ನೇ ಪ್ರತಿಭಟಿಸಿ ಶಸ್ತ್ರಾಸ್ತ್ರಗಳನ್ನು ಎತ್ತದ ಉದಾಹರಣೆಗಳೇ ಹೆಚ್ಚು. ಆದರೆ ಮುಂಡರಗಿ ಭೀಮರಾವ ನಾಡಗೌಡರು ಮತ್ತು ಹಮ್ಮಿಗಿ ಮತ್ತು ಶಿರಹಟ್ಟಿ ದೇಸಾಯುರಾಗಿದ್ದ ಕೆಂಚನಗೌಡರಿಗೆ ಇವರಾರಿಗೂ ಆಸೆ ಆಮಿಷಗಳಿರಲಿಲ್ಲ. ಈ ತರುಣರು ದೇಶಕ್ಕಾಗಿ ಮಾಡಿದ ತ್ಯಾಗ ಬಲಿದಾನಗಳನ್ನು ನೆನೆದರೆ ರೋಮಾಂಚನವೆನಿಸುತ್ತದೆ. ಭೀಮರಾಯರ ವಯಸ್ಸು ವೀರಸ್ವರ್ಗವನ್ನು ಅಪ್ಪಿದಾಗ ಮೂವತ್ತೆರಡರ ಆಚೆ ಇಚೆ ಇದ್ದಿರಬೇಕು. ಕಾರಣ ಇವರ ತಮ್ಮನಿಗೆ ೨೯ ವರುಷಗಳಿದ್ದವು ಎಂದು ಬ್ರಿಟಿಷರ ದಾಖಲೆಗಳು ಹೇಳುತ್ತವೆ. ಡಂಬಳದ ಶ್ರೀನಿವಾಸ ವೆಂಕಟಾದ್ರಿ ಬಹದ್ದೂರ ದೇಸಾಯರ ವಯಸ್ಸು ಕೇವಲ ೨೨ ಇದ್ದಿತು. ಹಮ್ಮಿಗೆ ಮತ್ತು ಶಿರಹಟ್ಟಿ ಕೆಂಚನಗೌಡರ ವಯಸ್ಸು ಸುಮಾರು ೩೫ ಇದ್ದಿರಬೇಕು. ಇಲ್ಲವೆ ಭೀಮರಾಯರ ಸಮ ವಯಸ್ಸಿನವರಿರಬೇಕು. ಇಂತಹ ಮೂವರು ಪುಣ್ಯ ಪುರುಷರನ್ನು ದೇಶಕ್ಕಿತ್ತ ಮುಂಡರಗಿ ಡಂಬಳ ನಾಡು ಧನ್ಯವೆನಿಸಿದೆ.

## ೧೨. ಕೊಪ್ಪಳ ಕೋಟೆಯ ಐತಿಹಾಸಿಕ ಹಿನ್ನೆಲೆ : ಕಲಕೇರಿ–ತಿಪ್ಪಾಪುರ ದೇಸಾಯಿಯವರು

**“ಕಾವೇರಿಯಿಂದ ಮಾ ಗೋ ।**
**ದಾವರಿವರ ಮಿರ್ದ ನಾಡದಾ ಕನ್ನಡದೊಳ್ ।**
**ಭಾವಿಸಿದ ಜನಪದಂ ವಸು ।**
**ಧಾವಲಯವಿಲೀನ ವಿಶದ್ ವಿಷಯ ವಿಶೇಷಂ ॥**
**ಅದರೊಳಗಂ ಕಿಸುವೊಳಲಾ ।**
**ವಿದಿತ ಮಹಾಕೊಪಣ ನಗರವಾ ಪುಲಿಗೆಜ್ಜಿಯಾ ।**



**ಸದಭಿಸ್ತುತಮಪ್ಪೊಂಕುಂ ।**
**ದದ ನಡುವಣ ನಾಡೆ ಕನ್ನಡದ ತಿರುಳ್ ॥**

ಕ್ರಿ.ಶ. ೮ನೆಯ ಶತಮಾನದಲ್ಲಿ ರಚಿತವಾದ ಶ್ರೀ ವಿಜಯನಿಂದ ರಚಿಸಲ್ಪಟ್ಟ ಕವಿರಾಜ ಮಾರ್ಗದಲ್ಲಿ ತಿರುಳ್‌ಗನ್ನಡದ ನಾಡಿನ ಮೇರೆಗಳನ್ನು ಸೂಚಿಸುತ್ತಿರುವಾಗ ಕೊಪಣ ಮಹಾನಗರವನ್ನು ಹೆಸರಿಸಿದ್ದಾನೆ. ವಿದಿತ ಮಹಾಕೊಪಣ ನಗರವು ಪ್ರಾಚೀನ ಕಾಲದಿಂದಲೂ ಪ್ರಸಿದ್ಧಿ ಪಡೆದ ಮಹಾನಗರ, ಕುಪಣ, ಕೊಪಣ, ಕುಪಣತೀರ್ಥ, ಕೊಪಣಾಚಲ ಮೊದಲಾದ ಹೆಸರುಗಳಿಂದ ಶಾಸನಗಳಲ್ಲಿ ಕರೆಯಿಸಿಕೊಂಡ ಇದು ಪುರಾಣ ಕಾಲದಿಂದಲೂ ಹಲವಾರು ಸ್ಥಳ, ಪುರಾಣಗಳನ್ನು ತನ್ನ ಚರಿತ್ರೆಯ ಗರ್ಭದಲ್ಲಿ ಹೊತ್ತುಕೊಂಡು ನಿಂತಿದೆ. ಮಧ್ಯಮ ಪಾಂಡವನು ಮಳಲಲಿಂಗವನ್ನು ಪೂಜಿಸಿ ಪಾಶುಪತಾಸ್ತ್ರ ಪಡೆಯಲು ತಪಸ್ಸು ಮಾಡಿದ್ದು ಇಲ್ಲಿಯ ಇಂದ್ರಕೀಲ ಪರ್ವತದಲ್ಲಿ. ಅಂದಿನ ಮಳಲ ಈಶ್ವರಲಿಂಗುವೇ ಇಂದು ಮಳೆಯ ಮಲ್ಲೇಶ್ವರನೆಂದು ಗುರುತಿಸಲಾಗಿದೆ. ಪಾಂಡವರು ಅಜ್ಞಾತವಾಸದಲ್ಲಿದ್ದಾಗ ಇಲ್ಲಿ ಬಿಡಾರ ಹೂಡಿದ್ದ ‘ಪಾಂಡವರ ವತಾರ’ವೆಂಬ ಸ್ಥಳವನ್ನು ಇಂದಿಗೂ ತೋರಿಸುತ್ತಾರೆ. ಇಲ್ಲಿಯ ಸುಪ್ರಸಿದ್ಧ ಗವಿಸಿದ್ದೇಶ್ವರ ಮಠದ ಮೇಲಿನ ಗುಹೆಗಳಲ್ಲಿ ಶಿಲಾಯುಗದ ಆದಿಮಾನವರ ವರ್ಣರಂಜಿತ ಚಿತ್ರಗಳು ದೊರೆತಿವೆ. ಮೌರ್ಯ ಸಂಪ್ರತಿ, ಚಂದ್ರಗುಪ್ತ, ಶ್ರಮಣರೊಂದಿಗೆ ಬಂದ ಕುರುಹಾಗಿ ಇಂದಿನವರೆಗೆ ಮುಂದುವರೆಯುತ್ತಾ ಬಂದಿದೆ. ಬಹುಶಃ ಲಕ್ಷ್ಮೇಶ್ವರ ದೇಸಾಯಿಯವರಿಗೆ ಗಂಡು ಸಂತಾನವಿಲ್ಲದ್ದಕ್ಕೆ ಶ್ರೀ ವೀರಪ್ಪ ದೇಸಾಯಿಯುವರ ವಂಶಜರನ್ನು ಅಳಿಯುನನ್ನಾಗಿ ಮಾಡಿಕೊಂಡಿರಬಹುದು. ಈ ಲಕ್ಷ್ಮೇಶ್ವರ ಮನೆತನಕ್ಕೆ ಅದೇಕೋ ಗಂಡು ಸಂತಾನವಿರಲಿಲ್ಲವೆಂದು ತಿಳಿದು ಬರುತ್ತದೆ. ಕ್ರಿ.ಶ. ೧೭೯೯ ರಲ್ಲಿ ಕಲಿಕೇರಿ ದೇಸಾಯಿಯವರ ಬ್ರಿಟಿಷರ ವಿರುದ್ಧ ಹೋರಾಡಿದ ಧೋಂಡಿಯಾ ವಾಘನಿಗೆ ತಮ್ಮ ಐರಣಿ ಕೋಟೆಯಿಂದ ಸಹಾಯ ಮಾಡಿದ್ದಾಗಿ ಇತಿಹಾಸದಿಂದ ತಿಳಿದುಬರುತ್ತದೆ.

ಈ ಕಲಕೇರಿ ದೇಸಾಯಿಯವರ ತಮ್ಮ ದೇಸಗತಿಯನ್ನು ಪುನಃ ಔರಂಗಜೇಬನ ಕೊನೆಯ ಕಾಲದಲ್ಲಿ ಅಂದರೆ ಕ್ರಿ.ಶ. ೧೬೮೭ ರಲ್ಲಿ ಪುನಃ ಪಡೆದಿರಬಹುದೆಂದು ತಿಳಿದುಬರುತ್ತದೆ. ಈ ಕಲಕೇರಿ ಪರಗಣೆಯಲ್ಲಿ ಈಗಲೂ

ಅಂದರೆ ೧೯೭೪ರವರೆಗೂ ೨೭ ಗ್ರಾಮಗಳಲ್ಲಿ ದೇಸಗತಿ ಜಮೀನುಗಳ ಪೂರ್ಣ ಇನಾಮ ಆಗಿ ಬಂದ ಬಗ್ಗೆ ಶ್ರೀ ಅಚ್ಚಪ್ಪ ದೇಸಾಯಿ ಕಲಕೇರಿ ಅವರಲ್ಲಿ ಇಂದಿಗೂ ಅವುಗಳ ಬಗ್ಗೆ ಹಿಂದಿನ ರಾಜರ, ನವಾಬರ, ಆದಿಲ್‌ಷಾಹಿ ವಂಶಜರ ನೂರಾರು ಕಾಗದ ಪತ್ರಗಳಿವೆ. ಅವುಗಳನ್ನು ಅಧ್ಯಯನ ಮಾಡಿದಲ್ಲಿ ಈ ಕಲಕೇರಿ ದೇಸಾಯರ ಚರಿತ್ರೆಯ ಮೇಲೆ ಹೊಸ ಬೆಳಕು ಬೀಳಬಹುದು. ಈ ಕಲಕೇರಿ ದೇಸಾಯಿಯವರಿಗೆ ಇನಾಮ ಆಗಿ ಬಂದ ಗ್ರಾಮಗಳೆಂದರೆ ತಿಪ್ಪಾಪೂರ, ಕಲಕೇರಿ, ಹಾರೋಗೇರಿ, ಮುಷ್ಟಿಕೊಪ್ಪ, ತಾಮ್ರಗುಂಡಿ, ಮೇವುಂಡಿ, ಪೇತಾಲೂರ, ಹಳ್ಳಿಕೇರಿ, ವೆಂಕಟಾಪೂರ, ಜಂತ್ಲಿ, ಶಿರೂರ, ಯಕ್ಲಾಸಪುರ, ಬೀಡನಾಳ, ಬೂದಿಹಾಳ, ಮುಂಡರಗಿ, ಜಾಲವಾಡಗಿ, ಶಿರೋಳ, ರಾಮೇನಹಳ್ಳಿ, ಕಕ್ಕೂರ, ನಾಗರಹಳ್ಳಿ, ಹೆಸರೂರ, ಕೊರ್ಲಹಳ್ಳಿ, ಗಂಗಾಪುರ, ಶಿಂಗಟಾಲೂರ, ಬೆಣ್ಣಿಹಳ್ಳಿ, ಮಕ್ತುಂಪುರ, ಶೀರನಹಳ್ಳಿ ಹೀಗೆ ೨೭ ಗ್ರಾಮಗಳಲ್ಲಿ ೩೬೦೦ ಎಕರೆಗಳಷ್ಟು ಜಮೀನು ಹೊಂದಿದ ಬಗ್ಗೆ ಅವರಲ್ಲಿರುವ ಹಳೆಯ ದಾಖಲೆಗಳಿಂದ ತಿಳಿದುಬರುತ್ತದೆ. ೧೯೭೪ ರಲ್ಲಿ ಭೂಸುಧಾರಣಾ ಕಾನೂನಿನಂತೆ ಆ ಎಲ್ಲ ಆಸ್ತಿಗಳು ಭೂ ಹಿಡುವಳಿ ಮಿತಿಗೆ ಒಳಪಟ್ಟು ರೈತರ ತಾಬಾಕ್ಕೆ ಹೋದ ಬಗ್ಗೆ ಹಾಗೂ ೧೯೫೬ ರಿಂದ ೧೯೬೧ ರ ವರೆಗೆ ಮಾರಾಟಗೊಂಡಿದ್ದನ್ನು ದಾಖಲೆಗಳ ಮುಖಾಂತರ ತಿಳಿದುಕೊಳ್ಳಬಹುದು.

ಈ ಕಲಿಕೇರಿ ದೇಸಾಯಿಯವರ ಮನೆತನಕ್ಕೆ ಸುಮಾರು ಐದುನೂರು ವರುಷಗಳಷ್ಟು ಐತಿಹಾಸಿಕ ಹಿನ್ನೆಲೆಯಿದ್ದರೂ ಕೂಡ ಅದರ ಬಗ್ಗೆ ಇತಿಹಾಸಕಾರರು ಹೆಚ್ಚಿಗೆ ಆಸ್ಥೆ ವಹಿಸದೆ ಇರುವುದು, ಅಕ್ಷರ ಪಂಡಿತರು ಇತಿಹಾಸವನ್ನು ತಿರುಚಿ ಬರೆದಿರುವುದೇ ಈ ಮನೆತನದ ಹೆಸರು ಹಿಂದುಳಿಯಲು ಕಾರಣವಾಗಿದೆಯೆಂಬುದನ್ನು ಶ್ರೀ ಅಚ್ಚಪ್ಪ ದೇಸಾಯಿಯವರಲ್ಲಿದ್ದ ಎಲ್ಲ ಹಳೆ ಕಾಗದ ಪತ್ರಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿ ಪ್ರಪಂಚ ಪತ್ರಿಕೆಯಲ್ಲಿ ಉಪಸಂಪಾದಕರೂ ಸುಪ್ರಸಿದ್ಧ ಕಾದಂಬರಿಕಾರರೂ ಕತೆಗಾರರೂ ಆಗಿದ್ದ ಎಂ. ಜೀವನ್‌ರವರು ೧೯೮೮ರ ಪ್ರಪಂಚ ಪತ್ರಿಕೆಯಲ್ಲಿ ಬರೆದಿದ್ದಾರೆ.

ಕೊಪ್ಪಳ ಕೋಟೆಯಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿ ಜಮೀನದಾರ ಶ್ರೀ ವೀರಪ್ಪ ದೇಸಾಯಿ ಅಸಾಮಾನ್ಯ ಶೂರ, ಅಷ್ಟೇ ಸ್ವಾತಂತ್ರ್ಯ ಪ್ರೇಮಿ. ಈ ಜಮೀನದಾರ ದೇಸಾಯಿ ವೀರಪ್ಪನವರನ್ನು ಶ್ರೀಮಂತ ಅಪ್ಪಾಸಾಹೇಬ



ಬಹಾದ್ದೂರ ದೇಸಾಯಿ ಎಂದು ಕರೆಯುತ್ತಿದ್ದರು. ಬ್ರಿಟಿಷರು ಟಿಪ್ಪು ಸುಲ್ತಾನ ಯುದ್ಧದಲ್ಲಿ ಮರಣ ಹೊಂದಿದ ನಂತರ ಮೊದಲೇ ಮಾಡಿಕೊಂಡ ಪ್ರಾದೇಶಿಕ ವ್ಯವಸ್ಥೆಯಂತೆ ಕೊಪ್ಪಳ ಭಾಗವನ್ನು ನಿಜಾಮನಿಗೆ ಒಪ್ಪಿಸಿದ್ದನ್ನು ಕಂಡು ಜಮೀನದಾರ ವೀರಪ್ಪನು ಪರಾಧೀನ ಪರಂಪರೆಯನ್ನು ಪ್ರತಿಭಟಿಸಿ ಬಂಡೆದ್ದು, ಕೊಪ್ಪಳ ಹಾಗೂ ಬಹಾದ್ದೂರ ಬಂಡೆಯ ಕೋಟೆಗಳನ್ನು ಮುತ್ತಿ ತನ್ನ ಆಧೀನಕ್ಕೆ ತೆಗೆದುಕೊಂಡನು. ಈ ಸ್ವಾತಂತ್ರ್ಯಪ್ರೇಮಿ ಶ್ರೀ ವೀರಪ್ಪ ದೇಸಾಯಿಯನ್ನು ಹತ್ತಿಕ್ಕಲು ಬ್ರಿಟಿಷರು ಬಹಳ ಕಷ್ಟ ಪಡಬೇಕಾಯಿತು. ಶ್ರೀ ವೀರಪ್ಪ ದೇಸಾಯಿಗೆ ಬ್ರಿಟಿಷರು ಎಷ್ಟು ಹೆದರಿದ್ದರೆಂದರೆ ಅವರು ಕೈಕೊಂಡ ಕ್ರಮದಿಂದ ತಿಳಿದುಬರುತ್ತದೆ. ಕೊಪ್ಪಳಕ್ಕೆ ಮೇಜರ್ ಡೋವಿಟ್‌ನ ನಾಯಕತ್ವದಲ್ಲಿ ಸಿಕಂದರಾಬಾದನಿಂದ ೨೦೦ ಕುದುರೆಗಳುಳ್ಳ ರಸ್ಸೆಲ್ ಕುದುರೆ ದಳ, ಎರಡು ಬಟಾಲಿಯನ್ ಪದಾತಿ ದಳ, ೯೦೦ ಸುಧಾರಿತ ಸವಾರರು–ಬಲಾಢ್ಯವಾದ ಕೋಟೆಯನ್ನು ಒಡೆಯಲು ಅನೇಕ ೧೮ ಹಾಗೂ ೧೨ ಪೌಂಡ ತೂಕದ ಗುಂಡು ಹೊಡೆವ ತೋಪುಗಳು ಬಂದಿದ್ದವೆಂಬುದನ್ನು ಗಮನಿಸಬೇಕು.

**“**On the 23rd May a force under Major Doveton marched from Secunderabad, composed of the Russell Brigade, consisting of the Russel Cavalary 200 strong, under captain Jones, two battaliansof Infantry unr Captain Hare, with four 6 Pounder guns and two 12 pounder Howitzers, a detachment of Madras Infantry. These troops were joined at the Kalachabutra Ghat, on the Krishna River by a Risala of the Reformed Hourse, 900 strong, under captain Davies, which co-operated with Brigadier- General Pritzler in the attack and capture of Kopaldurga and the seizure of the rebel leader Veerappa**”**.

(Page 90-Koppal in Arms, 1819, History of Freedom Movement in Karnataka Vol 1 Editors : Dr. M.V. Krishna Rao & G.S. Halappa)

ಕೇವಲ ತನ್ನೊಂದಿಗಿದ್ದ ಐದುನೂರು ಯೋಧರೊಂದಿಗೆ ಹೋರಾಡುತ್ತಿದ್ದ ಶ್ರೀ ವೀರಪ್ಪ ದೇಸಾಯಿ ಬ್ರಿಟಿಷರ ಪ್ರಬಲ, ಸುಸಜ್ಜಿತವಾದ ಪಡೆಯನ್ನು ತಡೆದದ್ದು ಬ್ರಿಟಿಷ್ ಸೈನ್ಯಾಧಿಕಾರಿಗಳಿಗೆ ಅಚ್ಚರಿ ಹಾಗೂ ದಿಗ್ಭ್ರಮೆಯನ್ನುಂಟು ಮಾಡಿತ್ತು. ಮದ್ದುಗುಂಡುಗಳು ತೀರುತ್ತ ಬಂದರೂ ಧೈರ್ಯಗೆಡದೆ ದೊಡ್ಡ ದೊಡ್ಡ ಬಂಡೆಗಳನ್ನುರುಳಿಸಿ ಯುದ್ಧ ಮುಂದುವರೆಸಿದನು. ಬ್ರಿಟಿಷ ಸೈನಿಕರಲ್ಲಿ ೫೧ ಜನ ಗಾಯಗೊಂಡರಲ್ಲದೆ ೬ ಜನರು ಕೊಲ್ಲಲ್ಪಟ್ಟರು. ೪–೫ ತಾಸುಗಳವರೆಗೆ ನಡೆದ ಈ ಯುದ್ಧದಲ್ಲಿ ಬ್ರಿಟಿಷರು ತಮ್ಮ ಬಲವಾದ ತೋಪುಗಳನ್ನು ಉಪಯೋಗಿಸಿ ಕೋಟೆ ಗೋಡೆಯ ಒಂದು ಭಾಗದಲ್ಲಿ ಸ್ವಲ್ಪ ಮಟ್ಟಿಗೆ ಒಡೆಯುವದರಲ್ಲಿ ಸಮರ್ಥರಾದರು. ಅನಿವಾರ್ಯವಾಗಿ ಬ್ರಿಟಿಷರ ಸೆರೆಯಾಳಾಗುವುದಕ್ಕಿಂತ ತಪ್ಪಿಸಿಕೊಂಡು ಹೋಗಿ ಮತ್ತೆ ಸೈನ್ಯವನ್ನು ಕಟ್ಟಿ ಹೋರಾಡಬೇಕೆಂಬ ಛಲದಿಂದ ಕುದುರೆಯ ಮೇಲೆ ಕುಳಿತು ಪಾರಾಗುತ್ತಿರುವಾಗ ಆಕಸ್ಮಿಕವಾಗಿ ಗುಂಡೊಂದು ಕಾಲಿಗೆ ಬಡಿದರೂ ಶ್ರೀ ವೀರಪ್ಪ ದೇಸಾಯಿ ಬ್ರಿಟಿಷರ ಸೈನ್ಯಬಲಕ್ಕೆ ಚಳ್ಳೇಹಣ್ಣು ತಿನ್ನಿಸಿ ಪಾರಾದನು. ಮುಂದೆ ಕೆಲದಿನ ಶಿವಪುರದಲ್ಲಿದ್ದು ಅನಂತರ ಕಲಕೇರಿ, ಹಮ್ಮಿಗಿ, ಮುಂಡವಾಡ, ಬಿದರಹಳ್ಳಿ, ಕೆಲೂರಿನಲ್ಲಿ ಯೋಧರ ಪಡೆಯೊಂದನ್ನು ಕಟ್ಟಿಕೊಂಡು ಕಿತ್ತೂರಿಗೆ ಹೋಗಿ ಶ್ರೀ ಪ್ರತಾಪರಾವ ಶ್ರೀ ಮಲ್ಲಸರ್ಜನ ದೊರೆಯಲ್ಲಿ ಸೇರಿಕೊಂಡನು. ಶ್ರೀ ಮಲ್ಲರುದ್ರಸರ್ಜರ ನಿಧನಾನಂತರ ಕಿತ್ತೂರ ವೀರರಾಣಿ ಚೆನ್ನಮ್ಮನೊಂದಿಗೆ ಹೋರಾಟ ಮಾಡಿದ್ದಾಗಿ ಐತಿಹ್ಯವಿದೆ. ಅಷ್ಟೇ ಅಲ್ಲದೇ ಕಿತ್ತೂರ ಚೆನ್ನಮ್ಮನ ತವರುಮನೆ ಕಾಗತಿ ದೇಸಾಯಿಯವರಿಗೂ ಶ್ರೀ ವೀರಪ್ಪ ದೇಸಾಯಿಯವರಿಗೆ ರಕ್ತ ಸಂಬಂಧವಿತ್ತು. ಇನ್ನು ಶ್ರೀ ವೀರಪ್ಪ ದೇಸಾಯಿಯವರ ಬಗ್ಗೆ ಹೆಚ್ಚಿನ ಸಂಶೋಧನೆ ಆಗುವುದು ಅವಶ್ಯವಿದೆ.

ಈ ಮೊದಲೆ ಬ್ರಿಟಿಷರೊಂದಿಗೆ ಬಂಡೆದ್ದು ಹೋರಾಡುವ ಬಗ್ಗೆ ಅನೇಕರೊಂದಿಗೆ ಪತ್ರ ವ್ಯವಹಾರವನ್ನು ಈ ಶ್ರೀ ವೀರಪ್ಪ ದೇಸಾಯಿ ಮಾಡಿದ್ದರು. ಸೋದರರನಾದ ಕಲಕೇರಿ, ತಿಪ್ಪಾಪೂರ ದೇಸಾಯಿ ಶ್ರೀ ಸೋಮನಗೌಡ ಬಹಾದ್ದೂರ ದೇಸಾಯರು ಸೈನಿಕ ಸಹಾಯ ಕಳಿಸಿದರೂ ಬ್ರಿಟಿಷರು ಅದನ್ನು ಮಧ್ಯದಲ್ಲಿ ತಡೆ ಹಿಡಿದುದಾಗಿ ತಿಳಿದು ಬರುತ್ತದೆ. ಮದ್ರಾಸಿನಿಂದ ಕಳಿಸಲ್ಪಟ್ಟ ಸೈನ್ಯದ ಒಂದು ತುಕಡಿಯು ಕೊಪ್ಪಳದಿಂದ ಕೆಲವೇ ಮೈಲುಗಳ ಅಂತರದಲ್ಲಿರುವ



ಆಳವಂಡಿಯ ಹತ್ತಿರ ಹೈದ್ರಾಬಾದ ಕಂಟೇಜಂಟ್ ಸೈನ್ಯದೊಂದಿಗೆ ಬೀಡಾರ ಹೂಡಿತ್ತು. ಈ ಸೈನ್ಯವು ಸೋವೇನಹಳ್ಳಿ ಹೆಸರೂರ ರಸ್ತೆ ಮಾರ್ಗವಾಗಿ ಬಂದಿತ್ತು. ಆಗ ಇದಕ್ಕೆ ಗದಗ, ಹೆಸರೂರ, ಬಳ್ಳಾರಿ, ಪುನಾರಸ್ತೆಯೆಂದು ಕರೆಯುತ್ತಿದ್ದರೆಂದು ತಿಳಿದುಬಂದಿದೆ. ಈ ತುಕಡಿ ಆಳವಂಡಿಯಲ್ಲಿ ಬೀಡು ಬಿಡಲು ಬಹುಶಃ ಕಲಕೇರಿ, ತಿಪ್ಪಾಪೂರ, ಹನಕನಹಳ್ಳಿ ದೇಸಾಯರಿಂದ ಬರಬಹುದಾಗಿದ್ದ ಸೈನ್ಯವನ್ನೇ ತಡೆಯುವ ಮುಂಧೋರಣೆಯಾಗಿರಬೇಕು.

ಮುಂಡರಗಿ ತಾಲೂಕಿನ ಕಲಕೇರಿ, ತಿಪ್ಪಾಪೂರ ದೇಸಾಯಿಯವರ ಪೂರ್ವಜರು ವಿಜಯನಗರದ ಅರಸರ ಕಾಲದಿಂದಲೂ ಸಾಮಂತ ದೊರೆಗಳಾಗಿದ್ದರೆಂದೂ ಹಂಪಿಯಲ್ಲಿ ಶ್ರೀ ಅಚ್ಚಪ್ಪ ದೇಸಾಯಿಯವರು ಮಾಡಿದ ಲಡಾಯಿ ಎಂಬ ಆ ಕಾಲದ ಅರಸರ ಮುದ್ರೆಯುಳ್ಳ ಹಳೆಯ ಕಾಗದ ಪತ್ರಗಳ ಮುಖಾಂತರ ತಿಳಿದುಬರುತ್ತದೆ. ನಿಜಾಂರಿಂದಲೂ ಆದಿಲ್‌ಶಾಹಿಗಳಿಂದಲೂ ಇತರ ವಿವಿಧ ಭಾಗಗಳಲ್ಲಿದ್ದ ದೇಸಾಯಿ–ದೇಶಮುಖರಿಂದಲೂ ಬ್ರಿಟಿಷ ವಿಕ್ಟೋರಿಯಾ ಮಹಾರಾಣಿ ಬರೆದ ಅನೇಕ ಕಾಗದ ಪತ್ರಗಳು ಈ ದೇಸಾಯಿಯವರ ವಂಶಜರಾದ ಶ್ರೀ ಅಚ್ಚಪ್ಪ ದೇಸಾಯಿಯವರಲ್ಲಿ ಸಾವಿರಾರು ಸಂಖ್ಯೆಯಲ್ಲಿವೆ. ಅವುಗಳ ಅಧ್ಯಯನದಿಂದ ಈ ದೇಸಾಯಿಯವರ ಇತಿಹಾಸದ ಮೇಲೆ ಹೊಸಬೆಳಕು ಬೀಳಲು ಸಾಧ್ಯವಿದೆ. ಈ ಕಲಕೇರಿ ದೇಸಾಯಿಯವರಿಗೆ ಬ್ರಿಟಿಷರೊಂದಿಗೆ ಹೋರಾಡುವ ಪ್ರಸಂಗಗಳೇ ಬರಲಿಲ್ಲ. ಇವರಿಗೆ ಸಂತಾನದ ಕೊರತೆಯಿರಲಿಲ್ಲ. ಈ ಕಲಕೇರಿ ದೇಸಾಯಿಯವರ ಸಂಬಂಧಿಕರು ಕೇವಲ ಕರ್ನಾಟಕದಲ್ಲಷ್ಟೇ ಅಲ್ಲ, ಆಂಧ್ರ, ಮಹಾರಾಷ್ಟ್ರಗಳಲ್ಲಿ ಕೂಡ ಇದ್ದಾರೆ. ತುಮಕೂರ ಜಿಲ್ಲಾ ಗುಬ್ಬಿ ತಾಲೂಕಾ ಹಾಗಲವಾಡಿ ಪಾಳೇಗಾರರು, ಆಂಧ್ರದ ಉರುವಕೊಂಡ ತಾಲೂಕಿನ ಗಡೇಹೋತರ ದೇಸಾಯಿ, ದೇಶಮುಖರು, ಮಹಾರಾಷ್ಟ್ರದ ಅಕ್ಕಲಕೋಟ ದೇಶಮುಖರು, ತೇರಣಿ ದೇಸಾಯರು, ಕರ್ನಾಟಕದಲ್ಲಿ ಮುಮ್ಮಿಗಟ್ಟಿ, ನರೇಂದ್ರ, ಕಾಗತಿ, ಶಿರಹಟ್ಟಿ, ಉಡಕೇರಿ, ಹನಸಿಗೌಡರು ಇವರೆಲ್ಲರೊಂದಿಗೆ ಬಂಧುತ್ವ ಬೀಗತನ ಇಂದಿಗೂ ಇದೆ. ಇಷ್ಟೊಂದು ಬಳಗವನ್ನು ಹೊಂದಿರುವ ಈ ಕಲಕೇರಿ ದೇಸಾಯಿಯವರ ಬಂಧುಗಳಲ್ಲಿ ಆಸ್ತಿಯ ಬಗೆಗೆ ವಾದ ಉಂಟಾದಾಗ ಕಲಕೇರಿಯ

ಶ್ರೀ ಮುದುಕನಗೌಡ್ರು, ಪಾಟೀಲ, ಶ್ರೀ ಸಿದ್ದಲಿಂಗಪ್ಪನವರು ದೇಸಾಯಿಯವರು ಹಾಗೂ ದೇವಗಿರಿ ಲಕ್ಕಶೆಟ್ಟರು ಕೂಡಕೊಂಡು ಹಿಸೆ ಮಾಡಿಕೊಟ್ಟೆವು. ಆದರೆ ಕಲಕೇರಿಯ ಶ್ರೀ ಅಚ್ಚಪ್ಪ ದೇಸಾಯರು ಹಿಸೆ ತೆಗೆದುಕೊಳ್ಳದೆ ತಮ್ಮ ತಂದೆ ಶ್ರೀ ಕೊಟ್ರಪ್ಪನರಿಗೆ ಇದ್ದ ಆಸ್ತಿಯನ್ನು ತೆಗೆದುಕೊಂಡರು. ಈ ಆಸ್ತಿಯ ನ್ಯಾಯವು ನೂರಾರು ವರುಷಗಳಿಂದ ಇದ್ದುದನ್ನು ರಾಜೀ ಮಾಡಿ ಹಂಚಿಕೊಡಲಾಯಿತು.

ಈ ಕಲಿಕೇರಿ ತಿಪ್ಪಾಪೂರ ವಂಶಸ್ಥರು ಕಲಕೇರಿ, ತಿಪ್ಪಾಪುರ, ಬೂದಿಹಾಳ, ಮುಂಡರಗಿಯಲ್ಲಿ ಇದ್ದಾರೆ. ಕಲಿಕೇರಿಯಲ್ಲಿ ಶ್ರೀ ಅಚ್ಚಪ್ಪ ಕೊಟ್ರಪ್ಪ ದೇಸಾಯಿ, ಶ್ರೀ ರಾವಸಾಹೇಬ ಸೂರಪ್ಪ ದೇಸಾಯಿ, ಶ್ರೀ ರಾವಸಾಹೇಬ ಕೊಟ್ರಪ್ಪ ದೇಸಾಯಿ, ಶ್ರೀ ಲಿಂಗಪ್ಪ ಬಸವಂತರಾವ ದೇಸಾಯಿ, ಶ್ರೀ ಬಾಬಾ ಸಾಹೇಬ ಬಸವಂತರಾವ ದೇಸಾಯಿ ವಾಸವಾಗಿದ್ದರೆ, ತಿಪ್ಪಾಪುರದಲ್ಲಿ ಶ್ರೀ ಅಣ್ಣಾ ಸಾಹೇಬ ಸೂರಪ್ಪ ಮೊದಲಾದವರು ಬೂದಿಹಾಳದಲ್ಲಿ ಶ್ರೀ ಬಸವಂತರಾವ ದೇಸಾಯಿ, ಮುಂಡರಗಿಯಲ್ಲಿ ಈ ಗಿರಿಯಪ್ಪ ಬಸವಂತರಾವ ದೇಸಾಯಿ, ಶ್ರೀ ಕೊಟ್ರಪ್ಪ ಅಚ್ಚಪ್ಪ ದೇಸಾಯಿ ವಾಸವಾಗಿದ್ದಾರೆ.

ಶ್ರೀ ಅಚ್ಚಪ್ಪ ಕೊಟ್ರಪ್ಪ ದೇಸಾಯಿಯವರು ೧೯೪೨–೪೩ ರಲ್ಲಿ ಧಾರವಾಡದಲ್ಲಿ ವಿದ್ಯಾರ್ಥಿಗಳಾಗಿರುವಾಗ ಮಹಾತ್ಮಾ ಗಾಂಧೀಜಿಯವರ ಭಾರತ ಛೋಡೋ ಚಳುವಳಿ (Quit India Movement) ಯಲ್ಲಿ ಭಾಗವಹಿಸಿ ಬಂಧನಕ್ಕೊಳಗಾದರು. ಆದರೆ ಆಗ ಅಲ್ಲಿ ಇವರ ಬೀಗರೇ ಆದ ಕಾಗತಿ ದೇಸಾಯಿಯವರೇ ಪಿ.ಎಸ್.ಆಯ್. ಇದ್ದುದರಿಂದ ತಿಳಿಹೇಳಿ ಬಿಟ್ಟರೆಂದು ಹೇಳಲಾಗುತ್ತದೆ. ಈ ಕಲಿಕೇರಿಯ ಶ್ರೀ ಅಚ್ಚಪ್ಪ ದೇಸಾಯಿಯವರ ಜೇಷ್ಠ ಪುತ್ರರು ಶ್ರೀ ಕೊಟ್ರಪ್ಪ ದೇಸಾಯಿಯವರು. ಇವರು ಗದಗ ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿ ಉಪತಹಶೀಲದಾರ ಹುದ್ದೆಯಲ್ಲಿದ್ದಾರೆ. ಈ ಹಿಂದೆ ೧೯೯೪ ರಲ್ಲಿ ಶ್ರೀ ಕೊಟ್ರಪ್ಪ ದೇಸಾಯರು ಸಣ್ಣ ಉಳಿತಾಯ ಅಧಿಕಾರಿಗಳೆಂದು ಮುಂಡರಗಿ ತಾಲೂಕಿನಲ್ಲಿ ಕಾರ್ಯ ಮಾಡುತ್ತಿರುವಾಗ ಸಾಹಸದ ಘಟನೆಯೊಂದು ಜರುಗಿದ್ದು ಅಂದು ಆ ಸ್ಥಳದಲ್ಲಿದ್ದವರ ಮನದಲ್ಲಿ ಅಚ್ಚೊತ್ತಿದೆ.

ಶಿಂಗಟಾಲೂರ ಬಳಿ ಡೋಣಿ ದುರಂತದ ದುರ್ಘಟನೆ ಜರುಗಿದ ಸಂದರ್ಭದಲ್ಲಿ ಅಂದು ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಶ್ರೀ ವೀರಪ್ಪ ಮೊಯಿಲಿ,



ಆಗ ಸಹಕಾರ ಸಚಿವರಾಗಿದ್ದ ಮಾನ್ಯ ಶ್ರೀ ಎಸ್.ಎಸ್. ಪಾಟೀಲ ಹೂವಿನಹಡಗಲಿಯ ಶಾಸಕರೂ ಮಾಜಿ ಸಚಿವರೂ ಆಗಿದ್ದ ಮಾನ್ಯ ಶ್ರೀ ಶಂಭುನಾಥ ಈಟಿ, ಧಾರವಾಡ ಜಿಲ್ಲಾಧಿಕಾರಿ ಶ್ರೀ ಆರ್.ಬಿ. ಆಗವಾನೆ, ಪೊಲೀಸ ಜಿಲ್ಲಾ ವರಿಷ್ಠಾಧಿಕಾರಿಗಳಾಗಿದ್ದ ಶ್ರೀ ಕೆಂಪಯ್ಯ ಮೊದಲಾದವರು ನಾಡ ಡೋಣಿಯಲ್ಲಿ ತುಂಗಭದ್ರಾ ಹೊಳೆಯ ದಕ್ಷಿಣ ಭಾಗದ ದಂಡೆಯಿಂದ ಉತ್ತರ ದಿಕ್ಕಿನೆಡೆ ದುರಂತ ಸ್ಥಳದ ಪರಿಶೀಲನೆಗೈಯುತ್ತಿರುವಾಗ ಹೊಳೆಯ ಮಧ್ಯದಲ್ಲಿ ಜನಭಾರದಿಂದ ಡೋಣಿ ಒಂದೆಡೆ ಹೊರಳಿದಾಗ ಅನೇಕ ಅಧಿಕಾರಿಗಳೊಂದಿಗೆ ತಮ್ಮ ಸಹೋದ್ಯೋಗಿಗಳೊಂದಿಗೆ ನಿಂತಿದ್ದ ಶ್ರೀ ಕೊಟ್ರಪ್ಪ ದೇಸಾಯಿಯವರು ತಮ್ಮ ಮೈಮೇಲಿದ್ದ ಬಟ್ಟೆಯನ್ನು ಕಳಚಿದವರೇ ತುಂಬಿದ ಹೊಳೆಯಲ್ಲಿ ಮುಳುಗಲಿರುವ ಜಿಲ್ಲಾಧಿಕಾರಿಗಳನ್ನು ಕೈಹಿಡಿದುಕೊಂಡು ಧೈರ್ಯದಿಂದ ಈಜುತ್ತ ಜೀವ ರಕ್ಷಣೆಗೆ ಮುಂದಾಗಿದ್ದನ್ನು ನೆನೆದಾಗ ಇವರ ಪೂರ್ವಜರಲ್ಲಿದ್ದ ಧೈರ್ಯ, ಸಾಹಸ, ಶೌರ್ಯಗಳೇ ಇವರಲ್ಲಿ ಉದ್ಭವಿಸಿದುವೆಂದು ಹೇಳಿದರೆ ತಪ್ಪಾಗಲಾರದು. ಶ್ರೀ ಕೊಟ್ರಪ್ಪ ದೇಸಾಯಿಯವರ ಪ್ರಸಂಗವಧಾನದಿಂದಾಗಿ ಮುಂದೊಗ ಬಹುದಾಗಿದ್ದ ದುರಂತವೊಂದು ತಪ್ಪಿತೆಂದು ಅಂದು ಎಲ್ಲರೂ ಶ್ಲಾಘಿಸಿದರು.

ಈ ಕಲಿಕೇರಿ, ತಿಪ್ಪಾಪೂರ ದೇಸಾಯರಾಗಿರುವ ಶ್ರೀ ಅಚ್ಚಪ್ಪ ಕೊಟ್ರಪ್ಪ ದೇಸಾಯಿಯವರಲ್ಲಿ ಇರುವ ಹಳೆಯ ಕಾಗದ ಪತ್ರಗಳ ಬಗ್ಗೆ ತೀವ್ರ ಪರಿಶೀಲನೆ ನಡೆಸಿ ಸಂಶೋಧನೆ ಕೈಕೊಂಡಲ್ಲಿ ಮುಂಡರಗಿ ತಾಲೂಕಾ ಸ್ವಾತಂತ್ರ್ಯ ಸಂಗ್ರಾಮಕ್ಕೊಂದು ಹೊಸ ಆಯಾಮ ಬರಬಹುದು. ನಮ್ಮ ನಾಡಿನ ಇತಿಹಾಸ ತಜ್ಞರು ವಿದ್ವಾಂಸರು, ಸಂಶೋಧಕರು ಈ ನಿಟ್ಟಿನಲ್ಲಿ ಮುಂದುವರೆಯಲಿ ಎಂದು ಹಾರೈಸುತ್ತೇವೆ.

❖ ❖ ❖

## ಗ್ರಂಥ ಋಣ


೧. ಮಾಲಿಂಗ ಯಾಳಗಿ (ಸಂ), ಮುಂಡರಗಿ ನಾಡ ಸ್ವಾತಂತ್ರ್ಯ ಸಂಗ್ರಾಮ, ತಾಲೂಕಾ ಸ್ವಾತಂತ್ರ್ಯ ಯೋಧರ ಸಂಘ ಮುಂಡರಗಿ .

೨. ಹು.ಬಾ. ವಡ್ಡಟ್ಟಿ, ಮುಂಡರಗಿ ಬ್ರಿಟಿಷ್ ವಿರೋಧಿ ಹೋರಾಟ, ಲಡಾಯಿ ಪ್ರಕಾಶನ ಗದಗ.

೩. ಪ್ರಾ. ಚಂದ್ರಶೇಖರ ವಸ್ತ್ರದ, ಡಾ. ಅರ್ಜುನ ಗೊಳಸಂಗಿ (ಸಂ), ಕೃತಪುರ, ಕನ್ನಡ ಸಾಹಿತ್ಯ ಪರಿಷತ್ತು, ಗದಗ.

೪. ನೀ.ಕೃ. ರಾಮಶೇಷನ್, ಕರ್ನಾಟಕದ ಕೋಟೆ ಕೊತ್ತಲುಗಳು, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.


### ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
### ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳೆಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |

| | | | |
|---|---|---|---|
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |



| | | | |
|---|---|---|---|
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |

| | | | |
|---|---|---|---|
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |

❖ ❖ ❖